# ದೇವರು ನನ್ನನ್ನು ಸಂಚಯಿತನನ್ನಾಗಿ ಮಾಡುತ್ತಾರೆ ಎಂದು ನಾನು ನಿರೀಕ್ಷಿಸುತ್ತೇನೆ

ಹ್ಯಾರೊಲ್ಡ್ ಕ್ಯಾಂಪಿಂಗ್ ಅವರಿಂದ



ದೇವರು ನನ್ನನ್ನು ಸಂಚಯಿತನನ್ನಾಗಿ ಮಾಡುತ್ತಾರೆ ಎಂದು ನಾನು ನಿರೀಕ್ಷಿಸುತ್ತೇನೆ

**(**Kannada: **I Hope God Will Save Me)**

ಹ್ಯಾರೊಲ್ಡ್ ಕ್ಯಾಂಪಿಂಗ್ ಅವರಿಂದ

ಪ್ರಕಾಶನ ಮತ್ತು ಮುದ್ರಣ ಇವರಿಂದ;

ಫ್ಯಾಮಿಲಿ ಸ್ಟೇಷನ್ಸ್, ಇಂಕ್.

ಓಕ್ ಲ್ಯಾಂಡ್, ಕ್ಯಾಲಿಪೋರ್ನಿಯಾ 94621

www.familyradio.com

(ಟಿಪ್ಪಣಿ: ಪ್ರಕಾಶನದಲ್ಲಿ ಉಲ್ಲೇಖಿಸಿದ ಎಲ್ಲಾ ಧರ್ಮಗ್ರಂಥದ ಉಕ್ತಿಗಳು ಕಿಂಗ್ ಜೇಮ್ಸ್ ರ ಅಧಿಕೃತ ಬೈಬಲ್ ನ ಆವೃತ್ತಿಯಿಂದಾಗಿದೆ.)

**06-11-09**

# ಪರಿವಿಡಿ


ಪರಿಚಯ ........................................................................ .v

ದೇವರು ನನ್ನನ್ನು ಸಂಚಯಿತನನ್ನಾಗಿ ಮಾಡುತ್ತಾರೆ ಎಂದು

ನಾನು ನಿರೀಕ್ಷಿಸುತ್ತೇನೆ ........................................................ 1

ಯಾರನ್ನಾದರು ಸಂಚಯಿತನನ್ನಾಗಿ ಮಾಡಲು ದೇವರು ಏನು ಮಾಡಬೇಕಿತ್ತು?.......... 3

ದೇವರಿಂದ ಆಯ್ಕೆಯಾದವರು ................................................ 4

ಆಯ್ಕೆಯಾದವರನ್ನು ಕ್ರಿಸ್ತರಿಗೆ ಕೊಡಲಾಯಿತು ..................................... 6

ಪಾಪ ಹೊರುವವರು ................................................................ 6

ದೇವರು ನಾಶ ಮಾಡಲು ಸಾಧ್ಯವಾಗದಂತಹ  ಇನ್ನೂ ಸಂಚಯಿತರಾಗದ ಅಸಂಖ್ಯಾತ

ಜನರು ............................................................................ 8

ಸ್ವಭಾವತಃ ಎಲ್ಲಾ ಮನುಷ್ಯರು ಆಧ್ಯಾತ್ಮಿಕವಾಗಿ ಸತ್ತಿರುವರು ........................... 9

ನಮಗೆ ಒಂದು ಹೊಸ ಆತ್ಮವನ್ನು ನೀಡಬೇಕು ............................................ 11

ಆಯ್ಕೆಯಾದವರ ಮುಕ್ತಿಯ ನಿಜಸ್ಥಿತಿ ................................................ 13

ಹೊಸ ಹುಟ್ಟಿನ ಪವಾಡ ........................................................ 14

ಬೈಬಲ್ ನ ಅನುಸಾರ ಆಧ್ಯಾತ್ಮಿಕ ಕೆಲಸದ ವ್ಯಾಖ್ಯೆ. .................................... 16

ನಮ್ಮ ಮುಕ್ತಿಗೆ ಅಗತ್ಯವಿರುವ ಎಲ್ಲಾ ಕೆಲಸವನ್ನು ಕ್ರಿಸ್ತರು ಮಾಡಿದರು ............... 17

ಹಾಗಾದರೆ ದೇವರು ನಮಗೆ ಈ ಆಜ್ಞೆಗಳನ್ನು ಏಕೆ ನೀಡುತ್ತಾರೆ?.......................... 18

ಮನುಕುಲದೊಂದಿಗೆ ದೇವರ ರಹಸ್ಯಮಯ ಸಂಬಂಧ ...................................... 19

ದೇವರು ಮನುಕುಲವನ್ನು ಪರೀಕ್ಷೆ ಮಾಡುತ್ತಾರೆ ............................................ 22

ಏಳನೆ ದಿನದ  ಸಬ್ಬತ್‌ನ ಅತಿ ಹೆಚ್ಚಿನ ಪ್ರಾಮುಖ್ಯತೆ........................................ 23

ದೇವರ ಪರೀಕ್ಷಣ ಕಾರ್ಯಕ್ರಮದ ಅನುಗ್ರಹಗಳು ............................................ 25

ದೇವರು ತನ್ನ ಪರೀಕ್ಷಣ ಕಾರ್ಯಕ್ರಮವನ್ನು ಇನ್ನೂ ಹೆಚ್ಚು ಕಠಿಣಗೊಳಿಸುತ್ತಾರೆ .... 26

ನಾವು ಬೈಬಲ್ ಅನ್ನು ಆಲಿಸಿಯೂ ಆಲಿಸದೆ ಇರಲು ಸಾಧ್ಯವೆ?.......................29

ಧರ್ಮಗ್ರಂಥದೊಂದಿಗೆ ಧರ್ಮಗ್ರಂಥವನ್ನು ಹೋಲಿಸಿ ........................................ 31

ದೇವರನ್ನು ಮೊರೆಹೋಗಬೇಕೆಂದು ಎಲ್ಲಾ ಮನುಷ್ಯರಿಗೆ ಆಜ್ಞಾಪಿಸಲಾಗಿದೆ............. 33

ನಂಬುವ ಕೆಲಸ ................................................................ 35

ದೇವರನ್ನು ನಂಬಬೇಕೆಂದು ಎಲ್ಲಾ ಮನುಷ್ಯರಿಗೆ ಆಜ್ಞಾಪಿಸಲಾಗಿದೆ ......................38

ಕ್ರಿಸ್ತರು ನಿಷ್ಠಾವಂತರಾಗಿದ್ದರು-ನಮ್ಮನ್ನು ಸಂಚಯಿತರನ್ನಾಗಿ ಮಾಡಲು –

ಎಲ್ಲ ಕೆಲಸ ಮಾಡಿದರು......................................................................39

ಮುದ್ರಿಕೆ ಹಾಕುವುದು ಯಾವಾಗಲೂ ದೇವರ ಕೆಲಸ........................................40

ವಿರಳವಾಗಿ, ಅನುವಾದಕ್ಕೆ ತಿದ್ದುಪಡಿ ಮಾಡಬೇಕು........................................41

ಅಬ್ರಹಾಮನು ದೇವರನ್ನು ನಂಬಿದ ಕಾರಣ ಸಂಚಯಿತನಾದನೆ?..........................44

ನಾವು ಕ್ರಿಸ್ತರನ್ನು ನಂಬಿದಾಗ ಆತ ನಮ್ಮನ್ನು ಸಂಚಯಿತರನ್ನಾಗಿ ಮಾಡಬಹುದು .....46

"ನಂಬಿಕೆ" ಪದವನ್ನು ಅರ್ಥಮಾಡಿಕೊಳ್ಳುವುದರಲ್ಲಿ ಗೊಂದಲ............................48

ಸೈತಾನನು ಬೆಳಕಿನ ದೇವದೂತನಾಗಿ ಬರುತ್ತಾನೆ ..........................................50

ಕ್ರೈಸ್ತದೇವಾಲಯಗಳನ್ನು ಪರಿಶುದ್ಧವಾಗಿಡಲು ಸಾಧ್ಯವಿತ್ತೆ?............................53

ಒಂದು ಬಲವಾದ ಪರಿವರ್ತನೆ.................................................................54

ಸಂಚಯಿತನಾದ ವ್ಯಕ್ತಿ ಸಂಚಯಿತವಾಗದ ದೇಹದಲ್ಲಿ ಬದುಕುತ್ತಾನೆ.....................56

ಸಂಚಯಿತನಾದ ವ್ಯಕ್ತಿಯ ಆಸೆಗಳು..........................................................57

ಭಯ .............................................................................................59

ಆದರೆ ಪರಿಪೂರ್ಣ ಪ್ರೀತಿ ಭಯವನ್ನು ಹೊರಹಾಕುತ್ತದೆ ..................................61

ನನಗೆ ಭರವಸೆ ಇದೆಯೆ?......................................................................64

**ಧರ್ಮಗ್ರಂಥ ಸೂಚಿ...................................................................... 72**

# ಪರಿಚಯ

"ನಾನು ಸಂಚಯಿತನಾಗಲು ಬಯಸುತ್ತೇನೆ" ಎಂದು ಅನೇಕ ಜನರು ಹೇಳುತ್ತಾರೆ. ಆದ್ದರಿಂದ, ಈ ಕಿರು ಪುಸ್ತಕದಲ್ಲಿ, "ಸಂಚಯಿತನಾಗಲು ನಾನು ಏನು ಮಾಡಬೇಕು?" ಎಂಬ ಪ್ರಶ್ನೆಯನ್ನು ಸಂಪೂರ್ಣ ಪ್ರಾಮಾಣಿಕತೆಯಿಂದ ಎದುರಿಸಲು ನಾವು ಪ್ರಯತ್ನಿಸುತ್ತೇವೆ. ಏಕೆಂದರೆ, ಸಂಚಯಿತರಾಗಲು ಯಾರೂ ಏನೂ ಮಾಡಲು ಸಾಧ್ಯವಿಲ್ಲ ಎಂದು ನಾವು ಕಲಿಯುತ್ತೇವೆ ಮತ್ತು ಪರಿಸ್ಥಿತಿ ಹದಗೆಟ್ಟಿದೆ ಮತ್ತು ಯಾರೂ ಸಂಚಯಿತರಾಗುವುದಿಲ್ಲ ಎಂದು ತೀರ್ಮಾನಿಸುವ ಅನೇಕ ಓದುಗರನ್ನು ಇದು ಬೇಗನೆ ಎದೆಗುಂದಿಸುತ್ತದೆ. ಆದರೆ, ಸತ್ಯವೆಂದರೆ, ನಮ್ಮ ದಿನದಲ್ಲಿ ಜನರು ಸಂಚಯಿತರಾಗುವ ಪರಿಸ್ಥಿತಿ ಹದಗೆಟ್ಟಿಲ್ಲ. ನಿಜವಾಗಿಯೂ, ನಾವು ಬೈಬಲ್ ಅನ್ನು ಜಾಗರೂಕತೆಯಿಂದ ಅಧ್ಯಯನ ಮಾಡುವಾಗ, ಚರಿತ್ರೆಯ ಈ ಕಾಲದಲ್ಲಿ ಸಂಚಯಿತರಾಗುತ್ತಿರುವ ಜನರ ದೊಡ್ಡ ಸುಗ್ಗಿ ನಡೆಯುತ್ತಿದೆ ಎಂದು ಬೈಬಲ್ನ ಪುರಾವೆ ತೋರಿಸುತ್ತದೆ ಎಂದು ನಾವು ಕಾಣುತ್ತೇವೆ.

ಬೈಬಲ್ ನ ಪುರಾವೆ ಏನೆಂದರೆ, ಚರಿತ್ರೆಯ ಯಾವುದೇ ಕಾಲಕ್ಕಿಂತ ನಮ್ಮ ದಿನದಲ್ಲಿ ಅಧಿಕ ಜನರು ಸಂಚಯಿತರಾಗುತ್ತಿದ್ದಾರೆ. ಆದರೆ ಯಾವುದೇ ಸ್ಥಳೀಯ ಕ್ರೈಸ್ತದೇವಾಲಯದ ಅಥವ ಸ್ಥಳೀಯ ಕ್ರೈಸ್ತಸಭೆಯ ಮುಕ್ತಿಯ ಯೋಜನೆಯನ್ನು ಅನುಸರಿಸುವ ಯಾವುದೇ ಸುವಾರ್ತಾಬೋಧಕನ ಮುಕ್ತಿಯ ಯೋಜನೆಯನ್ನು ಅನುಸರಿಸಿ ಅವರು ಸಂಚಯಿತರಾಗುತ್ತಿಲ್ಲ. ದೇವರ ಮುಕ್ತಿಯ ಕಾರ್ಯಕ್ರಮವನ್ನು ಬೋಧಿಸುವವರು, ಬೈಬಲ್ ನಲ್ಲಿರುವಂತೆ, ದೇವರಿಂದ ಸ್ಥಾಪಿಸಲಾದ ಮುಕ್ತಿಯ ಯೋಜನೆಗೆ ಅತ್ಯಂತ ನಿಷ್ಠಾವಂತರಾಗಿ ಆ ಕೆಲಸವನ್ನು ಮಾಡುವುದು ಅತಿ ಮುಖ್ಯವಾದುದು ಎಂದು ನಾವು ಕಲಿಯಲಿದ್ದೇವೆ.

# ದೇವರು ನನ್ನನ್ನು ಸಂಚಯಿತನನ್ನಾಗಿ ಮಾಡುತ್ತಾರೆ ಎಂದು ನಾನು ನಿರೀಕ್ಷಿಸುತ್ತೇನೆ

ಸುಮಾರು 13,000 ವರ್ಷಗಳ ಹಿಂದೆ ದೇವರು ಈ ಜಗತ್ತನ್ನು ಸೃಷ್ಟಿಸಿದರು. ಆ ಸಮಯದಲ್ಲಿ, ನಮ್ಮ ಮೊದಲ ತಂದೆ-ತಾಯಿಯಾದ ಆದಾಮ ಮತ್ತು ಹವ್ವರೊಂದಿಗೆ ಪ್ರಾರಂಭಿಸಿ, ಆತ ತನ್ನ ಸ್ವರೂಪದಲ್ಲಿ ಮತ್ತು ತನ್ನ ಯಥಾಪ್ರತಿಯಾಗಿ ಮನುಷ್ಯನನ್ನು ಸೃಷ್ಟಿಸಿದರು. ಆದರೆ, ಮನುಕುಲ ದೇವರ ವಿರುದ್ಧ ದಂಗೆ ಎದ್ದಿತು, ಮತ್ತು ಅದಕ್ಕೆ ಶಿಕ್ಷೆಯಾಗಿ, ಸಂಪೂರ್ಣ ಮನುಕುಲ ದೇವರ ಕಡುಕೋಪಕ್ಕೆ ಪಾತ್ರವಾಯಿತು. ಈ ದಂಗೆಕೋರತನ ಎಷ್ಟು ಗಂಭೀರವಾಗಿತ್ತು ಎಂದರೆ, ದೇವರ ನಿಯಮದ ಪ್ರಕಾರ ಮನುಷ್ಯನು ದೇವರೊಂದಿಗೆ ತನ್ನ ಶಾಶ್ವತ ಅಸ್ತಿತ್ವವನ್ನು ಕಳೆದುಕೊಳ್ಳುವನು ಮಾತ್ರವಲ್ಲದೆ ಈ ಭೂಮಿಯ ಅಸ್ತಿತ್ವದ ಕೊನೆಯ ದಿನದಂದು, ಅವನ ದೇಹ ಮತ್ತು ಆತ್ಮ, ಎರಡನ್ನೂ ನಾಶಗೊಳಿಸುವ ಮೂಲಕ ಅವನನ್ನು ಶಾಶ್ವತವಾಗಿ ನಾಶಗೊಳಿಸಲಾಗುವುದು. ಆದ್ದರಿಂದ, "ನನಗೆ, ನಿರಂತರ ವಿನಾಶದ ಆ ತೀರ್ಪಿನಿಂದ ತಪ್ಪಿಸಿಕೊಳ್ಳುವ ಬಹಳ ಅಗತ್ಯವಿದೆ" ಎಂದು ಅನೇಕ ಜನರು ಮೊರೆಯಿಡುತ್ತಾರೆ.

ತನ್ನ ಪಾಪಗಳಿಗಾಗಿ ತನ್ನನ್ನು ಹೊಣೆಗಾರನನ್ನಾಗಿ ಮಾಡುವ ಒಬ್ಬ ದೇವರು ಇದ್ದಾರೆ ಎಂದು ಪ್ರತಿಯೊಬ್ಬ ಮನುಷ್ಯ ತಿಳಿದಿದ್ದಾನೆ. ಇದು ಏಕೆಂದರೆ, ದೇವರ ಸ್ವರೂಪದಲ್ಲಿ ಮತ್ತು ಆತನ ಯಥಾರೂಪವಾಗಿ ಮನುಷ್ಯನನ್ನು ಸೃಷ್ಟಿಸಲಾಗಿತ್ತು. ತನ್ನ ದಂಗೆಕೋರತನದಿಂದಾಗಿ ಅವನು ದೇವರಿಂದ ಬೇರ್ಪಟ್ಟಿದ್ದರೂ, ದೇವರ ಜ್ಞಾನ, ಮತ್ತು ದೇವರಿಗೆ ತನ್ನ ಉತ್ತರದಾಯಿತ್ವ ಅವನ ವ್ಯಕ್ತಿತ್ವದೊಳಗೆ ಇರುವುದು. ರೋಮಾಪುರದವರಿಗೆಯ 2:13-15ನ್ನು ನಾವು ಓದುವಾಗ, "ಅನ್ಯ ಜನರು" ಎಂಬುದು ಬೈಬಲ್ ನ ಜ್ಞಾನವಿರದ ಜಗತ್ತಿನ ಎಲ್ಲಾ ಜನರನ್ನು ಸೂಚಿಸುತ್ತದೆ. ರೋಮಾಪುರದವರಿಗೆ 2:13-15ರಲ್ಲಿ ನಾವು ಓದುವುದೇನೆಂದರೆ:

**ಧರ್ಮಶಾಸ್ತ್ರ ಕೇಳಿದ ಮಾತ್ರದಿಂದಲೇ ಯಾರೂ ದೇವರ ಸನ್ನಿಧಿಯಲ್ಲಿ ನೀತಿವಂತರಾಗುವದಿಲ್ಲ; ಅದನ್ನು ಅನುಸರಿಸುವವರೇ ನೀತಿವಂತರೆಂದು ನಿರ್ಣಯಿಸಲ್ಪಡುವರು. ಧರ್ಮಶಾಸ್ತ್ರವಿಲ್ಲದ ಅನ್ಯ ಜನರು ಸ್ವಾಭಾವಿಕವಾಗಿ ಧರ್ಮಶಾಸ್ತ್ರದಲ್ಲಿ ಹೇಳಿದಂತೆ ನಡೆದರೆ ಅವರು ಧರ್ಮಶಾಸ್ತ್ರವಿಲ್ಲದವರಾಗಿದ್ದರೂ ತಾವೇ**

**ತಮಗೆ ಧರ್ಮಪ್ರಮಾಣವಾಗಿದ್ದಾರೆ; ಹೇಗಂದರೆ ಅವರು ಧರ್ಮಶಾಸ್ತ್ರದ ಮುಖ್ಯ ತಾತ್ಪರ್ಯ ತಮ್ಮ ಹೃದಯದಲ್ಲಿ ಬರೆದದೆ ಎಂಬದನ್ನು ತೋರ್ಪಡಿಸುತ್ತಾರೆ. ಇದಕ್ಕೆ ಅವರ ಮನಸ್ಸು ಸಹ ಸಾಕ್ಷಿ ನುಡಿಯುತ್ತದೆ; *ಅವರ* ಯೋಚನೆಗಳು ವಾದಿಪ್ರತಿವಾದಿಗಳಂತೆ - ಇದು ತಪ್ಪೆಂದು ತಪ್ಪಲ್ಲವೆಂದು ಸೂಚಿಸುತ್ತವೆ.**

ಆದ್ದರಿಂದ ಕೊಲೆ ಮಾಡುವುದು, ಕಳ್ಳತನ ಮಾಡುವುದು, ವ್ಯಭಿಚಾರ ಮಾಡುವುದು, ಇತ್ಯಾದಿಗಳು ಪಾಪ, ಅಂದರೆ ಇವು ದೇವರ ನಿಯಮದ ಉಲ್ಲಂಘನೆ ಎಂದು ಸಂಪೂರ್ಣ ಮನುಕುಲ ಅಂತರ್ಬೋಧೆಯಿಂದ ತಿಳಿದಿದೆ. ತನ್ನ ಪಾಪಗಳಿಗೆ ದೇವರು ಶಿಕ್ಷೆಯಾಗಬೇಕೆಂದು ಕೇಳುತ್ತಾರೆ ಎಂದೂ ಸಹ ಅವನಿಗೆ ಅಂತರ್ಬೋಧೆಯಿಂದ ತಿಳಿದಿದೆ. ಆದ್ದರಿಂದ, ಪ್ರತಿಯೊಬ್ಬ ಮನುಷ್ಯ, ತಾನು ದೇವರೊಂದಿಗೆ ರಾಜಿ ಮಾಡಿಕೊಳ್ಳುವ ಒಂದು ದಾರಿಯನ್ನು ಹುಡುಕಲು ಪ್ರಯತ್ನಿಸುತ್ತಾನೆ. ಅಂದರೆ, ತನ್ನ ಪಾಪಗಳಿಗೆ ಶಿಕ್ಷೆಯಿಂದ ಪಾರಾಗುವ ಒಂದು ಮಾರ್ಗವನ್ನು ಹುಡುಕಲು ಬಯಸುತ್ತಾನೆ.

ಕೆಲವರು, ತಾವು ಉತ್ತರಿಸಬೇಕಾದ ದೇವರು ಇಲ್ಲ ಎಂದು ತಮಗೆ ತಾವು ಮನವರಿಕೆ ಮಾಡಿಕೊಂಡು ಈ ಭೀಕರ ಸಮಸ್ಯೆಯನ್ನು ಪರಿಹರಿಸಲು ಪ್ರಯತ್ನಿಸುತ್ತಾರೆ. ಹಾಗಾದರೆ, ಅವರು ನಾಸ್ತಿಕರಾಗಲು, ಅಥವ ವಿಕಾಸವಾದಿಯಾಗಲು ಅಥವ ಅಜ್ಞೇಯತಾವಾದಿಯಾಗಲು ಬಹಳ ಪ್ರಯತ್ನಿಸುತ್ತಾರೆ.

ಇತರರು ತಾವು ಆರಾಧಿಸುವ ದೇವರನ್ನು ರಚಿಸಿದ್ದಾರೆ. ಬೌದ್ಧಧರ್ಮದವರಂತೆ ಮರದಿಂದ ಅಥವ ಕಲ್ಲಿನಿಂದ ದೇವರನ್ನು ಮಾಡುತ್ತಾರೆ, ಅಥವ ಜ್ಯೋತಿಷಿಯಂತೆ, ಗ್ರಹಗಳನ್ನು ಮತ್ತು ನಕ್ಷತ್ರಗಳನ್ನು ಒಂದು ರೀತಿಯ ದೇವರೆಂದು ನಂಬುತ್ತಾರೆ, ಅಥವ, ಅನೇಕ ಜನರಂತೆ, ತಮಗೆ ನೆಮ್ಮದಿಯೆನಿಸುವ ಯಾವುದಾದರು ಧರ್ಮವನ್ನು ಅವರು ಕಂಡುಕೊಳ್ಳುತ್ತಾರೆ. ಆ ಧರ್ಮಕ್ಕೆ ಬೈಬಲ್ ನೊಂದಿಗೆ ಯಾವುದೇ ಸಂಬಂಧವಿಲ್ಲದಿರಬಹುದು ಅಥವ ಅದು ತನ್ನ ಆಧಾರಕ್ಕಾಗಿ ಕೆಲವು ಬೈಬಲ್ ಶ್ಲೋಕಗಳನ್ನು ಬಳಸಬಹುದು. ಹೀಗೆ, ದೇವರೊಂದಿಗೆ ತಮ್ಮನ್ನು ತಾವು ಅತ್ಯುತ್ತಮ ರೀತಿಯಲ್ಲಿ ರಾಜಿ ಮಾಡಿಕೊಳ್ಳಬಹುದಾದ ಧರ್ಮವನ್ನು ಅವರು ಕಂಡುಕೊಳ್ಳುತ್ತಾರೆ.

ಸತ್ಯವೆಂದರೆ, ಇಂದು, ಜಗತ್ತಿನ ಸುಮಾರು ಮೂರನೆ ಒಂದು ಭಾಗ ಜನರು ತಮ್ಮನ್ನು ತಾವು "ಕ್ರೈಸ್ತಮತೀಯರು" ಎಂದು ಕರೆದುಕೊಳ್ಳುತ್ತಾರೆ. ಇದರ ಅರ್ಥವೇನೆಂದರೆ, ಜನರನ್ನು ದೇವರ ಬಳಿ ಕರೆತರುವ ಸುವಾರ್ತೆ ತಾನು ಎನ್ನುವ ಘೋಷಣೆಗೆ ಆಧಾರವಾಗಿ ಬೈಬಲ್ ನ ಕೆಲವು ಭಾಗಗಳನ್ನು ಬಳಸುವ ಒಂದು ಧರ್ಮದೊಂದಿಗೆ ಅವರು ಗುರುತಿಸಲ್ಪಡುತ್ತಾರೆ.

ಪ್ರತಿಯೊಂದು ಧರ್ಮ, ಅದು ಬೈಬಲ್ ನೊಂದಿಗೆ ಬಹಳ ಕಡಿಮೆಯಾಗಿ ಸಂಬಂಧಿಸಿರಲಿ, ಅಥವ ಬೈಬಲ್ ಗೆ ಮೇಲ್ನೋಟಕ್ಕೆ ಕಾಣುವಂತೆ ಸಂಪೂರ್ಣವಾಗಿ ನಿಷ್ಠಾವಂತವಾಗಿರಲಿ, ದೇವರೊಂದಿಗೆ ರಾಜಿಯಾಗಲು ಅತ್ಯಂತ ಸರಿಯಾದ ಮಾರ್ಗ ತನ್ನ ಬಳಿ ಇರುವುದೆಂದು ಸಾಧಿಸುತ್ತದೆ. ರೋಮನ್ ಕ್ಯಾಥೊಲಿಕ್, ಬ್ಯಾಪ್ಟಿಸ್ಟ್,, ರೆಫಾರ್ಮ್ಡ್, ಪ್ರೆಸ್ಬಯ್ಟೀರಿಯನ್, ಸೆವೆನ್ತ್- ಡೇ ಅಡ್ವೆನ್ಟಿಸ್ಟ್, ಯೆಹೋವಾ'ಸ್ ವಿಟ್ನೆಸ್, ಮೊರ್ಮೋನ್, ಇತ್ಯಾದಿ ಹೆಸರಾಂತ ಪಂಥಗಳ ಬಗ್ಗೆ ಇದು ನಿಜವಾಗಿದೆ. ಆದರೆ, ವಿಷಾದನೀಯವೆಂದರೆ, ದೇವರೊಂದಿಗೆ ರಾಜಿಯಾಗಲು, ಅಂದರೆ, ಪಾಪಕ್ಕೆ ಶಿಕ್ಷೆಯಾದ ದೇವರ ಕಡುಕೋಪದಿಂದ ಸಂಚಯಿತನಾಗಲು ಒಬ್ಬ ವ್ಯಕ್ತಿಗೆ ಯಾವುದರ ಅಗತ್ಯವಿದೆ ಎಂಬುದರ ಗುಣದ ಬಗ್ಗೆ ಸಾಕಷ್ಟು ತಿಳಿವಳಿಕೆ ಈ ಪಂಥಗಳಲ್ಲಿ ಯಾವುದೇ ಪಂಥಕ್ಕಿಲ್ಲ.

*ದುರದೃಷ್ಟವಶಾತ್, ಅವರ ಮುಕ್ತಿಗೆ ಅವರ ವಿಶ್ವಾಸವನ್ನು ಇವುಗಳಲ್ಲಿ ಯಾವುದೇ ಧರ್ಮದಲ್ಲಿ ನೆಟ್ಟಿರುವ ಜನರು ದೇವರೊಂದಿಗೆ ಇನ್ನೂ ಸಮಸ್ಯೆಯಲ್ಲಿದ್ದಾರೆ ಏಕೆಂದರೆ ಅವರನ್ನು ಸಂಚಯಿತರನ್ನಾಗಿ ಮಾಡಲು ಅವರ ಧರ್ಮಕ್ಕೆ ಸಾಧ್ಯವಿಲ್ಲ.*

.

ದುರದೃಷ್ಟವಶಾತ್, ಅವರ ಮುಕ್ತಿಗೆ ಅವರ ವಿಶ್ವಾಸವನ್ನು ಇವುಗಳಲ್ಲಿ ಯಾವುದೇ ಧರ್ಮದಲ್ಲಿ ನೆಟ್ಟಿರುವ ಜನರು ದೇವರೊಂದಿಗೆ ಇನ್ನೂ ಸಮಸ್ಯೆಯಲ್ಲಿದ್ದಾರೆ ಏಕೆಂದರೆ ಅವರನ್ನು ಸಂಚಯಿತರನ್ನಾಗಿ ಮಾಡಲು ಅವರ ಧರ್ಮಕ್ಕೆ ಸಾಧ್ಯವಿಲ್ಲ, ಮತ್ತು ಸತ್ಯದ ಏಕೈಕ ಮೂಲವಾದ ಬೈಬಲ್ ಅನ್ನು ಅವರು ಶ್ರದ್ಧೆಯಿಂದ ಆಲಿಸುತ್ತಿಲ್ಲ.

ಈ ಕಿರು ಪುಸ್ತಕದಲ್ಲಿ, ಅನೇಕ ಜನರು ನಿಜವಾಗಿಯೂ ದೇವರೊಂದಿಗೆ ರಾಜಿಯಾಗುವ ಮತ್ತು ಜಗತ್ತಿನ ಅಂತ್ಯದಲ್ಲಿ ಮನುಕುಲದ ಮೇಲೆ ಬರುವ ಭಯಂಕರ ತೀರ್ಪಿನಿಂದ ಜನರು ನಿಜವಾಗಿಯೂ ಪಾರಾಗುವ ದೇವರ ಯೋಜನೆಗೆ ಸಂಬಂಧಿಸಿದ ಬೈಬಲ್ ನ ಬೋಧನೆಗಳನ್ನು ಮುಂದಿಡಲು ನಾವು ಪ್ರಯತ್ನಿಸುತ್ತೇವೆ.

ಬೈಬಲ್, ತನ್ನ ಮೂಲ ಭಾಷೆಗಳಲ್ಲಿ, ದೇವರಿಂದ ಬರೆಯಲಾಗಿತ್ತು, ಆದರೆ ದೇವರು ಮನುಷ್ಯ ಲೇಖಕರನ್ನು ಬಳಸಿದ್ದರು ಎಂಬುದನ್ನು ನಾವು ನೆನಪಿನಲ್ಲಿಟ್ಟುಕೊಳ್ಳಬೇಕು. ಎರಡನೇ ಪೇತ್ರನು 1:21 ನಮಗೆ ಹೇಳುವಂತೆ:

**ಯಾಕಂದರೆ ಯಾವ ಪ್ರವಾದನೆಯೂ ಎಂದೂ ಮನುಷ್ಯರ ಚಿತ್ತದಿಂದ ಉಂಟಾಗಲಿಲ್ಲ; ಮನುಷ್ಯರು ಪವಿತ್ರಾತ್ಮ ಪ್ರೇರಿತರಾಗಿ ದೇವರಿಂದ ಹೊಂದಿದ್ದನ್ನೇ ಮಾತಾಡಿದರು.**

ಅವರು ಬರೆದ ಪದಗಳನ್ನು ಸ್ವತಃ ದೇವರು ತಾನೇ ಹೇಳಿದರು ಎಂದು ಯೆರೆಮೀಯ 36:1-4ರಲ್ಲಿ ಹೇಳಲಾಗಿದೆ. ಆದ್ದರಿಂದ, ಬೈಬಲ್ ಅನ್ನು ಓದಿ ಅಧ್ಯಯನ ಮಾಡುವುದರಿಂದ, ನಮಗೆ ಮೂಲಭೂತ ಮತ್ತು ಕೊನೆಯ ಸತ್ಯ ಸಿಗುವುದು. ಆದ್ದರಿಂದ, ದೇವರ ಮುಕ್ತಿಯ ಯೋಜನೆಗೆ ಸಂಬಂಧಿಸಿದ ಪ್ರತಿಯೊಂದು ತೀರ್ಮಾನ ಬೈಬಲ್ ನ ಬೋಧನೆಗಳಿಗೆ ಸಂಪೂರ್ಣವಾಗಿ ಕರಾರುವಾಕ್ಕಾಗಿರಬೇಕು. ಹೀಗೆ, ಮನುಷ್ಯನು ಮಾಡುವ ಯಾವುದೇ ತೀರ್ಪನ್ನು ಬೈಬಲ್ ನ ಯಾವುದೇ ಶ್ಲೋಕದ ಬೆಳಕಿನಲ್ಲಿ ಸೂಕ್ಷ್ಮವಾಗಿ ಪರಿಶೀಲಿಸಬೇಕು.

***ಯಾರನ್ನಾದರೂ ಸಂಚಯಿತನನ್ನಾಗಿ ಮಾಡಲು ದೇವರು ಏನು ಮಾಡಬೇಕಿತ್ತು?***

ಮನುಕುಲ ಎದುರಿಸುತ್ತಿರುವ ಭಯಂಕರ ವಿಪತ್ತಿನ ಪರಿಹಾರಕ್ಕೆ ಸಂಬಂಧಿಸಿದಂತೆ ಬೈಬಲ್ ಏನು ಘೋಷಿಸುತ್ತದೆ ಎಂಬುದನ್ನು ಜಾಗರೂಕತೆಯಿಂದ ನಿಷ್ಕೃಷ್ಟವಾಗಿ ಕಂಡುಹಿಡಿಯುತ್ತ ನಾವು ನಮ್ಮ ಅಧ್ಯಯನವನ್ನು ಮುಂದುವರಿಸುತ್ತೇವೆ. ಮನುಷ್ಯನ ಪರಿಸ್ಥಿತಿ ಎಷ್ಟು ಭೀಕರವಾಗಿದೆ ಎಂದರೆ, ಸ್ವತಃ ದೇವರು ಮಾತ್ರ ಪಾರಾಗುವ ದಾರಿಯ ವ್ಯವಸ್ಥೆ ಮಾಡಬಹುದಾಗಿದೆ ಎಂದು ನಾವು ನೋಡಲಿದ್ದೇವೆ.

ಸಂಪೂರ್ಣ ಬೈಬಲ್ ದೇವರಿಂದ ಬರೆಯಲಾದ ನಿಯಮಗಳ ಪುಸ್ತಕ, ಸಂಪೂರ್ಣ ಮನುಕುಲ ಅದಕ್ಕೆ ಅಧೀನವಾಗಿದೆ ಮತ್ತು ಅದಕ್ಕೆ ಸ್ವತಃ ದೇವರೂ ಕೂಡ ಅಧೀನರಾಗಿದ್ದಾರೆ ಎಂದು ಕೀರ್ತನೆಗಳು 138:2ರಲ್ಲಿ ಹೇಳಲಾಗಿದೆ ಎಂಬುದನ್ನು ನಾವು ನೆನಪಿನಲ್ಲಿಟ್ಟುಕೊಳ್ಳಬೇಕು. ಆದ್ದರಿಂದ, ಮನುಷ್ಯನ ಭಯಂಕರ ಸಮಸ್ಯೆಯ ಪರಿಹಾರ ದೇವರ ನಿಯಮದ ಪುಸ್ತಕವಾದ ಬೈಬಲ್ ನಲ್ಲಿ ಮಂಡಿಸಲಾಗಿರುವ ಎಲ್ಲಾ ಕಾನೂನುಬದ್ಧ ಅಗತ್ಯತೆಗಳನ್ನು ಪೂರೈಸಬೇಕು.

ಯಾರಾದರು ತನ್ನ ಬದುಕಿನಲ್ಲಿ ಮುಕ್ತಿಯನ್ನು ಅನುಭವಿಸಬೇಕಾದರೆ, ಸ್ವತಃ ದೇವರೇ ಕೈಗೊಳ್ಳುವ ಮೂರು ಅತಿ ಮುಖ್ಯ ಕೃತ್ಯಗಳಿವೆ. ಸಂಚಯಿತನಾಗುವ ಪ್ರತಿಯೊಬ್ಬನಿಗೆ ಈ ಮೂರು ಕೃತ್ಯಗಳ ಅಗತ್ಯವಿದೆ. ಇದಕ್ಕೆ ಯಾರೂ ಹೊರತಾಗಿಲ್ಲ.

***ದೇವರಿಂದ ಆಯ್ಕೆಯಾದವರು***

ಸಂಚಯಿತರಾಗುವ ಎಲ್ಲಾ ವ್ಯಕ್ತಿಗಳ ಪರವಾಗಿ ದೇವರು ಕೈಗೊಂಡ ಮೊದಲ ಕೃತ್ಯವೇನೆಂದರೆ, ಜಗತ್ತಿನ ಸೃಷ್ಟಿಯ ಮೊದಲು, ತಾನು ಸಂಚಯಿತನನ್ನಾಗಿ ಮಾಡುವ ಪ್ರತಿಯೊಬ್ಬ ವ್ಯಕ್ತಿಯನ್ನು ದೇವರು ಆಯ್ಕೆ ಮಾಡಿದರು. ಎಫೆಸದವರಿಗೆಯ 1:3-5ರಲ್ಲಿ ನಾವು ಓದುವುದೇನೆಂದರೆ:

ನಮ್ಮ ಕರ್ತನಾದ ಯೇಸು ಕ್ರಿಸ್ತನ ದೇವರೂ ತಂದೆಯೂ ಆಗಿರುವಾತನಿಗೆ ಸ್ತೋತ್ರ. ಆತನು ಪರಲೋಕದಲ್ಲಿನ ಸಕಲ ಆತ್ಮೀಯವರಗಳನ್ನು ನಮಗೆ ಕ್ರಿಸ್ತ ಯೇಸುವಿನಲ್ಲಿ ಅನುಗ್ರಹಿಸಿದ್ದಾನೆ. ಹೇಗಂದರೆ, ನಾವು ಪ್ರೀತಿಯಲ್ಲಿ ನಡೆದು ಆತನ ಸನ್ನಿಧಿಯಲ್ಲಿ ಪರಿಶುದ್ಧರೂ ದೋಷವಿಲ್ಲದವರೂ ಆಗಿರಬೇಕೆಂದು ನಮ್ಮನ್ನು ಜಗದುತ್ಪತ್ತಿಗೆ ಮುಂಚೆ ಕ್ರಿಸ್ತನಲ್ಲಿ ಆರಿಸಿಕೊಂಡನು. ಆತನು ತನ್ನ ಕೃಪೆಯನ್ನು ಪ್ರಖ್ಯಾತಿಗೆ ತರಬೇಕೆಂದು ನಮ್ಮನ್ನು ಯೇಸು ಕ್ರಿಸ್ತನ ಮೂಲಕ ತನ್ನ ಪುತ್ರರನ್ನಾಗಿ ಸ್ವೀಕರಿಸುವದಕ್ಕೆ ದಯಾಪೂರ್ವಕವಾದ ತನ್ನ ಚಿತ್ತಾನುಸಾರವಾಗಿ ಮೊದಲೇ ಸಂಕಲ್ಪಮಾಡಿದ್ದನು.

ದೇವರು ಈ ಜಗತ್ತನ್ನು ಮತ್ತು ಅದರ ಲಕ್ಷಕೋಟಿ ಮಾನವ ವಾಸಿಗಳನ್ನು ಸೃಷ್ಟಿಸಲು ಸಿದ್ಧರಾಗುತ್ತಿದ್ದಂತೆ, ಆತ ಕಾಲದ ನಡವೆಗಳಲ್ಲಿ ನೋಡಿದರು ಮತ್ತು ತನ್ನ ವಿರುದ್ಧ ಸಂಪೂರ್ಣವಾಗಿ ದಂಗೆ ಎದ್ದಿದ್ದ ದೀನ ಮನುಷ್ಯರ ರಾಶಿಯನ್ನು ನೋಡಿದರು. ದೇವರು ಮನುಷ್ಯರನ್ನು ಪರಿಪೂರ್ಣ ಜೀವಿಗಳನ್ನಾಗಿ, ದೇವರ ಸ್ವರೂಪದಲ್ಲಿ ಮತ್ತು ಯಥಾರೂಪದಲ್ಲಿ ಸೃಷ್ಟಿಸಿದ್ದರೂ, ದೇವರ ವಿರುದ್ಧ ಮನುಕುಲ ದಂಗೆ ಏಳುತ್ತದೆ ಮತ್ತು ಆ ದಂಗೆಕೋರತನದ ಪರಿಣಾಮವಾಗಿ ಸಂಪೂರ್ಣ ಮನುಕುಲ ಆಧ್ಯಾತ್ಮಿಕವಾಗಿ ಸಾಯುತ್ತದೆ ಮತ್ತು ಆದ್ಯಂತವಾಗಿ ಪಾಪದ ಸೋಂಕನ್ನು ಹತ್ತಿಸಿಕೊಳ್ಳುತ್ತದೆ ಎಂದು ದೇವರಿಗೆ ತಿಳಿದಿತ್ತು ಎಂಬುದರ ಬಗ್ಗೆ ಬೈಬಲ್ ಸ್ಪಷ್ಟವಾಗಿದೆ. ಮತ್ತು ದೇವರೊಂದಿಗೆ ರಾಜಿಯಾಗಲು, ಮನುಷ್ಯ ಮನಸ್ಸಿನಿಂದ ರಚಿತವಾದ, ಸಂಪೂರ್ಣವಾಗಿ ಪಾಪದ ಸೋಂಕು ಹತ್ತಿಕೊಂಡಿರುವ ವಿವಿಧ ಯೋಜನೆಗಳ ಮೂಲಕ ದೇವರನ್ನು ಹುಡುಕುವ ವಿಪರೀತ ಪ್ರಯತ್ನವನ್ನು ಮನುಷ್ಯ ಮಾಡುತ್ತಾನೆ, ಆದರೆ ಸಂಪೂರ್ಣವಾಗಿ ದೇವರ ಶರತ್ತುಗಳ ಪ್ರಕಾರ ಯಾರೂ ದೇವರನ್ನು ಹುಡುಕುವುದಿಲ್ಲ ಎಂದೂ ಕೂಡ ದೇವರಿಗೆ ತಿಳಿದಿತ್ತು .

*ದೇವರೊಂದಿಗೆ ರಾಜಿಯಾಗಲು ಮನುಷ್ಯ ಮನಸ್ಸಿನಿಂದ ರಚಿತವಾದ ವಿವಿಧ ಯೋಜನೆಗಳ ಮೂಲಕ ದೇವರನ್ನು ಹುಡುಕುವ ವಿಪರೀತ ಪ್ರಯತ್ನವನ್ನು ಮನುಷ್ಯ ಮಾಡುತ್ತಾನೆ ಎಂದೂ ಕೂಡ ದೇವರಿಗೆ ತಿಳಿದಿತ್ತು.*

ರೋಮಾಪುರದವರಿಗೆ 3:10-12ರಲ್ಲಿ, ದೇವರು ಮನುಕುಲದ ಶೋಚನೀಯ ಪರಿಸ್ಥಿತಿಯನ್ನು ವರ್ಣಿಸುತ್ತಾರೆ. ಅಲ್ಲಿ ನಾವು ಓದುವುದೇನೆಂದರೆ:

**ಇದು ಶಾಸ್ತ್ರದಲ್ಲಿ ಬರೆದಿರುವ ಮಾತುಗಳಿಗೆ ಸರಿಯಾಗಿದೆ; ಅವು ಯಾವವಂದರೆ - ನೀತಿವಂತನು ಇಲ್ಲ, ಒಬ್ಬನಾದರೂ ಇಲ್ಲ; ತಿಳುವಳಿಕೆಯುಳ್ಳವನು ಇಲ್ಲ, ದೇವರನ್ನು**

**ಹುಡುಕುವವನು ಇಲ್ಲ, ಎಲ್ಲರೂ ದಾರಿತಪ್ಪಿ ನಡೆಯುತ್ತಾರೆ, ಎಲ್ಲರೂ ಕೆಲಸಕ್ಕೆ ಬಾರದವರಾದರು. ಒಳ್ಳೇದನ್ನು ಮಾಡುವವನು ಇಲ್ಲ, ಒಬ್ಬನಾದರೂ ಇಲ್ಲ.**

ಆದರೂ, ದೇವರ ವಿರುದ್ಧ ಮನುಕುಲದ ದಂಗೆಕೋರತನದ ಸಂಪೂರ್ಣ ಅಪಜಯದ ಹೊರತಾಗಿಯೂ, ಈ ದಂಗೆಕೋರ ಜನರಲ್ಲಿ ಅನೇಕರನ್ನು ತಾನು ತನ್ನೊಡನೆ ನಿರಂತರವಾಗಿ ಇರಿಸಿಕೊಳ್ಳುವ ಅದ್ಭುತ ನಿರ್ಣಯವನ್ನು ದೇವರು ಮಾಡಿದರು. ಆದರೆ, ಆತ ಈ ಜನರನ್ನು ತನ್ನೊಡನೆ ನಿರಂತರವಾಗಿ ಹೇಗೆ ಇರಿಸಿಕೊಳ್ಳಲು ಸಾಧ್ಯ? ಅವರ ಪಾಪಕ್ಕೆ ಶಿಕ್ಷೆ ದೊಡ್ಡದಾಗಿತ್ತು. ಅವರ ಪಾಪಗಳ ಕಾರಣ, ಕಾನೂನು ಪ್ರಕಾರ, ನಾಶ ಮಾಡಬೇಕಾದ ಜನರನ್ನು ದೇವರು ತನ್ನೊಡನೆ ನಿರಂತರವಾಗಿ ಇರಿಸಿಕೊಳ್ಳಲು ಹೇಗೆ ಸಾಧ್ಯ? ಪಾಪಕ್ಕೆ ಶಿಕ್ಷೆ ಘೋರವಾಗಿದೆ, ಭೀಕರವಾಗಿದೆ ಏಕೆಂದರೆ ,ಮನುಕುಲದ ಪಾಪ ಘೋರವಾಗಿದೆ, ಭೀಕರವಾಗಿದೆ. ಇದು ದೇವರು ಮನುಕುಲಕ್ಕೆ ಯೋಜಿಸಿದ್ದ ಅದ್ಭುತವಾದ ಮುಕ್ತಿಯ ಕಾರ್ಯಕ್ರಮದ ಹಿನ್ನೆಲೆ.

ಆದ್ದರಿಂದ, ಜಗತ್ತಿನ ಸೃಷ್ಟಿಯ ಮುಂಚೆಯೆ, ತನಗೋಸ್ಕರ ಪರಿಶುದ್ಧರನ್ನಾಗಿ ಮಾಡಲು ಬಯಸಿದವರನ್ನು ದೇವರು ಆಯ್ಕೆ ಮಾಡಿದರು ಎಂದು ಎಫೆಸದವರಿಗೆ 1:4ರಲ್ಲಿ ಹೇಳಲಾಗಿದೆ. ಆತನ ಆಯ್ಕೆಗೂ ಮನುಷ್ಯನ ಯಾವುದೇ ಕೃತ್ಯಕ್ಕಾಗಲಿ, ಆಸೆಗಾಗಲಿ ಯಾವುದೇ ಸಂಬಂಧವಿರಲಿಲ್ಲ. ರೋಮಾಪುರದವರಿಗೆ 9:15ರಲ್ಲಿ ದೇವರು ಘೋಷಿಸುವುದೇನೆಂದರೆ:

**.....ಯಾವನ ಮೇಲೆ ನನ್ನ ಕರುಣೆ ಉಂಟೋ, ಅವನನ್ನು ಕರುಣಿಸುವೆನು, ಯಾವನ ಮೇಲೆ ನನ್ನ ಕನಿಕರವದೆಯೋ, ಅವನಿಗೆ ಕನಿಕರತೋರಿಸುವೆನು..........**

ಎಲ್ಲಕ್ಕಿಂತಲೂ ಮುಖ್ಯವಾದ ದೇವರ ಈ ಮೊದಲ ಕೃತ್ಯದ ಬಗ್ಗೆ ನಮಗೆ ತಿಳಿಸುವುದರಿಂದ ಪ್ರತಿಯೊಬ್ಬ ಸಂಚಯಿತನಾಗದ ವ್ಯಕ್ತಿಗೆ ದೇವರು ಅಗಾಧವಾದ ಒಂದು ಭರವಸೆಯನ್ನು ಒದಗಿಸುತ್ತಿದ್ದಾರೆ. ತನಗೆ ಪಕ್ಷಪಾತವಿಲ್ಲ ಎಂದು ದೇವರು ಒತ್ತಿ ಹೇಳುತ್ತಾರೆ ಎಂದು ರೋಮಾಪುರದವರ 2:11ರಲ್ಲಿ, ಎಫೆಸದವರ 6:9ರಲ್ಲಿ, ಕೊಲೊಸ್ಸೆಯವರ 3:25ರಲ್ಲಿ ನಾವು ನೋಡುತ್ತೇವೆ. ಯಾವ ದೇಶದವರಾಗಲಿ ಅಥವ ಜನರ ವರ್ಗವಾಗಲಿ ದೇವರಿಂದ ಆಯ್ಕೆಯಾದವರನ್ನು ಬೇರೆ ಯಾವುದೇ ಗುಂಪಿಗಿಂತ ಹೆಚ್ಚಾಗಿ ಹೊಂದಿರುವ ಸಂಭಾವ್ಯತೆ ಇಲ್ಲ. ಪಾಪಿಷ್ಠರ ಯಾವ ವರ್ಗವೂ, ಆಯ್ಕೆಯಾದ ಜನರನ್ನು ಹೊಂದಿರುವ ಸಾಧ್ಯತೆಯಿಂದ ಬೇರೆ ಯಾವುದೇ ವರ್ಗಕ್ಕಿಂತ ಹೆಚ್ಚು ದೂರವಿಲ್ಲ.

ಯೋಹಾನ 8ರಲ್ಲಿ ವ್ಯಭಿಚಾರಿ ಸ್ತ್ರೀಯ ಮುಕ್ತಿಯನ್ನು ಬೈಬಲ್ ದಾಖಲಿಸುತ್ತದೆ, ಮತ್ತು ಲೂಕ 23:9-43ರಲ್ಲಿ, ಯೇಸುವಿನೊಡನೆ ಶಿಲುಬೆಗೇರಿಸಲಾದ ಅಪರಾಧಿಯ ಮುಕ್ತಿಯನ್ನು ಅದು ದಾಖಲಿಸುತ್ತದೆ. ಆದ್ದರಿಂದ, ನಮ್ಮ ಪಾಪಗಳು ಎಷ್ಟೇ ದೊಡ್ಡದಾಗಿರಲಿ, ಅದನ್ನು ಗಣನೆಗೆ ತೆಗೆದುಕೊಳ್ಳದೆ, ದೇವರ ಶರತ್ತುಗಳ ಮೇಲೆ ನಮಗೆ ಮುಕ್ತಿಯ ತೀವ್ರ ಬಯಕೆ ಇದ್ದರೆ, ದೇವರಿಂದ ಆಯ್ಕೆಯಾದವರಲ್ಲಿ ನಾವೂ ಒಬ್ಬರಾಗುವ ಖಚಿತ ಸಾಧ್ಯತೆ ಇದೆ. ಇಂದು ಅಸಂಖ್ಯಾತ ಜನರು ಸಂಚಯಿತರಾಗಬೇಕಾಗಿದೆ ಎಂಬ ಸತ್ಯ ತಿಳಿದಿರುವ ಕಾರಣ, ನಾನೂ ಕೂಡ ಅವರಲ್ಲಿ ಒಬ್ಬನಾಗಿರುವ ಸಾಧ್ಯತೆ ಇದೆ. ಅದು ಒಂದು ದೊಡ್ಡ ಪ್ರೋತ್ಸಾಹ.

***ಆಯ್ಕೆಯಾದವರನ್ನು ಕ್ರಿಸ್ತರಿಗೆ ಕೊಡಲಾಯಿತು***

ಸಂಚಯಿತರಾಗಬೇಕೆಂದು ದೇವರು ಆಯ್ಕೆ ಮಾಡಿದವರನ್ನು, ನಾವು ಯೋಹಾನ 6:37ರಲ್ಲಿ ಓದುವಂತೆ, ಪ್ರಭು ಯೇಸು ಕ್ರಿಸ್ತರಿಗೆ ನೀಡಲಾಯಿತು:

**ತಂದೆಯು ನನಗೆ ಕೊಡುವಂಥವರೆಲ್ಲರು ನನ್ನ ಬಳಿಗೆ ಬರುವರು; ಮತ್ತು ನನ್ನ ಬಳಿಗೆ ಬರುವವನನ್ನು ನಾನು ತಳ್ಳಿ ಬಿಡುವದೇ ಇಲ್ಲ.**

ಆದರೆ, ಯೇಸು ಈ ಆಯ್ಕೆಯಾದವರನ್ನು ತನ್ನ ಶಾಶ್ವತ ಸ್ವತ್ತಾಗಿ ಪಡೆಯಬೇಕಿದ್ದರೆ, ಅವರ ಪಾಪಗಳಿಗೆ ಒಂದು ದಾರಿಯನ್ನು ಮಾಡಬೇಕಿತ್ತು. ಮನುಷ್ಯನು ದೇವರ ಸ್ವರೂಪದಲ್ಲಿ ಸೃಷ್ಟಿಯಾಗಿದ್ದ ಕಾರಣ, ಪ್ರತಿಯೊಬ್ಬ ವ್ಯಕ್ತಿ, ಅವನ ಪಾಪಗಳಿಗೆ ದೇವರ ನಿಯಮದ ಪ್ರಕಾರ, ದಂಡ ತೆರಬೇಕೆಂದು ಸ್ವತಃ ದೇವರಿಂದ ಬರೆಯಲಾಗಿದ್ದ ದೇವರ ಪರಿಪೂರ್ಣ ಕಾನೂನು ಹೇಳುತ್ತದೆ. ಆದ್ದರಿಂದ, ಅವರು ದೇವರಿಂದ ಆಯ್ಕೆಯಾಗಿ, ಕ್ರಿಸ್ತರ ಶಾಶ್ವತ ಸ್ವತ್ತಾಗಲು ಆತನಿಗೆ ನೀಡಲಾಗಿದ್ದರೂ, ಅವರ ಪಾಪಗಳಿಗೆ ದಂಡ ತೆರದ ಹೊರತು ಕ್ರಿಸ್ತರು ಅವರನ್ನು ಪಡೆಯುವಂತಿರಲಿಲ್ಲ. ಪಾಪದ ದಂಡ ಮರಣ ಎಂದು ದೇವರ ಕಾನೂನು ಘೋಷಿಸುತ್ತದೆ, ಅದರ ಪರಿಣಾಮವಾಗಿ, ಆಯ್ಕೆಯಾಗಿ ಕ್ರಿಸ್ತರಿಗೆ ಕೊಡಲ್ಪಟ್ಟವರು ಎಂದೂ ಕ್ರಿಸ್ತರ ಸ್ವಾಮ್ಯಕ್ಕೆ ಬರಲು ಸಾಧ್ಯವಿಲ್ಲ ಏಕೆಂದರೆ, ಅವರು ಎಂದೂ ಆ ದಂಡವನ್ನು ತೆರಲು ಸಾಧ್ಯವಿಲ್ಲ. ಈಗ, ಸಂಚಯಿತರಾದ ಎಲ್ಲರ ಪರವಾಗಿ ದೇವರು ಕೈಗೊಂಡ ಎರಡನೆಯ ಕೌತುಕ ಕೃತ್ಯಕ್ಕೆ ಬರುತ್ತೇವೆ.

***ಪಾಪ ಹೊರುವವರು***

ಕಾಲದ ಪ್ರಾರಂಭದಲ್ಲಿ ತಾನು ಸೃಷ್ಟಿಸಿದ ವಿಶ್ವವನ್ನು ದೇವರು ನೋಡಿದಾಗ, ಆಯ್ಕೆಯಾದವರ ಪರವಾಗಿ, ಕ್ರಿಸ್ತರ ಶಾಶ್ವತ ಸ್ವತ್ತಾಗಿ ಆತನಿಗೆ ನೀಡಲಾದ ದೇವರಿಂದ

ಆಯ್ಕೆಯಾದವರ ಪರವಾಗಿ ದೇವರ ಕಡುಕೋಪವನ್ನು ಸಹಿಸಲು ದೇವರು ಬಳಸಬಲ್ಲಂತಹವರು ಯಾರೂ ಇರಲಿಲ್ಲ ಎಂದು ಆತ ನೋಡಿದರು. ಇದನ್ನು ಯೆಶಾಯ 63:5 ಮತ್ತು ಯೆಹೆಜ್ಕೇಲನು 22:30ರಲ್ಲಿ ಬೋಧಿಸಲಾಗಿದೆ. ಆದರೆ, ದೇವರ ಪವಿತ್ರ ಸ್ವರ್ಗಕ್ಕೆ ಪ್ರವೇಶಿಸಲು ಯಾವುದೇ ವ್ಯಕ್ತಿಗೆ ಅನುಮತಿ ನೀಡುವ ಮೊದಲು ಮರಣದ ದಂಡವನ್ನು ತೆರಬೇಕೆಂದು ದೇವರ ಪರಿಪೂರ್ಣ ಕಾನೂನು ಘೋಷಿಸುತ್ತದೆ. ದೇವರ ಪರಿಪೂರ್ಣ ಕಾನೂನಿನ ಪ್ರತಿಯೊಂದು ಅಂಶ ಪರಿಪೂರ್ಣವಾಗಿ ನೆರವೇರಬೇಕಿತ್ತು.

*ಆದ್ದರಿಂದ, ಸಮಾನವಿಲ್ಲದ ಕರುಣೆಯ ಮತ್ತು ಪ್ರೀತಿಯ ಒಂದು ಕೃತ್ಯದಲ್ಲಿ, ತನಗೆ ಕೊಡಲಾದ ಆ ವ್ಯಕ್ತಿಗಳ ಪರವಾಗಿ ಕ್ರಿಸ್ತರು ತಾನೇ ಪಾಪ ಹೊರುವವರಾದರು.*

ಆದ್ದರಿಂದ, ಸಮಾನವಿಲ್ಲದ ಕರುಣೆಯ ಮತ್ತು ಪ್ರೀತಿಯ ಒಂದು ಕೃತ್ಯದಲ್ಲಿ, ತನಗೆ ಕೊಡಲಾದ ಆ ವ್ಯಕ್ತಿಗಳ ಪರವಾಗಿ ಕ್ರಿಸ್ತರು ತಾನೇ ಪಾಪ ಹೊರುವವರಾದರು. ಯೆಶಾಯ 53:6ರಲ್ಲಿ ನಾವು ಓದುವುದೇನೆಂದರೆ:

**ನಾವೆಲ್ಲರೂ ಕುರಿಗಳಂತೆ ದಾರಿತಪ್ಪಿ ತೊಳಲುತ್ತಿದ್ದೆವು, ಪ್ರತಿಯೊಬ್ಬನೂ ತನ್ನ ತನ್ನ ದಾರಿಯನ್ನು ಹಿಡಿಯುತ್ತಿದ್ದನು; ನಮ್ಮೆಲ್ಲರ ದೋಷಫಲವನ್ನೂ ಯೆಹೋವನು ಅವನ ಮೇಲೆ ಹಾಕಿದನು.**

ಈ ಶ್ಲೋಕದಲ್ಲಿ "ಎಲ್ಲರ" ಎಂಬ ಪದ ಆಯ್ಕೆಯಾದವರ ಬಗ್ಗೆ ಪ್ರಸ್ತಾಪಿಸುತ್ತಿದೆ, ಅಂದರೆ, ಜಗತ್ತಿನ ಸೃಷ್ಟಿಯ ಮುಂಚೆ ಸಂಚಯಿತರಾಗಲು ದೇವರಿಂದ ಆಯ್ಕೆಯಾದ ಎಲ್ಲರು. ಯೇಸು ಇದಕ್ಕಾಗಿಯೆ ಮನುಷ್ಯ ರೂಪವನ್ನು ತಾಳಬೇಕಾಯಿತು. ಆತ ಮನುಷ್ಯನ ಪಾಪಗಳಿಗೆ ಬೆಲೆ ತೆರಲು ಬಂದರು, ಆದ್ದರಿಂದ ಕ್ರಿಸ್ತರು ಮನುಷ್ಯನ ಮಗನಾಗಬೇಕಾಯಿತು. ಆತ ಸಂಚಯಿತರನ್ನಾಗಿ ಮಾಡಲು ಬಂದಿದ್ದ ಮನುಷ್ಯರ ಬದಲಿಯಾಗಲು ಕಾನೂನು ಪ್ರಕಾರ ಅರ್ಹರಾಗಲು ಆತ ಮನುಷ್ಯನಾಗಬೇಕಿತ್ತು. ಆತ ಸಂಚಯಿತರನ್ನಾಗಿ ಮಾಡಲು ಬಂದಿದ್ದ ಆ ಶಪಿತ ವ್ಯಕ್ತಿಗಳ ಪರವಾಗಿ ದೇವರ ಕಡುಕೋಪವನ್ನು ಸಹಿಸುವ ಬದಲಿಯಾಗಬೇಕಿತ್ತು. ಇದಕ್ಕಾಗಿಯೇ ಆತ ಶಿಲುಬೆಯನ್ನೇರಬೇಕಿತ್ತು. ಆತ ಶಿಲುಬೆಯ ಮೇಲೆ ನೇತಾಡುತ್ತಿದ್ದರು ಎಂಬ ಸತ್ಯ ಆತ ಶಾಪವಾಗಿದ್ದರು ಎಂದು ಜಗತ್ತಿಗೆ ಘೋಷಿಸಿತ್ತು ಮತ್ತು ಪ್ರದರ್ಶಿಸಿತ್ತು. ಗಲಾತ್ಯದವರಿಗೆ 3:13ರಲ್ಲಿ ನಾವು ಓದುವುದೇನೆಂದರೆ:

**ಕ್ರಿಸ್ತನು ನಮ್ಮ ನಿಮಿತ್ತ ಶಾಪವಾಗಿ ಧರ್ಮಶಾಸ್ತ್ರದಲ್ಲಿ ಹೇಳಿರುವ ಶಾಪದೊಳಗಿಂದ ನಮ್ಮನ್ನು ಬಿಡಿಸಿದನು. ಮರಕ್ಕೆ ತೂಗಹಾಕಲ್ಪಟ್ಟ ಪ್ರತಿಯೊಬ್ಬನು ಶಾಪಗ್ರಸ್ತನು ಎಂದು ಶಾಸ್ತ್ರದಲ್ಲಿ ಬರೆದದೆಯಲ್ಲಾ.**

ಇದರಿಂದಾಗಿಯೇ ಆತ ದೇವರಿಂದ ತ್ಯಜಿಸಲ್ಪಟ್ಟಿದ್ದರು. ದೇವರಿಂದ ತ್ಯಜಿಸಲ್ಪಡುವುದು ನರಕದ ಭೀಕರತೆಯ ಒಂದು ವರ್ಣನೆ. ಯೇಸು ಶಿಲುಬೆಯ ಮೇಲೆ ನೇತಾಡುತ್ತಿದ್ದಾಗ ಆತನ ಮೊರೆಯಲ್ಲಿ ನಾವು ಈ ಸತ್ಯವನ್ನು ಕಾಣುತ್ತೇವೆ. ಮತ್ತಾಯ 27:46ರಲ್ಲಿ ನಾವು ಓದುವುದೇನೆಂದರೆ:

**. . . ನನ್ನ ದೇವರೇ, ನನ್ನ ದೇವರೇ, ಯಾಕೆ ನನ್ನನ್ನು ಕೈಬಿಟ್ಟಿದ್ದೀ?**

ಕ್ರಿಸ್ತರು ರಕ್ಷಕನಾಗಲು ಬಂದಾಗ, ಆತ ಸಂಚಯಿತರನ್ನಾಗಿ ಮಾಡಲು ಯೋಜಿಸಿದ್ದ ಪ್ರತಿಯೊಬ್ಬರ ಪ್ರತಿಯೊಂದು ಪಾಪವನ್ನು ಶಿಲುಬೆಯ ಅನುಭವದಲ್ಲಿ ಆತನ ಮೇಲೆ ಇರಿಸಲಾಯಿತು. ಮತ್ತೆ, ಪಾಪದ ಈ ದೊಡ್ಡ ಹೊರೆಯೊಂದಿಗೆ ಆತ ನ್ಯಾಯಾಧೀಶರಾದ ದೇವರ ಎದುರು ನ್ಯಾಯವಿಚಾರಣೆಗೆ ನಿಂತರು ಮತ್ತು ಆತನನ್ನು ಅಪರಾಧಿ ಎಂದು ಪರಿಗಣಿಸಲಾಯಿತು. ಕಾನೂನಿನ ಹೇಳಿಕೆಗಳನ್ನು ನೆರವೇರಿಸಲು, ಆತ ಸಂಚಯಿತರನ್ನಾಗಿ ಮಾಡಲು ಬಂದಿದ್ದ ಪ್ರತಿಯೊಬ್ಬರ ಪರವಾಗಿ ನಿಯಮಾನುಸಾರ ಸಂಪೂರ್ಣ ದಂಡವನ್ನು ಆತ ಸಹಿಸಬೇಕಾಯಿತು. ಆತ ಅಂತ್ಯವಿಲ್ಲದ ಶಾಶ್ವತ ದೇವರಾಗಿ ಮತ್ತು ಮನುಷ್ಯನ ಮಗನಾಗಿ ಕೂಡ ಸಂಕಷ್ಟವನ್ನು ಅನುಭವಿಸಿದ ಕಾರಣದಿಂದ ಮಾತ್ರ, ಪ್ರಾಯಶ್ಚಿತ್ತದ ಸಮಯದಲ್ಲಿ, ಆತ ಇಷ್ಟು ಜನರ ಪಾಪಗಳಿಗೆ ಬೆಲೆ ತೆರಲು ಸಾಧ್ಯವಾಯಿತು.

ಆದ್ದರಿಂದ, ಈಗ, ಈ ಜಗತ್ತಿನಲ್ಲಿ, ಸೃಷ್ಟಿಯ ಮೊದಲೇ ಮುಕ್ತಿಗೆ ಆಯ್ಕೆಯಾಗಿ, ಕ್ರಿಸ್ತರಿಗೆ ಆತನ ಶಾಶ್ವತ ಸ್ವತ್ತಾಗಿ ನೀಡಲಾದ ಅನೇಕ ವ್ಯಕ್ತಿಗಳು ಇದ್ದಾರೆ. ಅವರ ಪಾಪಗಳು ಸಂಪೂರ್ಣವಾಗಿ ಮತ್ತು ನಿರಂತರವಾಗಿ ಮುಚ್ಚಲಾಗಿವೆ ಏಕೆಂದರೆ, ಅವರ ಪಾಪಗಳಿಗೆ ಬೆಲೆ ತೆತ್ತು ಯೇಸು ಅವರ ರಕ್ಷಕರಾದರು.

***ದೇವರು ನಾಶ ಮಾಡಲು ಸಾಧ್ಯವಾಗದಂತಹ ಇನ್ನೂ ಸಂಚಯಿತರಾಗದ ಅಸಂಖ್ಯಾತ ಜನರು***

ಇಂದು, ಜಗತ್ತಿನಾದ್ಯಂತ, ಸಂಚಯಿತರಾಗದ ಅಸಂಖ್ಯಾತ ಜನರಿದ್ದಾರೆ, ಆದರೂ, ಅವರ ಪಾಪಗಳಿಗೆ ಅವರನ್ನು ಶಿಕ್ಷಿಸಲು ದೇವರಿಗೆ ಸಾಧ್ಯವಿಲ್ಲ. ಅದು ಹೇಗೆ ಸಾಧ್ಯ?

ಅದು ಏಕೆಂದರೆ, ಈ ವ್ಯಕ್ತಿಗಳು ಸಂಚಯಿತರಾಗಲು ದೇವರಿಂದ ಆಯ್ಕೆಯಾಗಿದ್ದಾರೆ. ಆದ್ದರಿಂದ, ಅವರು ಜನಿಸುವ ಬಹಳ ಮುಂಚೆಯೆ, ಈ ಆಯ್ಕೆಯಾದ ವ್ಯಕ್ತಿಗಳು ಭೂಮಿಯ

ಮೇಲೆ ತಮ್ಮ ಬದುಕಿನಾದ್ಯಂತ ಮಾಡಬಹುದಾದ ಎಲ್ಲಾ ಹೊಲಸು, ಕೆಟ್ಟ ಪಾಪಗಳನ್ನು ಪ್ರಭು ಯೇಸುವಿನ ಮೇಲಿಡಲಾಯಿತು. ಯೇಸು, ಅವರ ಬದಲಿಯಾಗಿ, ಶಿಲುಬೆಯ ಸಮಯದಲ್ಲಿ, ದೇವರ ನ್ಯಾಯ ಸಿಂಹಾಸನದ ಎದುರು ಅವರ ಜಾಗದಲ್ಲಿ ನಿಂತರು. ಮತ್ತು ಈ ಪಾಪಗಳಿಂದಾಗಿ, ದೇವರ ಧಾರ್ಮಿಕ ಕಾನೂನಿನ ಮುಂದೆ ಯೇಸು ಅಪರಾಧಿಯಾದರು.

ಈಗ, ಯೇಸು ಶ್ರೇಷ್ಠ "ನಾನೇ", ಅನಾದಿಯಾದ ಸ್ವಯಂ ದೇವರು ತಾನೆ, ಮತ್ತು ಪ್ರಕಟನೆ 13:8ರಲ್ಲಿ, ಆತ **"ಜಗದುತ್ಪತ್ತಿಗೆ ಮೊದಲೇ ಕೊಯ್ಯಲ್ಪಟ್ಟ ಕುರಿ"** ಎಂದು ಬೈಬಲ್ ನಮಗೆ ಹೇಳುತ್ತದೆ. ಮತ್ತು ಯೇಸು ಅನಂತ ಶಾಶ್ವತ ದೇವರು ಮತ್ತು ಮನುಷ್ಯರೂ ಆದ ಕಾರಣ ದೇವರು ಪ್ರಭು ಯೇಸುವಿನ ಮೇಲೆ ತನ್ನ ಶಿಕ್ಷೆಯನ್ನು ಅಷ್ಟು ತೀವ್ರಗೊಳಿಸಲು ಸಾಧ್ಯವಾಯಿತು, ಯೇಸು ಗುರುವಾರ ಸಂಜೆ ಗೆತ್ಸೇಮನೆಯ ತೋಟವನ್ನು ಪ್ರವೇಶಿಸಿದ ಸಮಯದಿಂದ ಶುಕ್ರವಾರದಂದು ಸೂರ್ಯಾಸ್ತಕ್ಕೆ ಸ್ವಲ್ಪ ಮುಂಚೆ, ಯೇಸು "ಮುಗಿಯಿತು" ಎಂದು ಕೂಗುವ ತನಕ, ಆ ಸಮಯದಲ್ಲಿ ಆ ಭೀಕರ ದಂಡ ಸಂಪೂರ್ಣವಾಗಿ ತೆರಲಾಗುವ ತನಕ ಆತ ಆ ಶಿಕ್ಷೆಯನ್ನು ತೀವ್ರಗೊಳಿಸಿದರು.

ಹೀಗೆ, ಯಾರ ಪಾಪಗಳ ಬೆಲೆ ತೆರಲು ಆತ ದೇವರ ಕಡುಕೋಪವನ್ನು ಸಹಿಸಿದರೊ, ಆ ವ್ಯಕ್ತಿಗಳನ್ನು ಈಗ ಸಂಚಯಿಸಿದರು. ಅಂದರೆ, ಅವರಲ್ಲಿ ಪ್ರತಿಯೊಬ್ಬರಿಗೆ, ಅವರ ಪಾಪಗಳ ಘೋರತೆಯನ್ನು ಕಡೆಗಣಿಸಿ, ಈ ಪಾಪಗಳಿಗೆ ದಂಡವಾಗಿ ಕಾನೂನು ಕೇಳಿದ ದೇವರ ಕಡುಕೋಪವನ್ನು ಸಂಪೂರ್ಣವಾಗಿ ತೃಪ್ತಿಗೊಳಿಸಲಾಯಿತು. ಈ ವ್ಯಕ್ತಿಗಳನ್ನು ಅರ್ಹರನ್ನಾಗಿ ಮಾಡಲಾಯಿತು.

ಆದ್ದರಿಂದ, ಇವರಲ್ಲಿ ಈ ಜಗತ್ತಿನಲ್ಲಿ ಜನಿಸಿದ ಪ್ರತಿಯೊಬ್ಬ ವ್ಯಕ್ತಿ, ಅವರ ಪಾಪಗಳಿಗೆ ಅವರು ಎಂದೂ ಶಿಕ್ಷೆ ಅನುಭವಿಸುವುದಿಲ್ಲ ಎಂಬುದು ಖಚಿತವಾಯಿತು. ಬದಲಾಗಿ, ಅವರ ಬದುಕಿನ ಯಾವುದಾದರೊಂದು ಸಮಯದಲ್ಲಿ, ದೇವರು ದೇವರ ಪದವಾದ ಬೈಬಲ್ ಅನ್ನು ಅವರ ಬದುಕಿಗೆ ಲೇಪಿಸುವರು ಮತ್ತು ಅವರು ಒಂದು ಹೊಚ್ಚಹೊಸ ಪುನರುತ್ಥಾನಗೊಂಡ ಆತ್ಮವನ್ನು ಪಡೆಯುವರು ಎಂಬುದು ಖಚಿತವಾಯಿತು. ಇದು ದೇವರು ಇಚ್ಛಿಸಿದ ಯಾವುದೇ ಸಮಯದಲ್ಲಿ ಆಗಬಹುದು. ಅವರು ಇನ್ನೂ ತಮ್ಮ ತಾಯಿಯ ಗರ್ಭದಲ್ಲಿರುವಾಗಲೆ ಇದು ಸಂಭವಿಸಬಹುದು ಅಥವ ಅವರು ಸಾಯುವ ಕೆಲವು ನಿಮಿಷಗಳ ಮೊದಲು ಸಂಭವಿಸಬಹುದು. ಅವರು ವಿಪರೀತವಾದ ಮಾನಸಿಕ ವೈಕಲ್ಯತೆ ಹೊಂದಿದ್ದರೆ ಅದು ಸಂಭವಿಸಬಹುದು ಅಥವ ಅವರು ಪ್ರತಿಭಾಪೂರ್ಣ ವಯಸ್ಕ

ಮನಸ್ಸನ್ನು ಹೊಂದಿದ್ದರೂ ಸಂಭವಿಸಬಹುದು. ಅವರು ಜನಿಸುವ ಬಹಳ ಮುಂಚೆಯೆ ಈ ವ್ಯಕ್ತಿಗಳನ್ನು ಸಂಚಯಿಸಲು ನಿರ್ಧರಿಸಲಾಗಿತ್ತು.

*ಅವರು ಇನ್ನೂ ತಮ್ಮ ತಾಯಿಯ ಗರ್ಭದಲ್ಲಿರುವಾಗಲೆ ಇದು ಸಂಭವಿಸಬಹುದು ಅಥವ ಅವರು ಸಾಯುವ ಕೆಲವು ನಿಮಿಷಗಳ ಮೊದಲು ಸಂಭವಿಸಬಹುದು.*

ಆದರೆ, ಅವರು ಯಾರು ಎಂದು ದೇವರಿಗೆ ಹೊರತು ಬೇರೆ ಯಾರಿಗೂ ತಿಳಿದಿಲ್ಲ. ಅವರು ತಮ್ಮ ಹೊಸ ಪುನರುಜ್ಜೀವನಗೊಂಡ ಆತ್ಮವನ್ನು ಪಡೆದ ನಂತರವೇ, ಅಂದರೆ, ಅವರು ಸಂಚಯಿತರಾದ ಮೇಲೆ ದೇವರು ಅವರನ್ನು ಸಂಚಯಿತರನ್ನಾಗಿ ಮಾಡಿದರು ಎಂಬುದು ಅವರಿಗೆ ಅರ್ಥವಾಗಲು ಪ್ರಾರಂಭವಾಗುತ್ತದೆ. ಆದರೆ, ಸತ್ಯವೆಂದರೆ, ಅವರನ್ನು ಕಾಲದ ಪ್ರಾರಂಭದಿಂದ ಆಯ್ಕೆಮಾಡಲಾಗಿದೆ ಏಕೆಂದರೆ, ಕ್ರಿಸ್ತರು ಜಗದುತ್ಪತ್ತಿಗೆ ಮೊದಲೇ ಕೊಯ್ಯಲ್ಪಟ್ಟ ಕುರಿ ಎಂದು ಪ್ರಕಟನೆ 13:8ರಲ್ಲಿ ಹೇಳಲಾಗಿದೆ

ಆದರೆ, ಅವರು ಸಂಚಯಿತರಾದ ಮೇಲೆ, ದೇವರು ತನ್ನ ಪರಮ ಕೃಪೆಯಿಂದ ಅವರನ್ನು ಆಯ್ಕೆ ಮಾಡಿ, ಅವರ ಪಾಪಗಳಿಗೆ ಬೆಲೆ ತೆತ್ತ ಕಾರಣದಿಂದ ಮಾತ್ರ ಅವರು ಸಂಚಯಿತರಾದದ್ದು ಎಂದು ಅವರು ತಿಳಿಯುತ್ತಾರೆ. ದೇವರು ಅವರಿಗೆ ನಿರಂತರ ಬದುಕು ಮತ್ತು ಒಂದು ಹೊಸ ಪುನರುಜ್ಜೀವನಗೊಂಡ ಆತ್ಮವನ್ನು ನೀಡಿ ಅವರನ್ನು ಸಂಚಯಿತರನ್ನಾಗಿ ಮಾಡಿದ ಗಳಿಗೆಯಲ್ಲಿ ಮುಕ್ತಿ ಅವರ ಬದುಕಿನಲ್ಲಿ ನಿಜಸ್ಥಿತಿಯಾಯಿತು. ಹೀಗೆ, ಚರಿತ್ರೆಯ ಈ ಸಮಯದಲ್ಲಿ, ಇಂದು ಉಳಿದ ಜಗತ್ತು ಪಾಪದಲ್ಲಿ ಬದುಕುತ್ತಿದ್ದಂತೆ, ತಾವೂ ಪಾಪದಲ್ಲಿ ಬದುಕುತ್ತಿದ್ದರೂ ತಮ್ಮ ಪಾಪಗಳಿಗೆ ಎಂದೂ ಬೆಲೆ ತೆರಬೇಕಾಗಿಲ್ಲದ ಅಸಂಖ್ಯಾತ ಜನರಿದ್ದಾರೆ.

***ಸ್ವಭಾವತಃ ಎಲ್ಲಾ ಮನುಷ್ಯರು ಆಧ್ಯಾತ್ಮಿಕವಾಗಿ ಸತ್ತಿರುವರು***

ಸಂಚಯಿತವಾಗದ ಮನುಕುಲ, ಸಂಚಯಿತರಾಗಲು ದೇವರಿಂದ ಆಯ್ಕೆಯಾಗಿರಲಿ ಅಥವ ಆಯ್ಕೆಯಾಗದೆ ಇರಲಿ, ಆಧ್ಯಾತ್ಮಿಕವಾಗಿ ಸತ್ತಿದೆ ಎಂಬುದರ ಬಗ್ಗೆ ನಮಗೆ ಅರಿವಿರಬೇಕು. ದೈಹಿಕವಾಗಿ ಮತ್ತು ಆತ್ಮದಲ್ಲಿ ಸಂಪೂರ್ಣವಾಗಿ ಅವರಿಗೆ ಪಾಪದ ಸೋಂಕು ಉಂಟಾಗಿದೆ. ಆದುದರಿಂದಲೆ ನಾವು ಮತ್ತಾಯ 15:19ರಲ್ಲಿ ಹೀಗೆಂದು ಓದುತ್ತೇವೆ:

**ಹೇಗಂದರೆ ಮನಸ್ಸಿನೊಳಗಿಂದ ಕೆಟ್ಟ ಆಲೋಚನೆ ಕೊಲೆ ಹಾದರ ಸೂಳೆಗಾರಿಕೆ ಕಳ್ಳತನ ಸುಳ್ಳುಸಾಕ್ಷಿ ಬೈಗಳು ಹೊರಟು ಬರುತ್ತವೆ.**

ದೇವರು ಸಂಚಯಿತರನ್ನಾಗಿ ಮಾಡಲು ಯೋಜಿಸಿದವರನ್ನು, ಅವರು ಸಂಚಯಿತರಾಗುವ ಮುನ್ನ ಹೇಗೆ ಬದುಕುತ್ತಿದ್ದರು ಎಂಬುದರ ಬಗ್ಗೆ, ಎಫೆಸದವರಿಗೆ 2:3ರಲ್ಲಿ ವರ್ಣಿಸುತ್ತಾರೆ. ಅಲ್ಲಿ ನಾವು ಓದುವುದೇನೆಂದರೆ:

**ನಾವೆಲ್ಲರೂ ಪೂರ್ವದಲ್ಲಿ ಅವಿಧೇಯರಾಗಿದ್ದು,** ನಡತೆ ಅಥವ ವರ್ತನೆಯಲ್ಲಿ, **ಶರೀರಭಾವದ ಆಶೆಗಳಿಗೆ ಅಧೀನರಾಗಿ ಶರೀರಕ್ಕೂ ಮನಸ್ಸಿಗೂ ಸಂಬಂಧಪಟ್ಟ ಇಚ್ಛೆಗಳನ್ನು ನೆರವೇರಿಸುತ್ತಾ ನಡೆದು ಮಿಕ್ಕಾದವರಂತೆ ಸ್ವಭಾವಸಿದ್ಧವಾಗಿ ದೇವರ ಕೋಪಕ್ಕೆ ಗುರಿಯಾಗಿದ್ದೆವು.**

*ದೇವರ ಸದಾಚಾರದ ಕಾನೂನಿನ ಪ್ರಕಾರ, ಪಾಪದ ದಂಡವನ್ನು ತೆರಬೇಕು, ಮತ್ತು ದೇವರ ಕಾನೂನು ಕೇಳುವ ದಂಡವೇನೆಂದರೆ ವಿನಾಶ.*

ದೇವರ ಸದಾಚಾರದ ಕಾನೂನಿನ ಪ್ರಕಾರ, ಪಾಪದ ದಂಡವನ್ನು ತೆರಬೇಕು, ಮತ್ತು ದೇವರ ಕಾನೂನು ಕೇಳುವ ದಂಡವೇನೆಂದರೆ ವಿನಾಶ ಎಂಬುದನ್ನು ನಾವು ಯಾವಾಗಲು ನೆನಪಿನಲ್ಲಿಟ್ಟುಕೊಳ್ಳಬೇಕು. ದಂಡವನ್ನು ತೆತ್ತ ಮೇಲೆ ಮಾತ್ರ ದೇವರು ಪಾಪಿಷ್ಠನಿಗೆ ಬದುಕನ್ನು, ನಿರಂತರ ಬದುಕನ್ನು ನೀಡಬಲ್ಲರು. ಪಾಪಕ್ಕೆ ತೆರಬೇಕಾದ ದಂಡವೇನೆಂದರೆ ವಿನಾಶ, ಸಂಚಯಿತನಾಗದ ಮನುಷ್ಯನು ಶಾಶ್ವತವಾಗಿ ನಾಶವಾಗುತ್ತಾನೆ ಮತ್ತು ಅವನು ನಿರ್ನಾಮವಾಗುತ್ತಾನೆ ಮತ್ತು ಅವನು ಇನ್ನೆಂದೂ ಬದುಕಲಾರನು. ಈ ಸಂಪೂರ್ಣ ವಿನಾಶ ಮತ್ತು ನಿರ್ನಾಮವನ್ನು ಪ್ರಕಟನೆ 20:14-15ರಲ್ಲಿ ದೇವರು ವರ್ಣಿಸುತ್ತಾರೆ, ಅಲ್ಲಿ ಆತ ಹೇಳುವುದೇನೆಂದರೆ:

**ಆ ಮೇಲೆ ಮೃತ್ಯುವೂ ಪಾತಾಳವೂ ಬೆಂಕಿಯ ಕೆರೆಗೆ ದೊಬ್ಬಲ್ಪಟ್ಟವು; ಆ ಬೆಂಕಿಯ ಕೆರೆಯೇ ಎರಡನೆಯ ಮರಣವು. ಯಾವನ ಹೆಸರು ಜೀವಬಾಧ್ಯರ ಪಟ್ಟಿಯಲ್ಲಿ ಬರೆದದ್ದಾಗಿ ಕಾಣಲಿಲ್ಲವೋ ಅವನು ಬೆಂಕಿಯ ಕೆರೆಗೆ ದೊಬ್ಬಲ್ಪಟ್ಟನು.**

ಒಮ್ಮೆ ಒಬ್ಬ ವ್ಯಕ್ತಿಯನ್ನು ಬೆಂಕಿಯ ಕೆರೆಯೊಳಗೆ ನೂಕಿದ ಮೇಲೆ, ಅವನು ಶಾಶ್ವತವಾಗಿ ನಿರ್ನಾಮವಾಗುತ್ತಾನೆ, ನಾಶವಾಗುತ್ತಾನೆ. ಅವನು ಇನ್ನೆಂದಾದರು ಅಸ್ತಿತ್ವಕ್ಕೆ ಬರುವ ಸಾಧ್ಯತೆಯೇ ಇಲ್ಲ. ಇದು "ಎರಡನೆಯ ಮರಣದ" ಸಾರ.

ಆದರೆ, ಅವನು ಹುಟ್ಟುವುದಕ್ಕಿಂತ ಬಹಳ ಮುಂಚೆಯೆ, ಕ್ರಿಸ್ತರು ಆಯ್ಕೆಯಾದ ಎಲ್ಲರ ಪಾಪಗಳಿಗೆ ಬೆಲೆ ತೆತ್ತರು, ಹೀಗಾಗಿ, ಆ ವ್ಯಕ್ತಿ ನ್ಯಾಯಬದ್ಧವಾಗಿ ಸಮರ್ಥನೀಯವಾಗಿದ್ದಾನೆ, ಅಂದರೆ, ಕಾನೂನು ಪ್ರಕಾರ ಅವನು ಇನ್ನು ಪಾಪದ

ಅಪರಾಧಿಯಲ್ಲ. ಆದರೆ, ದೇವರು ಅವನಿಗೆ ನಿಜವಾಗಿಯೂ ದೇವರ ಪದವನ್ನು ಲೇಪಿಸುವ ಮುನ್ನ ಮತ್ತು ಅವನಿಗೆ ಒಂದು ಹೊಸ ಪುನರುಜ್ಜೀವನಗೊಂಡ ಆತ್ಮವನ್ನು ನೀಡುವ ಮುನ್ನ ಅವನು ದೇವರ ಕಡುಕೋಪಕ್ಕೆ ಪಾತ್ರನಾಗಿ ಬದುಕುತ್ತಾನೆ. ಅಂದರೆ, ಅವನು ಇನ್ನೂ ಪಾಪದ ಸೋಂಕನ್ನು ಹೊರುತ್ತಾನೆ, ಮತ್ತು ಅವನು ಇನ್ನೂ ಸಂಪೂರ್ಣವಾಗಿ ಆಧ್ಯಾತ್ಮಿಕವಾಗಿ ಸತ್ತಿದ್ದಾನೆ. ಅವನು ಇನ್ನೂ, ಯೋಹಾನ 11:39ರಲ್ಲಿ ಹೇಳಿರುವಂತೆ, ನಾತ ಬೀರುವ ಹೆಣದಂತೆ ಮತ್ತು ಯೆಹೆಜ್ಕೇಲನು 37:1-2ರಲ್ಲಿ ಹೇಳಿರುವಂತೆ, ಒಣಗಿದ ಎಲುಬಿನ ಕಣಿವೆಯಂತೆ. ದೈಹಿಕವಾಗಿ ಸತ್ತ ವ್ಯಕ್ತಿ ಮತ್ತೆ ದೈಹಿಕವಾಗಿ ಬದುಕಿ ಬರಲು ಹೇಗೆ ಸಾಧ್ಯವಿಲ್ಲವೊ, ಅಂತೆಯೆ, ಆಧ್ಯಾತ್ಮಿಕವಾಗಿ ಸತ್ತವನು ಏನು ಮಾಡಿದರೂ, ತನ್ನ ಸಂಪೂರ್ಣ ವ್ಯಕ್ತಿತ್ವದ ಆಧ್ಯಾತ್ಮಿಕ ಮರಣದ ಪರಿಸ್ಥಿತಿಯನ್ನು ಬದಲಾಯಿಸಲು ಸಾಧ್ಯವಿಲ್ಲ.

***ನಮಗೆ ಒಂದು ಹೊಸ ಆತ್ಮವನ್ನು ನೀಡಬೇಕು***

ಒಂದು ಮಗುವಿನ ಜನನ ಸಾಕ್ಷಿಯಾಗುವಂತೆ, ದೇವರು ಒಬ್ಬರೇ ಜೀವ ನೀಡಬಲ್ಲರು. ಆ ದೈಹಿಕ ಜೀವವನ್ನು ಪಡೆಯಲು ಆ ಮಗು ಯಾವುದೇ ರೀತಿಯಲ್ಲಿ ಸಹಾಯ ಮಾಡಲು ಸಾಧ್ಯವಿಲ್ಲ. ಅಂತೆಯೆ, ಕ್ರಿಸ್ತರು ಆಗಲೆ ಅವರ ಪಾಪಗಳಿಗೆ ದಂಡ ತೆತ್ತಿದ್ದರೂ, ಸಂಚಯಿತರಾಗಲು ದೇವರು ಆಯ್ಕೆ ಮಾಡಿರುವ ವ್ಯಕ್ತಿ ಆಧ್ಯಾತ್ಮಿಕ ಜೀವ ಪಡೆಯಬೇಕು. ಯೋಹಾನ 3, ಶ್ಲೋಕ 3 ಮತ್ತು 7 ರಲ್ಲಿ, ದೇವರು ಇದರ ಬಗ್ಗೆ "ಹೊಸದಾಗಿ ಹುಟ್ಟುವುದು" ಎಂದು ಪ್ರಸ್ತಾಪಿಸುತ್ತಾರೆ. ಇಲ್ಲಿ ದೇವರು ಬಳಸುವ ಗ್ರೀಕ್ ಪದದ ವಾಸ್ತವಿಕ ಅರ್ಥವೇನೆಂದರೆ, "ಮೇಲಿನಿಂದ ಹುಟ್ಟಿದ್ದು". ಮತ್ತು ಒಂದನೇ ಪೇತ್ರನು 1:23ರಲ್ಲಿ, ಈ ಹೊಸ ಜನ್ಮ "ಹೊಸದಾಗಿ ಹುಟ್ಟುವುದು" ಎಂದು ದೇವರು ಒತ್ತಿ ಹೇಳುತ್ತಾರೆ.

ಮೇಲಿನಿಂದ ಬರುವ, ಅಂದರೆ ಸ್ವರ್ಗದಿಂದ ಬರುವ ಈ ಹೊಸ ಜನ್ಮ ಸಂಚಯಿತನಾದ ವ್ಯಕ್ತಿಯ ವ್ಯಕ್ತಿತ್ವದೊಳಗೆ ಕ್ರಮೇಣ ಬೆಳೆಯಬೇಕಾದ ಜೀವದ ಬೀಜ ಮಾತ್ರವಲ್ಲ, ಅದು ತತ್‌ಕ್ಷಣದ ಸಂಪೂರ್ಣ ಹೊಚ್ಚಹೊಸ ಆತ್ಮ ಅಥವ ಆತ್ಮದ ಸತ್ವ. ಯೋಹಾನ 14:23ರಲ್ಲಿ ಹೇಳಿರುವಂತೆ, ಆ ಬೀಜ, ಸಂಚಯಿತನಾದ ವ್ಯಕ್ತಿಯೊಳಗೆ ಅಸ್ತಿತ್ವದಲ್ಲಿರುವ ಸ್ವಯಂ ಕ್ರಿಸ್ತರು. ಮತ್ತಾಯ 9:16ರಲ್ಲಿ ಹೇಳಿರುವಂತೆ, ಒಂದು ಹಳೆ ಬಟ್ಟೆಯ ಹರಕಿನ ಮೇಲೆ ಹೊಸ ಬಟ್ಟೆಯ ಒಂದು ತುಂಡನ್ನು ತೇಪೆ ಹಚ್ಚಲು ಪ್ರಯತ್ನಿಸುವ ಸಾಮ್ಯವನ್ನು ಬಳಸಿ, ಅದು ಹೊಚ್ಚಹೊಸ ಆತ್ಮ ಎಂದು ದೇವರು ನಮಗೆ ಭರವಸೆ ನೀಡುತ್ತಾರೆ. ಅದು

ಸಂಪೂರ್ಣವಾಗಿ ಒಂದು ಹೊಸ ಬಟ್ಟೆ ಆಗಿರಬೇಕು. ಅಂತೆಯೆ, ಹೊಸ ದ್ರಾಕ್ಷಾರಸವನ್ನು ಹಳೆಯ ಬಾಟಲುಗಳಲ್ಲಿ ಹಾಕುವ ಪ್ರಯತ್ನ ಮಾಡುವ ಸಾಮ್ಯವನ್ನು ಆತ ನೀಡುತ್ತಾರೆ. ಹೊಸ ದ್ರಾಕ್ಷಾರಸವನ್ನು ಹೊಸ ಬಾಟಲುಗಳಲ್ಲಿ ಹಾಕಬೇಕು ಎಂದು ಮತ್ತಾಯ 9:17ರಲ್ಲಿ ಆತ ಹೇಳುತ್ತಾರೆ. ಎರಡನೆಯ ಕೊರಿಂಥದವರಿಗೆ 5:17ರಂತಹ ಇತರ ಬೈಬಲ್ ನ ಭಾಗಗಳಲ್ಲಿ ಇದನ್ನು ಒತ್ತಿ ಹೇಳಲಾಗಿದೆ, ಅಲ್ಲಿ ನಾವು ಓದುವುದೇನೆಂದರೆ:

**ಹೀಗಿರಲಾಗಿ ಯಾವನಾದರೂ ಕ್ರಿಸ್ತನಲ್ಲಿದ್ದರೆ ಅವನು ನೂತನ ಸೃಷ್ಟಿಯಾದನು. ಇಗೋ, ಪೂರ್ವಸ್ಥಿತಿ ಹೋಗಿ ಎಲ್ಲಾ ನೂತನವಾಯಿತು.**

ಯೆಹೆಜ್ಕೇಲನು 36:26ರಲ್ಲಿ ಹೇಳಿರುವಂತೆ, ದೇವರು ಆ ವ್ಯಕ್ತಿಯ ಬದುಕಿಗೆ ದೇವರ ಪದವನ್ನು ಲೇಪಿಸಿದ ಆ ಕ್ಷಣದಲ್ಲಿ ಕೊಟ್ಟ ಹೊಸ ಆತ್ಮ, ಅಂದರೆ ಹೊಸ ಪುನರುಜ್ಜೀವನಗೊಂಡ ಆತ್ಮ, ಕೂಡಲೆ ವ್ಯಕ್ತಿಯ ವ್ಯಕ್ತಿತ್ವದ ಹೊಸ ಜೀವಿಯಾದ ಭಾಗ. ಅಂತೆಯೆ, ಕಾಲದ ಅಂತ್ಯದಲ್ಲಿ, ಈ ಆಯ್ಕೆಯಾದ ವ್ಯಕ್ತಿಗೆ ಒಂದು ಹೊಚ್ಚಹೊಸ ಪುನರುಜ್ಜೀವನಗೊಂಡ ಆಧ್ಯಾತ್ಮಿಕ ದೇಹವನ್ನು ನೀಡಲಾಗುವುದು, ಒಂದನೆ ಕೊರಿಂಥದವರಿಗೆ 15:52ರಲ್ಲಿ ಹೀಗೆ ಹೇಳಲಾಗಿದೆ: **"ಅದರ ಕಡೇ ತುತೂರಿಯ ಧ್ವನಿಯಾಗುವಾಗ ನಾವೆಲ್ಲರು ಒಂದು ಕ್ಷಣದಲ್ಲಿ ರೆಪ್ಪೆಬಡಿಯುವಷ್ಟರೊಳಗಾಗಿ ಮಾರ್ಪಡುವೆವು. ತುತೂರಿಯು ಊದಲಾಗಿ ಸತ್ತವರು ನಿರ್ಲಯವಾಗಿ ಎಬ್ಬಿಸಲ್ಪಡುವರು, ನಾವು ಮಾರ್ಪಡುವೆವು".**

ಹೀಗೆ, ಆಧ್ಯಾತ್ಮಿಕವಾಗಿ ಬದುಕಿಬರಲು, ಅಂದರೆ, ಸಂಚಯಿತರಾಗಲು ಮನುಕುಲದ ಸಂಪೂರ್ಣ ಅಸಾಮರ್ಥ್ಯವನ್ನು ತೋರಿಸಲು ಬೈಬಲ್ ನಲ್ಲಿ ಅರ್ಥಪೂರ್ಣ ದೃಷ್ಟಾಂತಕಥೆಗಳನ್ನು ನೀಡಲಾಗಿದೆ. ದೇವರು ಒಣಗಿದ ಮೂಳೆಗಳ ಮಾದರಿಯನ್ನು ಸಂಚಯಿತರಾಗದ ಮನುಷ್ಯರಿಗೆ ನೀಡಿದ್ದಾರೆ, ಮತ್ತು ದೇವರು ಕೆಲಸ ಮಾಡುವಾಗ, ಆ ಒಣಗಿದ ಮೂಳೆಗಳಲ್ಲಿ ಜೀವ ತುಂಬಿದರು ಎಂದು ದೇವರು ತೋರಿಸಿ ಯೆಹೆಜ್ಕೇಲನು 37ರಲ್ಲಿ ಮುಂದಿಟ್ಟಿದ್ದಾರೆ. ಇನ್ನೊಂದು ಚಾರಿತ್ರಿಕ ದೃಷ್ಟಾಂತಕಥೆ ಯೋಹಾನ 11ರಲ್ಲಿ ದಾಖಲಾಗಿದೆ, ಅಲ್ಲಿ ನಾವು ಓದುವುದೇನೆಂದರೆ, ಪ್ರಭು ಯೇಸು ಆದೇಶಿಸಿದಾಗ ಲಾಜರನೆಂಬಾತನ ನಾತ ಬೀರುತ್ತಿದ್ದ ಹೆಣ ಪುನಃ ಜೀವಂತವಾಯಿತು. ಅಂತೆಯೆ, ಸ್ವಭಾವತಃ ಆಧ್ಯಾತ್ಮಿಕವಾಗಿ ಸತ್ತಿರುವ ಮನುಕುಲಕ್ಕೆ ನಿರಂತರ ಆಧ್ಯಾತ್ಮಿಕ ಜೀವವನ್ನು ತರಬಲ್ಲವರು ದೇವರು ಒಬ್ಬರೆ.

*ಜಗತ್ತಿನಲ್ಲಿ ಎರಡು ರೀತಿಯ ಸಂಚಯಿತರಾಗದ ಜನರಿದ್ದಾರೆ ಎಂಬುದರ ಬಗ್ಗೆ ನಾವು ಖಾತ್ರಿಯಿಂದಿರಬಹುದು.*

ಜಗತ್ತಿನಲ್ಲಿ ಎರಡು ರೀತಿಯ ಸಂಚಯಿತರಾಗದ ಜನರಿದ್ದಾರೆ ಎಂಬುದರ ಬಗ್ಗೆ ನಾವು ಖಾತ್ರಿಯಿಂದಿರಬಹುದು. ಆಯ್ಕೆಯಾಗಿ, ಕಾನೂನಿನ ಅನುಸಾರ ದೇವರ ಕಡುಕೋಪಕ್ಕೆ ಪಾತ್ರರಾಗಿರದ ಆಧ್ಯಾತ್ಮಿಕವಾಗಿ ಸತ್ತಿರುವ ಜನರಿದ್ದಾರೆ, ಮತ್ತು ಆಯ್ಕೆಯಾದವರ ಜೊತೆ ಸೇರಿಸಲ್ಪಡದಿರುವುದರಿಂದ ಖಂಡಿತವಾಗಿ ನಿರಂತರ ಬದುಕನ್ನು ಪಡೆಯದಿರುವ ಮತ್ತು ದೇವರ ಅಂತಿಮ ಕಡುಕೋಪವನ್ನು ಸಹಿಸುವ ಜನರಿದ್ದಾರೆ. ಇವೆರಡರಲ್ಲಿ ಯಾವುದೇ ಪರಿಸ್ಥಿತಿಯಲ್ಲಿ, ಅವರು ಆಧ್ಯಾತ್ಮಿಕವಾಗಿ ಸತ್ತಿದ್ದರೂ, ಸ್ವಲ್ಪ ಮಟ್ಟಿಗೆ ದೇವರ ಕಾನೂನು ಅವರ ಹೃದಯಗಳ ಮೇಲೆ ಬರೆಯಲಾಗಿದೆ. ಆದ್ದರಿಂದ, ಅವರು ದೇವರ ಕಾನೂನುಗಳಿಗೆ ವಿಧೇಯರಾಗಿರಬೇಕೆಂದು ಅವರಿಗೆ ತಿಳಿದಿದೆ ಮತ್ತು ಅವರ ಆತ್ಮಸಾಕ್ಷಿ ಅವರಿಗೆ ಸಾಕ್ಷಿಯಾಗುತ್ತದೆ.

ಮೇಲಾಗಿ, ಅವರ ವ್ಯಕ್ತಿತ್ವದ ಒಂದು ಅವಿಭಾಜ್ಯ ಅಂಗ ಅವರ ಆತ್ಮ ಅಥವ ಆತ್ಮದ ಸಾರ, ಅಲ್ಲಿ, ದೇವರ ಕಾನೂನುಗಳಿಗೆ ವಿಧೇಯರಾಗಿರಬೇಕೆಂಬ ಹೆಚ್ಚಿನ ಬಯಕೆಗೆ ದೇವರು ಅವರಿಗೆ ಮಾರ್ಗದರ್ಶನ ನೀಡಬಹುದು ಅಥವ, ಸೈತಾನನು ಹೆಚ್ಚಿನ ದುಷ್ಟತನದತ್ತ ಅವರಿಗೆ ಮಾರ್ಗದರ್ಶನ ನೀಡಬಹುದು. ಜೊತೆಗೆ, ಅವರ ಸಂಪೂರ್ಣ ವ್ಯಕ್ತಿತ್ವದೊಳಗೆ ಒಂದು ದುಷ್ಟತನ, ಒಂದು ಆಧ್ಯಾತ್ಮಿಕ ಸಾವು ನೆಲೆಸಿದೆ, ಅವರ ಆಲೋಚನೆಗಳ ಮೂಲಕ, ಮಾತುಗಳ ಮೂಲಕ ಮತ್ತು ಕೃತ್ಯಗಳ ಮೂಲಕ ವ್ಯಕ್ತವಾಗಲು ಅದಕ್ಕೆ ಸೈತಾನನಿಂದ ಯಾವುದೇ ಸಹಾಯ ಬೇಕಿಲ್ಲ.

### *ಆಯ್ಕೆಯಾದವರ ಮುಕ್ತಿಯ ನಿಜಸ್ಥಿತಿ*

ಈಗಾಗಲೆ ಹೇಳಿರುವಂತೆ, ದೇವರ ಇನ್ನೊಂದು ದೊಡ್ಡ ಕೃತ್ಯದ ಅಗತ್ಯವಿದೆ. ಮುಕ್ತಿಗೆ ಆಯ್ಕೆಯಾದ ವ್ಯಕ್ತಿಗಳು ಪಾಪಿಷ್ಠ ಮನುಷ್ಯರು. ಅವರಿಗಾಗಿ ಇರುವ ದೇವರ ಯೋಜನೆಯ ಬಗ್ಗೆ ಅವರಿಗೆ ಏನೂ ತಿಳಿದಿಲ್ಲ. ಅವರಿಗಾಗಿ ದೇವರ ಮುಕ್ತಿಯ ಯೋಜನೆಯ ವಾಸ್ತವತೆ ಅವರ ಬದುಕಿನಲ್ಲಿ ಅನ್ವಯವಾಗಬೇಕಾಗಿದೆ.

ಮುಕ್ತಿಗೆ ಮುಂಚೆ, ಅವನು ಸಂಚಯಿತನಾಗಲು ದೇವರಿಂದ ಆಯ್ಕೆಯಾಗಿದ್ದನೊ ಇಲ್ಲವೊ ಎಂದು ಯಾರಿಗೂ ತಿಳಿಯದು. ದೇವರು ನಮ್ಮನ್ನು ಸಂಚಯಿತರನ್ನಾಗಿ ಮಾಡಿದ ನಂತರವೆ,

ದೇವರ ಮುಕ್ತಿಯ ಯೋಜನೆಯಲ್ಲಿ ನಾವು ಸೇರ್ಪಡೆಯಾಗಲು ಒಂದೇ ಕಾರಣವೇನೆಂದರೆ, ದೇವರು ತನ್ನ ಪರಮ ಸಂತೋಷದಲ್ಲಿ, ಸೃಷ್ಟಿಯ ಮುಂಚೆಯೆ ನಮ್ಮನ್ನು ಆಯ್ಕೆಮಾಡಿದ್ದರು ಎಂದು ನಾವು ಅರಿಯುತ್ತೇವೆ. ಎಂದೂ ಸಂಚಯಿತವಾಗದ ಉಳಿದ ಮನುಕುಲದಂತೆ ಸಂಚಯಿತರಾದವರು ಮೂಲಭೂತವಾಗಿ ಒಂದು ದೇಹ ಮತ್ತು ಆತ್ಮ. ಅವರು ಸಾಯುವ ಸಮಯದಲ್ಲಿ ಹೂಳಲಾಗುವ ಅವರ ವ್ಯಕ್ತಿತ್ವದ ಭಾಗ ಯಾವುದೆಂದರೆ ಅವರ ದೇಹ. ಸಂಚಯಿತನಾದ ವ್ಯಕ್ತಿಯ ವಿಷಯದಲ್ಲಿ, ಅವನ ದೈಹಿಕ ಸಾವಿನ ಸಮಯದಲ್ಲಿ, ಅವನ ವ್ಯಕ್ತಿತ್ವದ ಭಾಗವಾದ ದೇಹದಷ್ಟೆ ನಿಜವಾದ ಇನ್ನೊಂದು ಭಾಗವಾದ ಅವನ ಆತ್ಮ ಅಥವ ಆತ್ಮದ ಸಾರ, ಅವನ ದೇಹವನ್ನು ಬಿಡುತ್ತದೆ ಮತ್ತು ಅದನ್ನು ಸ್ವರ್ಗಕ್ಕೆ ತೆಗೆದುಕೊಂಡು ಹೋಗಲಾಗುತ್ತದೆ, ಅಲ್ಲಿ ಅವನು ಕ್ರಿಸ್ತರೊಡನೆ ಬದುಕಿ ಆಳುತ್ತಾನೆ. ನಂತರ, ಜಗತ್ತಿನ ಅಂತ್ಯದ ಸಮಯದಲ್ಲಿ, ಕ್ರಿಸ್ತರು ಹಿಂದಿರುಗಿದಾಗ, ಎರಡನೆ ಕೊರಿಂಥದವರಿಗೆ 5:8 ಮತ್ತು ಥೆಸಲೋನಿಕದವರಿಗೆ 4ರಲ್ಲಿ ಹೇಳಿರುವಂತೆ, ಆತ ಆ ದೇಹವನ್ನು ಪುನರುಜ್ಜೀವನಗೊಳಿಸುತ್ತಾರೆ.

ಆದರೆ, ಮುಕ್ತಿಗೆ ಮುನ್ನ, ಆಯ್ಕೆಯಾದ ವ್ಯಕ್ತಿ ಈ ಜಗತ್ತಿನಲ್ಲಿ, ಮುಕ್ತಿಗೆ ಆಯ್ಕೆಯಾಗದ ಯಾವುದೇ ವ್ಯಕ್ತಿಯಂತೆಯೆ ಬದುಕುತ್ತಾನೆ.

ಆಯ್ಕೆಯಾದವರ ಬಗ್ಗೆ ಎಫೆಸದವರಿಗೆ 2:1-3ರಲ್ಲಿ ನಾವು ಹೀಗೆಂದು ಓದುತ್ತೇವೆ:

**ಆತನು ಅಪರಾಧಗಳ ಮತ್ತು ಪಾಪಗಳ ದೆಸೆಯಿಂದ ಸತ್ತವರಾಗಿದ್ದ ನಿಮ್ಮನ್ನು ಸಹ ಬದುಕಿಸಿದನು. ನೀವು ಪೂರ್ವದಲ್ಲಿ ಅಪರಾಧಗಳನ್ನೂ ಪಾಪಗಳನ್ನೂ ಮಾಡುವವರಾಗಿದ್ದು ಇಹಲೋಕಾಚಾರಕ್ಕೆ ಅನುಸಾರವಾಗಿ ನಡೆದುಕೊಂಡಿರಿ; ವಾಯುಮಂಡಲದಲ್ಲಿ ಅಧಿಕಾರ ನಡಿಸುವ ಅಧಿಪತಿಗೆ, ಅಂದರೆ ನಂಬಲೊಲ್ಲದವರನ್ನು ಅವಿಧೇಯತೆಗೆ ಈಗ ಪ್ರೇರೇಪಿಸುವ ಆತ್ಮನಿಗೆ ಅನುಸಾರವಾಗಿ ನಡೆದುಕೊಂಡಿರಿ. ನಾವೆಲ್ಲರೂ ಪೂರ್ವದಲ್ಲಿ ಅವಿಧೇಯರಾಗಿದ್ದು ಶರೀರಭಾವದ ಆಶೆಗಳಿಗೆ ಅಧೀನರಾಗಿ ಶರೀರಕ್ಕೂ ಮನಸ್ಸಿಗೂ ಸಂಬಂಧಪಟ್ಟ ಇಚ್ಛೆಗಳನ್ನು ನೆರವೇರಿಸುತ್ತಾ ನಡೆದು ಮಿಕ್ಕಾದವರಂತೆ ಸ್ವಭಾವಸಿದ್ಧವಾಗಿ ದೇವರ ಕೋಪಕ್ಕೆ ಗುರಿಯಾಗಿದ್ದೆವು.**

ಅವನು ಸಂಚಯಿತನಾಗುವ ಮುನ್ನ, ಈ ದೇಹದಲ್ಲಿ, ಪಾಪಕ್ಕೆ ಅತಿಯಾಸೆ ಪಡುತ್ತಾನೆ, ಮತ್ತು ತನ್ನ ಆತ್ಮದಲ್ಲಿ, ಅವನು ಪಾಪಕ್ಕೆ ಅತಿಯಾಸೆ ಪಡುತ್ತಾನೆ. ಎಂದೂ ಸಂಚಯಿತನಾಗದ ಯಾವುದೇ ವ್ಯಕ್ತಿಯಷ್ಟೆ ಅವನು ಆಧ್ಯಾತ್ಮಿಕವಾಗಿ ಸತ್ತಿದ್ದಾನೆ.

ಈಗ, ಕ್ರಿಸ್ತರು ಯಾರನ್ನು ಸಂಚಯಿತರನ್ನಾಗಿ ಮಾಡಲು ಬಂದರೊ, ಅವರ ಪರವಾಗಿ ದೇವರು ಮಾಡುವ ಮೂರನೆಯ ದೊಡ್ಡ ಕೃತ್ಯಕ್ಕೆ ನಾವು ಬಂದಿದ್ದೇವೆ.

***ಹೊಸ ಹುಟ್ಟಿನ ಪವಾಡ***

ಕ್ರಿಸ್ತರ ಶಾಶ್ವತ ಆಸ್ತಿಯಾಗಿ ಆತನಿಗೆ ಕೊಡಲ್ಪಟ್ಟವರ ಪರವಾಗಿ ದೇವರು ಮಾಡುವ ಮೂರನೆ ಕೃತ್ಯವೇನೆಂದರೆ, ಆಯ್ಕೆಯಾದ ವ್ಯಕ್ತಿಗೆ ಹೊಚ್ಚಹೊಸ ಪುನರುಜ್ಜೀವನಗೊಂಡ ಆತ್ಮವನ್ನು ನೀಡುವ ಪವಾಡವನ್ನು ದೇವರು ಮಾಡುತ್ತಾರೆ. ಯೋಹಾನ 3, ಶ್ಲೋಕ 5ರಲ್ಲಿ ಯೇಸು ಇದರ ಬಗ್ಗೆ ಪ್ರಸ್ತಾಪಿಸುತ್ತಾರೆ. ಅಲ್ಲಿ ನಾವು ಓದುವುದೇನೆಂದರೆ:

**. . . ನಾನು ನಿನಗೆ ನಿಜನಿಜವಾಗಿ ಹೇಳುತ್ತೇನೆ, ಒಬ್ಬನು ನೀರಿನಿಂದಲೂ ಆತ್ಮನಿಂದಲೂ ಹುಟ್ಟದಿದ್ದರೆ ದೇವರ ರಾಜ್ಯಕ್ಕೆ ಸೇರಲಾರನು.**

ಅದಕ್ಕೆ ಮುಂಚೆ, ಯೋಹಾನ 3, ಶ್ಲೋಕ 3ರಲ್ಲಿ ನಾವು ಓದುವುದೇನೆಂದರೆ:

**. . . ನಾನು ನಿಮಗೆ ನಿಜನಿಜವಾಗಿ ಹೇಳುತ್ತೇನೆ, ಒಬ್ಬನು ಹೊಸದಾಗಿ ಹುಟ್ಟದಿದ್ದರೆ ಅವನು ದೇವರ ರಾಜ್ಯವನ್ನು ಕಾಣಲಾರನು.**

ನೀರಿನಿಂದ ಮತ್ತು ಆತ್ಮನಿಂದ ಹುಟ್ಟುವುದು ಎಂದರೆ ಯೋಹಾನ 4:10-15 ಮತ್ತು ಯೋಹಾನ 7:38ರಲ್ಲಿ ಹೇಳಿರುವಂತೆ, ಪವಿತ್ರಾತ್ಮನಾದ ದೇವರ ಕೃತ್ಯದಿಂದ ನೀರಾದ ಸುವಾರ್ತೆಯಿಂದ ಹುಟ್ಟುವುದು. ರೋಮಾಪುರದವರಿಗೆ 10, ಶ್ಲೋಕ 17ರಲ್ಲಿ ದೇವರು ಈ ಕೃತ್ಯದ ಬಗ್ಗೆ ಪ್ರಸ್ತಾಪಿಸುತ್ತಾರೆ. ಅಲ್ಲಿ ಆತ ಹೇಳುವುದೇನೆಂದರೆ:

**ಆದಕಾರಣ ಸಾರಿದ ವಾರ್ತೆಯು ನಂಬಿಕೆಗೆ ಆಧಾರ, ಆ ವಾರ್ತೆಗೆ ಕ್ರಿಸ್ತನ ವಾಕ್ಯವೇ ಆಧಾರ.**

*ದೇವರ ದೈವಿಕ ವ್ಯವಸ್ಥೆಯಲ್ಲಿ, ಜನರನ್ನು ಸಂಚಯಿತರನ್ನಾಗಿ ಮಾಡುವ ಪರಿಸರವನ್ನು ಆತ ಸ್ಥಾಪಿಸಿದರು.*

ದೇವರ ದೈವಿಕ ವ್ಯವಸ್ಥೆಯಲ್ಲಿ, ಜನರನ್ನು ಸಂಚಯಿತರನ್ನಾಗಿ ಮಾಡುವ ಪರಿಸರವನ್ನು ಆತ ಸ್ಥಾಪಿಸಿದರು. ಆ ಪರಿಸರ ಏಕೈಕ ದೇವರ ಪದವಾದ ಬೈಬಲ್. ಆದ್ದರಿಂದ, ದೇವರ ಪದಗಳನ್ನು ಕೇಳದೆ ಜಗತ್ತಿನಲ್ಲಿ ಯಾರಿಗೂ ಸಂಚಯಿತನಾಗಲು ಸಾಧ್ಯವಿಲ್ಲ, ಮತ್ತು ಏಕೈಕ ದೇವರ ಪದವೆಂದರೆ ಬೈಬಲ್. ಅದಕ್ಕಾಗಿಯೆ, ಕ್ರೈಸ್ತದೇವಾಲಯದ ಯುಗದಾದ್ಯಂತ, ಜಗತ್ತಿನೆಲ್ಲೆಡೆ ಸುವಾರ್ತೆಯನ್ನು ಕಳುಹಿಸಬೇಕೆಂದು ದೇವರು ಸ್ಥಳೀಯ ಕ್ರೈಸ್ತಸಭೆಗಳಿಗೆ ಆದೇಶ ನೀಡಿದ್ದರು. ಅದಕ್ಕಾಗಿಯೆ, ನಮ್ಮ ದಿನದಲ್ಲಿ, ನಾವು ಉತ್ಸಾಹದಿಂದ ಸತತವಾಗಿ ಸುವಾರ್ತೆಯನ್ನು ಜಗತ್ತಿನೆಲ್ಲೆಡೆ ಕಳುಹಿಸಬೇಕಾಗಿದೆ, ಆದರೆ

ಈಗ, ಕ್ರೈಸ್ತದೇವಾಲಯದ ಸಂಸ್ಥೆಯಾಗಿ ಮಾಡುವ ಬದಲಾಗಿ, ನಾವು ಅದನ್ನು ಪ್ರತ್ಯೇಕ ವ್ಯಕ್ತಿಗಳಾಗಿ ಮಾಡುತ್ತೇವೆ. ನಾವು ಪ್ರತ್ಯೇಕ ವ್ಯಕ್ತಿಗಳಾಗಿ ಕ್ರಿಸ್ತರ ರಾಯಭಾರಿಗಳಾಗಿ ಸೇವೆ ಸಲ್ಲಿಸುತ್ತೇವೆ.

ಇಂದು, ಕ್ರೈಸ್ತದೇವಾಲಯಗಳಲ್ಲಿ ಯಾರೂ ಸಂಚಯಿತರಾಗಲು ಸಾಧ್ಯವಿಲ್ಲ ಎಂಬ ಸತ್ಯದ ಅರಿವು ನಮಗಿರಬೇಕು. ದೇವರ ವೇಳಾಪಟ್ಟಿಯ ಪ್ರಕಾರ, ಕ್ರೈಸ್ತದೇವಾಲಯದ ಯುಗ ಅಂತ್ಯಗೊಂಡಿದೆ, ಮತ್ತು ಪವಿತ್ರಾತ್ಮ ಕ್ರೈಸ್ತದೇವಾಲಯಗಳನ್ನು ತ್ಯಜಿಸಿದೆ. ಆದರೆ, ಕ್ರೈಸ್ತದೇವಾಲಯಗಳ ಹೊರಗೆ, ನಿಜವಾದ ನಂಬಿಕೆಯುಳ್ಳವರ ಒಂದು ದೊಡ್ಡ ಸುಗ್ಗಿಯನ್ನು ದೇವರ ರಾಜ್ಯದೊಳಗೆ ತರಲಾಗುತ್ತಿದೆ. ಫ್ಯಾಮಿಲಿ ರೇಡಿಯೊವನ್ನು ಸಂಪರ್ಕಿಸಿ, ಉಚಿತ ಪುಸ್ತಕಗಳಾದ *ದಿ ಎಂಡ್ ಆಫ್ ದಿ ಚರ್ಚ್ ಏಜ್ ಅಂಡ್ ಆಫ್ಟರ್* ಮತ್ತು *ವ್ಹೀಟ್ ಆಂಡ್ ಟೇರ್ಸ್*ಗಳನ್ನು ಕೇಳಿ ಪಡೆಯಲು ನಿಮ್ಮನ್ನು ಆಹ್ವಾನಿಸಲಾಗಿದೆ.

ಸಂಚಯಿತರನ್ನಾಗಿ ಮಾಡುವ ಎಲ್ಲಾ ಕೆಲಸವನ್ನು ದೇವರು ಮಾಡುತ್ತಾರೆ, ಆದ್ದರಿಂದ ಆ ವ್ಯಕ್ತಿಯ ಬದುಕಿನ ಯಾವುದೇ ಸಮಯದಲ್ಲಿ ಆತ ಆಯ್ಕೆಯಾದ ವ್ಯಕ್ತಿಯನ್ನು ಸಂಚಯಿತನನ್ನಾಗಿ ಮಾಡಬಹುದು. ಅದಕ್ಕೆ ಕೇವಲ ಒಂದು ಅಗತ್ಯತೆ ಏನೆಂದರೆ ಆ ವ್ಯಕ್ತಿ ಬೈಬಲ್ ನ ಬೋಧನೆಯನ್ನು ಆಲಿಸುತ್ತಿರಬೇಕು. ಮುಕ್ತಿಯ ಗಳಿಗೆಯಲ್ಲಿ, ದೇವರು ಆ ವ್ಯಕ್ತಿಗೆ ಆಧ್ಯಾತ್ಮಿಕ ಕಿವಿಗಳನ್ನು ಮತ್ತು ಒಂದು ಹೊಸ ಶಾಶ್ವತ ಆತ್ಮವನ್ನು ನೀಡುತ್ತಾರೆ. ಹೀಗೆ, ನಾವು ಮೊದಲೇ ನೋಡಿರುವಂತೆ, ಒಬ್ಬ ವಯಸ್ಕರನ್ನು ಎಷ್ಟು ಸುಲಭದಿಂದ ಸಂಚಯಿತರನ್ನಾಗಿ ಮಾಡಲು ಸಾಧ್ಯವೊ ಅಷ್ಟೇ ಸುಲಭವಾಗಿ ಒಂದು ಮಗುವನ್ನು ಸಂಚಯಿತನನ್ನಾಗಿ ಮಾಡಬಹುದು. ಒಬ್ಬ ಕಾಲೇಜು ಪ್ರೊಫೆಸ್ಸರನ್ನು ಸಂಚಯಿತನನ್ನಾಗಿ ಮಾಡುವಷ್ಟೇ ಸುಲಭವಾಗಿ ಎರಡು ವರ್ಷದ ಮಗುವಿನ ಮನಸ್ಸುಳ್ಳ ವ್ಯಕ್ತಿಯನ್ನು ಸಂಚಯಿತನನ್ನಾಗಿ ಮಾಡಬಹುದು.

ಶಿಲುಬೆಯನ್ನೇರಿದಾಗ, ಆಯ್ಕೆಯಾದ ವ್ಯಕ್ತಿಯ ಎಲ್ಲಾ ಪಾಪಗಳಿಗೆ ಕ್ರಿಸ್ತರು ಬೆಲೆ ತೆತ್ತರು. ಆದ್ದರಿಂದ, ಮಾಡಲು ಉಳಿದಿರುವುದೇನೆಂದರೆ, ದೇವರಿಗೆ ಮಾತ್ರ ತಿಳಿದಿರುವ ಒಂದು ಯೋಗ್ಯ ಸಮಯದಲ್ಲಿ, ಈ ವ್ಯಕ್ತಿ ಮುಕ್ತಿಯ ಅದ್ಭುತ ಕೃತ್ಯವನ್ನು ನಿಜವಾಗಿಯೂ ಅನುಭವಿಸುವಂತೆ ದೇವರು ಮಾಡುತ್ತಾರೆ.

ಇಲ್ಲಿಯ ವರೆಗೆ ನಮ್ಮ ಅಧ್ಯಯನದಲ್ಲಿ, ದೇವರ ಕಾನೂನಾದ ಬೈಬಲ್ ದೇವರು ಏನು ಮಾಡುವ ಅಗತ್ಯವಿದೆ ಎಂದು ಹೇಳುತ್ತದೆ ಎಂಬುದನ್ನು ತಿಳಿದುಕೊಳ್ಳಲು ಪ್ರಾರಂಭಿಸಿದ್ದೇವೆ. ಸಂಚಯಿತನಾಗಲು ನಾನು ಏನು ಮಾಡಬಹುದು? ಮುಕ್ತಿಗೆ

ಆಯ್ಕೆಯಾದವರಲ್ಲಿ ನನ್ನನ್ನೂ ಸಹ ಸೇರಿಸಲಾಗಿದೆ ಎಂದು ನಾನು ಖಚಿತಪಡಿಸಿಕೊಳ್ಳಲು ಯಾವುದಾದರು ದಾರಿ ಇದೆಯೆ? ಎಂಬ ಪ್ರಶ್ನೆಗಳನ್ನು ಮತ್ತೆ ಮತ್ತೆ ನಮ್ಮ ಮನಸ್ಸುಗಳು ಕೇಳುತ್ತಿರಬಹುದು. ನಮ್ಮ ಅಧ್ಯಯನದಲ್ಲಿ, ಈ ಬಹಳ ಗಂಭೀರ ಪ್ರಶ್ನೆಗಳನ್ನು ನಾವು ನೋಡುತ್ತೇವೆ.

***ಬೈಬಲ್ ನ ಅನುಸಾರ ಆಧ್ಯಾತ್ಮಿಕ ಕೆಲಸದ ವ್ಯಾಖ್ಯೆ***

ನಮ್ಮ ಅಧ್ಯಯನದ ಈ ಹಂತದಲ್ಲಿ, ಸಂಚಯಿತರಾಗುವ ವಿಷಯದ ಮೇಲೆ ಬಹಳ ಅವಲಂಬಿತವಾಗಿರುವ ಒಂದು ಪರಿಕಲ್ಪನೆಯನ್ನು ನಾವು ಈಗ ಪರಿಚಯಿಸಬೇಕು. ಅದು ಬೈಬಲ್ ನ ಅನುಸಾರ ಆಧ್ಯಾತ್ಮಿಕ "ಕೆಲಸ"ದ ವ್ಯಾಖ್ಯೆಗೆ ಸಂಬಂಧಿಸಿದೆ. ಎಫೆಸದವರಿಗೆ 2:8-9 ಮತ್ತು ಗಲಾತ್ಯದವರಿಗೆ 2:16ರಲ್ಲಿ ಹೇಳಿರುವಂತೆ, ನಾವು ಮಾಡುವ ಯಾವುದೇ ಕೆಲಸದ ಪರಿಣಾಮವಾಗಿ ನಮಗೆ ಮುಕ್ತಿ ಸಿಗಲು ಸಾಧ್ಯವಿಲ್ಲ ಎಂದು ಬೈಬಲ್ ಮತ್ತೆ ಮತ್ತೆ ಒತ್ತಿ ಹೇಳುತ್ತಿದೆ. ಆದ್ದರಿಂದ, ದೇವರ ಅನುಸಾರ ಆಧ್ಯಾತ್ಮಿಕ "ಕೆಲಸ"ದ ವ್ಯಾಖ್ಯೆಗಳು ಏನೆಂದು ನಾವು ತಿಳಿದುಕೊಳ್ಳಬೇಕಾಗಿದೆ.

ಯೋನ 3:10ರಲ್ಲಿ ದೇವರು ಘೋಷಿಸುವುದೇನೆಂದರೆ:

**ದೇವರು ನಿನೆವೆಯವರ ಕಾರ್ಯಗಳನ್ನು ನೋಡಿ, ಅವರು ತಮ್ಮ ದುರ್ಮಾರ್ಗದಿಂದ ತಿರುಗಿಕೊಂಡರೆಂದು ತಿಳಿದು ಮನಮರುಗಿ, ತಾನು ಅವರಿಗೆ ಮಾಡುವೆನೆಂದು ಪ್ರಕಟಿಸಿದ್ದ ಕೇಡನ್ನು ಮಾಡದೆ ಬಿಟ್ಟನು.**

ಮತ್ತಾಯ 7:22ರಲ್ಲಿ, ದೇವರು ಹೀಗೆಂದು ಘೋಷಿಸುತ್ತಾರೆ:

**ಸ್ವಾಮೀ, ಸ್ವಾಮೀ, ನಿನ್ನ ಹೆಸರಿನ ಮೇಲೆ ನಾವು ಬೋಧನೆ ಹೇಳಲಿಲ್ಲವೇ? ನಿನ್ನ ಹೆಸರಿನ ಮೇಲೆ ದೆವ್ವಗಳನ್ನು ಬಿಡಿಸಲಿಲ್ಲವೇ? ನಿನ್ನ ಹೆಸರಿನ ಮೇಲೆ ಅನೇಕ ಮಹತ್ಕಾರ್ಯಗಳನ್ನು ಮಾಡಲಿಲ್ಲವೇ ಎಂದು ಆ ದಿನದಲ್ಲಿ ಎಷ್ಟೋ ಜನರು ನನಗೆ ಹೇಳುವರು.**

*ನಾವು ದೇವರ ಆಜ್ಞೆಗಳಿಗೆ ವಿಧೇಯರಾಗಿರುವಾಗಲೆಲ್ಲ ದೇವರನ್ನು ಸಂತೋಷಗೊಳಿಸುವ ಕೆಲಸವನ್ನು ಮಾಡುತ್ತಿದ್ದೇವೆ.*

ಬೈಬಲ್ ನ ಈ ಶ್ಲೋಕಗಳಿಂದ ಮತ್ತು ಇತರ ಶ್ಲೋಕಗಳಿಂದ, ದೇವರ ಆಜ್ಞೆಗಳಿಗೆ ನಾವು ವಿಧೇಯರಾಗಿರುವಾಗಲೆಲ್ಲ ದೇವರನ್ನು ಸಂತೋಷಗೊಳಿಸುವ ಕೆಲಸವನ್ನು ನಾವು ಮಾಡುತ್ತಿದ್ದೇವೆ ಎಂದು ಕಲಿಯುತ್ತೇವೆ. ದೇವರ ಆಜ್ಞೆಗಳಿಗೆ ನಾವು ವಿಧೇಯರಾಗಿರದಿದ್ದಾಗ,

ದೇವರನ್ನು ಕೋಪಗೊಳಿಸುವ ಕೆಲಸವನ್ನು ನಾವು ಮಾಡುತ್ತಿದ್ದೇವೆ. ಉದಾಹರಣೆಗೆ, ಕ್ರಿಸ್ತರನ್ನು ನಂಬಲು ಸಂಪೂರ್ಣ ಮನುಕುಲಕ್ಕೆ ದೇವರು ಆಜ್ಞಾಪಿಸುತ್ತಾರೆ. ನಂಬುವುದು ನಾವು ಮಾಡುವ ಒಂದು ಕೆಲಸವೆ? ಖಂಡಿತವಾಗಿಯೂ ಹೌದು. "ನಂಬು" ಎಂಬ ಪದ "ನಂಬಿಕೆ" ಎಂಬ ನಾಮಪದದ ಕ್ರಿಯಾಪದ ರೂಪ. "ನಂಬಿಕೆ"ಯ ಕೆಲಸ"ದ ಬಗ್ಗೆ ಬೈಬಲ್ ಒಂದನೆ ಥೆಸಲೋನಿಕದವರ 1:3 ಮತ್ತು ಎರಡನೆ ಥೆಸಲೋನಿಕದವರ 1:11 ಎರಡರಲ್ಲಿಯೂ ಸ್ಪಷ್ಟವಾಗಿ ಪ್ರಸ್ತಾಪಿಸುತ್ತದೆ.

ಒಂದನೆ ಥೆಸಲೋನಿಕದವರ 1, ಶ್ಲೋಕ 3 ನಮಗೆ ಹೀಗೆಂದು ಹೇಳುತ್ತಿದೆ:

**ನಾವು ನಂಬಿಕೆಯ ಫಲವಾದ ನಿಮ್ಮ ಕೆಲಸವನ್ನೂ ಪ್ರೀತಿಪೂರ್ವಕವಾದ ನಿಮ್ಮ ಪ್ರಯಾಸವನ್ನೂ ನಮ್ಮ ಕರ್ತನಾದ ಯೇಸು ಕ್ರಿಸ್ತನ ಮೇಲಣ ನಿರೀಕ್ಷೆಯಿಂದುಂಟಾದ ನಿಮ್ಮ ಸ್ಥೈರಣೆಯನ್ನೂ ನಮ್ಮ ತಂದೆಯಾದ ದೇವರ ಮುಂದೆ ಎಡೆಬಿಡದೆ ಜ್ಞಾಪಕಮಾಡಿಕೊಂಡು,**

ಮತ್ತು ಎರಡನೆ ಥೆಸಲೋನಿಕದವರ 1, ಶ್ಲೋಕ 11ರಲ್ಲಿ ನಾವು ಹೀಗೆಂದು ಓದುತ್ತೇವೆ:

**ಆ ದಿನವನ್ನು ನಾವು ಎದುರುನೋಡುತ್ತಾ ನಿಮಗೋಸ್ಕರ ಯಾವಾಗಲೂ ಪ್ರಾರ್ಥನೆ ಮಾಡಿ - ನಮ್ಮ ದೇವರು ನಿಮ್ಮನ್ನು ಕರೆದದ್ದಕ್ಕೆ ತಾನೇ ನಿಮ್ಮನ್ನು ಯೋಗ್ಯರೆಂದು ಎಣಿಸಬೇಕೆಂತಲೂ ಸತ್ಕ್ರಿಯೆಗಳಲ್ಲಿ ಸಂತೋಷಿಸುವ ನಿಮ್ಮ ಸಕಲ ಆಲೋಚನೆಯನ್ನೂ ನಂಬಿಕೆಯ ಫಲವಾದ ನಿಮ್ಮ ಕೆಲಸವನ್ನೂ ಶಕ್ತಿಪೂರ್ವಕವಾಗಿ ಸಿದ್ಧಿಗೆ ತರಬೇಕೆಂತಲೂ ಬೇಡಿಕೊಳ್ಳುತ್ತೇವೆ.**

ನಂಬಿಕೆಯ ಫಲವಾದ ಕೆಲಸಗಳ ಬಗ್ಗೆ ಮತ್ತು ಪ್ರೀತಿಪೂರ್ವಕವಾದ ಪ್ರಯಾಸಗಳ ಬಗ್ಗೆಯೂ ದೇವರು ಅರ್ಥಪೂರ್ಣವಾಗಿ ಪ್ರಸ್ತಾಪಿಸುತ್ತಾರೆ. ಆದ್ದರಿಂದ, ನಂಬಿಕೆಯ ಮತ್ತು ಪ್ರೀತಿಯ ಆರಾಧನೆಗಳು ನಾವು ಮಾಡುವ ಕೆಲಸಗಳು ಎಂದು ನಮಗೆ ಸ್ಪಷ್ಟವಾಗಿ ಅರ್ಥವಾಗುತ್ತದೆ. ಅಂತೆಯೆ, ನಮಗೆ ಆಜ್ಞಾಪಿಸಲಾಗಿರುವಂತೆ, ಬೈಬಲ್ ನ ಯಾವುದೇ ದೈವಾಜ್ಞೆಗಳಿಗೆ ವಿಧೇಯರಾಗಿರುವುದು ನಾವು ಮಾಡುವ ಕೆಲಸ. ಆದ್ದರಿಂದ, ಪ್ರಾರ್ಥಿಸಲು, ಕ್ರಿಸ್ತರನ್ನು ಹುಡುಕಲು, ಸಂಚಯಿತರಾಗಲು, ದೇವರನ್ನು ಕರೆಯಲು, ದೇವರ ಸೇವೆ ಮಾಡಲು, ಬೈಬಲ್ ಅನ್ನು ಓದಿ ಅಧ್ಯಯನ ಮಾಡಲು, ಇತ್ಯಾದಿಗಳನ್ನು ಮಾಡಲು ದೇವರು ನಮಗೆ ಆಜ್ಞಾಪಿಸಿದಾಗ, ಈ ಪ್ರತಿಯೊಂದು ಆಜ್ಞೆಯಲ್ಲಿ ದೇವರು ನಮಗೆ ಕೆಲಸ ಮಾಡಲು ಆಜ್ಞಾಪಿಸುತ್ತಿದ್ದಾರೆ ಎಂಬುದನ್ನು ನಾವು ದೃಢವಾಗಿ ಮನಸ್ಸಿನಲ್ಲಿಟ್ಟುಕೊಳ್ಳಬೇಕು. ಅದಕ್ಕಾಗಿಯೆ, ಉದಾಹರಣೆಗೆ, "ಪ್ರೀತಿ" ದೇವರ ಆಜ್ಞೆಗಳಿಗೆ ವಿಧೇಯರಾಗಿರುವ ಲಕ್ಷಣ ಎಂದು ದೇವರು ವಿವರಿಸುತ್ತಾರೆ. ನಾವು ದೇವರನ್ನು ಮತ್ತು ನಮ್ಮ ನೆರೆಹೊರೆಯವರನ್ನು

ಪ್ರೀತಿಸಿದಾಗ, ನಾವು ಆಧ್ಯಾತ್ಮಿಕ ಕೆಲಸವನ್ನು ಮಾಡುತ್ತಿದ್ದೇವೆ. ಸಂಚಯಿತರಾಗುವುದಕ್ಕೆ ಸಂಬಂಧಿಸಿದ ಬೈಬಲ್ ನ ಶ್ಲೋಕಗಳನ್ನು ನಾವು ಜಾಗರೂಕತೆಯಿಂದ ಅಧ್ಯಯನ ಮಾಡುವಾಗ, ಯಾವುದೇ ಆಜ್ಞೆಗೆ ವಿಧೇಯರಾಗಿರುವುದು ನಾವು ಮಾಡುವ ಕೆಲಸ ಎಂಬ ತತ್ವ ನಾವೆಂದೂ ಮರೆಯಬಾರದಂತಹ ಒಂದು ಬಹಳ ಮುಖ್ಯವಾದ ತತ್ವ.

***ನಮ್ಮ ಮುಕ್ತಿಗೆ ಅಗತ್ಯವಿರುವ ಎಲ್ಲಾ ಕೆಲಸವನ್ನು ಕ್ರಿಸ್ತರು ಮಾಡಿದರು***

ನಾವು ಯಾವಾಗಲು ನೆನಪಿನಲ್ಲಿಟ್ಟುಕೊಳ್ಳಬೇಕಾದ ಇನ್ನೊಂದು ಅತ್ಯಂತ ಮುಖ್ಯವಾದ ತತ್ವವಿದೆ. ಅದೇನೆಂದರೆ, ಒಬ್ಬ ವ್ಯಕ್ತಿಯನ್ನು ಸಂಚಯಿತನನ್ನಾಗಿ ಮಾಡಲು ಅಗತ್ಯವಿರುವ ಕೆಲಸವನ್ನು ದೇವರು ಮಾತ್ರ ಮಾಡಬಲ್ಲರು. ದೇವರು ಸಂಚಯಿತರನ್ನಾಗಿ ಮಾಡಲು ಯೋಜಿಸಿದ್ದವರ ಆಯ್ಕೆ, ಆತ ಯಾರನ್ನು ಸಂಚಯಿತರನ್ನಾಗಿ ಮಾಡಲು ಬಂದರೊ ಅವರ ಪರವಾಗಿ, ಕ್ರಿಸ್ತರು ತೆತ್ತ ಬೆಲೆಯಾದ ಪಾಪದಂಡನೆ, ತಾನು ಸಂಚಯಿತರನ್ನಾಗಿ ಮಾಡಿದವರಿಗೆ ದೇವರು ನೀಡುವ ಹೊಸ ಆತ್ಮ, ಇವೆಲ್ಲವು ಕೇವಲ ದೇವರು ಮಾತ್ರ ಮಾಡಬಲ್ಲ ಕೆಲಸಗಳು.

*ಒಬ್ಬ ವ್ಯಕ್ತಿಯನ್ನು ಸಂಚಯಿತನನ್ನಾಗಿ ಮಾಡಲು ಅಗತ್ಯವಿರುವ ಕೆಲಸವನ್ನು ದೇವರು ಮಾತ್ರ ಮಾಡಬಲ್ಲರು.*

ಸತ್ಯವೆಂದರೆ, ಯಾವುದೇ ಮನುಷ್ಯ ಅಸ್ತಿತ್ವದಲ್ಲಿರುವುದಕ್ಕೆ ಮುಂಚೆಯೆ ಆಯ್ಕೆನಡೆದಿತ್ತು. ಮೇಲಾಗಿ, ತಾತ್ವಿಕವಾಗಿ, ಆಯ್ಕೆಯಾದವರ ಪಾಪಗಳಿಗೆ ಬೆಲೆ ತೆರುವುದನ್ನು ಸೃಷ್ಟಿಯ ಮುಂಚೆಯೆ ಪೂರ್ಣಗೊಳಿಸಲಾಗಿತ್ತು ಎಂದು ಪ್ರಕಟನೆ 13:8ರಲ್ಲಿ ಹೇಳಲಾಗಿದೆ. ಹೀಗೆ, ಮುಕ್ತಿಯನ್ನು ಪಡೆಯಲು ಯಾವ ಮನುಷ್ಯನಿಗೂ, ಸ್ವಲ್ಪ ಮಟ್ಟಿಗಾದರೂ, ಸಹಾಯ ಮಾಡಬಹುದಾದ ಯಾವುದೇ ಕೆಲಸವನ್ನು ಮಾಡುವುದು ಸಂಪೂರ್ಣವಾಗಿ ಅಸಾಧ್ಯವಾಗಿದೆ.

***ಹಾಗಾದರೆ ದೇವರು ನಮಗೆ ಈ ಆಜ್ಞೆಗಳನ್ನು ಏಕೆ ನೀಡುತ್ತಾರೆ?***

ನಂಬಲು, ಪ್ರಾರ್ಥಿಸಲು, ಇತ್ಯಾದಿ ಕೆಲಸಗಳನ್ನು ಮಾಡಲು ದೇವರು ನಮಗೆ ಆಜ್ಞೆಗಳನ್ನು ನೀಡುತ್ತಾರೆ, ಆದರೆ, ಈ ಆಜ್ಞೆಗಳಿಗೆ ವಿಧೇಯರಾಗಿರಲು ನಾವು ಹೇಗೆ ತಾನೆ ಪ್ರಾರಂಭಿಸುವುದು? ನಾವು ಆಧ್ಯಾತ್ಮಿಕವಾಗಿ ಸತ್ತಿದ್ದೇವೆ. ಯೆಹೆಜ್ಕೇಲನು 37:1-14ರಲ್ಲಿ ಹೇಳಿರುವಂತೆ, ಒಣಗಿದ ಮೂಳೆಗಳ ಕಣಿವೆಯನ್ನು ಮತ್ತು ಯೋಹಾನ 11:39ರಲ್ಲಿ ಹೇಳಿರುವಂತೆ, ದುರ್ನಾತ ಬೀರುತ್ತಿರುವ ಹೆಣವನ್ನು ಸಂಚಯಿತವಾಗದ ಮನುಕುಲದ

ಮಾದರಿಯಾಗಿ ನೀಡುತ್ತಾರೆ. ರೋಮಾಪುರದವರಿಗೆ 3, ಶ್ಲೋಕ 10-12ರಲ್ಲಿ ದೇವರು ಹೀಗೆಂದು ಒತ್ತಿ ಹೇಳುತ್ತಾರೆ:

**ಇದು ಶಾಸ್ತ್ರದಲ್ಲಿ ಬರೆದಿರುವ ಮಾತುಗಳಿಗೆ ಸರಿಯಾಗಿದೆ; ಅವು ಯಾವವೆಂದರೆ - ನೀತಿವಂತನು ಇಲ್ಲ, ಒಬ್ಬನಾದರೂ ಇಲ್ಲ; ತಿಳುವಳಿಕೆಯುಳ್ಳವನು ಇಲ್ಲ, ದೇವರನ್ನು ಹುಡುಕುವವನು ಇಲ್ಲ. ಎಲ್ಲರೂ ದಾರಿ ತಪ್ಪಿ ನಡೆಯುತ್ತಾರೆ, ಎಲ್ಲರೂ ಕೆಲಸಕ್ಕೆ ಬಾರದವರಾದರು. ಒಳ್ಳೇದನ್ನೆ ಮಾಡುವವನು ಇಲ್ಲ, ಒಬ್ಬನಾದರೂ ಇಲ್ಲ.**

ನಿಜವಾಗಿಯೂ, ಸಂಚಯಿತವಾಗದ ಮನುಕುಲದ ಸಂಪೂರ್ಣ ನಿರ್ಜೀವ ಅವಸ್ಥೆಯನ್ನು ಬೈಬಲ್ ಸ್ಪಷ್ಟವಾಗಿ ಒತ್ತಿ ಹೇಳುತ್ತದೆ. ಆದಾಮನ ಪತನದಿಂದ ಪ್ರಾರಂಭವಾಗಿ, ದೇವರು ಅವನೊಳಗೆ ವಾಸಿಸುತ್ತಿಲ್ಲ ಮತ್ತು ಅವನು ದೇವರಿಂದ ಆಧ್ಯಾತ್ಮಿಕವಾದ ಶಕ್ತಿ ಪಡೆಯುತ್ತಿಲ್ಲ ಎಂಬ ಸತ್ಯದ ದೃಷ್ಟಿಯಿಂದ ಮನುಷ್ಯ ಆಧ್ಯಾತ್ಮಿಕವಾಗಿ ಸತ್ತಿದ್ದಾನೆ. ಮತ್ತು ಮನುಷ್ಯನ ಪಾಪಗಳ ಕಾರಣ ಅವನು ದೇವರ ಕಡುಕೋಪಕ್ಕೆ ಪಾತ್ರನಾಗಿದ್ದಾನೆ, ಅಂದರೆ, ಜಗತ್ತಿನ ಅಂತ್ಯದಲ್ಲಿ, ಅವನು ನಾಶವಾಗುತ್ತಾನೆ ಮತ್ತು ಅವನು ಎಂದೂ ಬದುಕುವುದಿಲ್ಲ. ನಾವು ಈ ಹಿಂದೆ ಗಮನಿಸಿರುವಂತೆ, ಅವನ ಸಂಪೂರ್ಣ ವ್ಯಕ್ತಿತ್ವದಲ್ಲಿ, ಅವನಿಗೆ ವಿಪರೀತವಾಗಿ ಪಾಪದ ಸೋಂಕು ಉಂಟಾಗಿದೆ.

ಆದರೆ, ಅವನು ಆಧ್ಯಾತ್ಮಿಕವಾಗಿ ಸತ್ತಿದ್ದರೂ, ಸ್ವಲ್ಪ ಮಟ್ಟಿಗೆ ದೇವರ ಕಾನೂನುಗಳಿಗೆ ವಿಧೇಯನಾಗಿರಲು ಅವನಲ್ಲಿ ಸಾಮರ್ಥ್ಯವಿದೆ. ಹೀಗೆ, ಸ್ವಲ್ಪ ಮಟ್ಟಿಗೆ ಅವನು ಕ್ರಿಸ್ತರನ್ನು ನಂಬಲು ಸಾಧ್ಯವಿದೆ, ಅವನು ಪ್ರಾರ್ಥಿಸಬಹುದು, ಅವನು ದೇವರನ್ನು ಹುಡುಕಬಹುದು, ಮತ್ತು ಕುಡಿತ, ಸುಳ್ಳು ಹೇಳುವುದು, ಇತ್ಯಾದಿ ಕೆಲವು ಪಾಪಗಳಿಂದ ಅವನು ವಿಮುಖನಾಗಬಹುದು. ಕನಿಷ್ಠಪಕ್ಷ ಎರಡು ಕಾರಣಗಳಿಂದಾಗಿ ಅವನು ಹೀಗೆ ಮಾಡಲು ಸಾಧ್ಯವಾಗಿದೆ.

ಮೊದಲ ಕಾರಣವೇನೆಂದರೆ, ರೋಮಾಪುರದವರಿಗೆ 2:14-15 ಮತ್ತು ಯೋಹಾನ 8:9ಗಳಲ್ಲಿ ಹೇಳಿರುವಂತೆ, ಅವನು ಪಾಪ ಮಾಡಿದ ತಪ್ಪಿತಸ್ಥನೆಂದು ಹೇಳುವ ಒಂದು ಆತ್ಮಸಾಕ್ಷಿ ಅವನಲ್ಲಿ ಇನ್ನೂ ಇದೆ. ಇದು ಹೀಗೇಕೆಂದರೆ, ಮನುಷ್ಯ ದೇವರ ಸ್ವರೂಪದಲ್ಲಿ ಸೃಷ್ಟಿಯಾಗಿದ್ದಾನೆ ಮತ್ತು ಅವನು ದೇವರಿಂದ ಸಂಪೂರ್ಣವಾಗಿ ಬೇರ್ಪಟ್ಟಿದ್ದರೂ, ದೇವರ ಕಾನೂನು ಸ್ವಲ್ಪ ಮಟ್ಟಿಗೆ ಇನ್ನೂ ಅವನ ವ್ಯಕ್ತಿತ್ವದೊಳಗೆ ನೆಲೆಸಿದೆ.

ಎರಡನೆಯ ಕಾರಣವೇನೆಂದರೆ, ಆ ವ್ಯಕ್ತಿಯನ್ನು ಸಂಚಯಿತನನ್ನಾಗಿ ಮಾಡುವುದು ದೇವರ ಉದ್ದೇಶವಲ್ಲದಿದ್ದರೂ, ಸಂಚಯಿತನಾಗದ ವ್ಯಕ್ತಿಯ ಬದುಕಿನಲ್ಲಿ ದೇವರು ತನ್ನ

ಇಚ್ಛೆಯನ್ನು ನಡೆಸಬಹುದು. ಈ ತತ್ವದ ಕೆಲಸವನ್ನು ಅರಣ್ಯಕಾಂಡ 22:12-13ರಲ್ಲಿ ಹೇಳಿರುವಂತೆ, ದುಷ್ಟನಾದ ಬೀಳಾಮನ ಬದುಕಿನಲ್ಲಿ ಮತ್ತು ಒಂದನೆ ಸಮುವೇಲನು 10:9-12ರಲ್ಲಿ ಹೇಳಿರುವಂತೆ, ಇಸ್ರಾಯೇಲಿನ ಮೊದಲ ರಾಜನಾದ ಸೌಲನ ಬದುಕಿನಲ್ಲಿ ನಾವು ಕಾಣುತ್ತೇವೆ.

ಮುಂದೆ, ಆ ಸಂಚಯಿತನಾಗದ ವ್ಯಕ್ತಿಯನ್ನು ದೇವರು ಆಯ್ಕೆ ಮಾಡಿದ್ದರೆ ಮತ್ತು ಒಂದು ಹೊಸ ಹೃದಯವನ್ನು, ಒಂದು ಪುನರುಜ್ಜೀವನಗೊಂಡ ಆತ್ಮವನ್ನು ದೇವರು ಅವನಿಗೆ ನಿಜವಾಗಿಯೂ ಕೊಡುವ ಮೊದಲು, ಅವನ ಎಲ್ಲಾ ಪಾಪಗಳಿಗೆ ಬೆಲೆ ತೆತ್ತಿದ್ದರೆ, ಯೋಹಾನ 6:44ರಲ್ಲಿ ಹೇಳಿರುವಂತೆ, ತಂದೆಯಾದ ದೇವರು ಅವನನ್ನು ತನ್ನತ್ತ ಸೆಳೆಯುತ್ತಿರಬಹುದು. ಆದರೆ, ಈ ವ್ಯಕ್ತಿ ದೇವರ ದೈವಾಜ್ಞೆಗಳಿಗೆ ವಿಧೇಯನಾಗಿರಲು ಬಹಳ ಪ್ರಯತ್ನಿಸುತ್ತಿರುವಾಗ, ಈ ಮೇಲಿನ ಯಾವ ಕಾರಣದಿಂದಾಗಿ ತಾನು ದೇವರ ಆಜ್ಞೆಗಳಿಗೆ ವಿಧೇಯನಾಗಿರಲು ಪ್ರಯತ್ನಿಸುತ್ತಿದ್ದಾನೆ ಎಂದು ಅವನಿಗೆ ಸಂಪೂರ್ಣವಾಗಿ ತಿಳಿಯುವುದಿಲ್ಲ. ಅಂದರೆ, ತನ್ನ ವಿಧೇಯತೆಯಿಂದಾಗಿ ಮುಕ್ತಿ ಖಚಿತವಾಗಿದೆ ಎಂದು ಅವನು ಒಂದು ಕ್ಷಣಕ್ಕೂ ಆಲೋಚಿಸಬಾರದು ಮತ್ತು ಅದಕ್ಕೆ ಅವನ ಬಳಿ ಯಾವುದೇ ಪುರಾವೆ ಕೂಡ ಇಲ್ಲ.

***ಮನುಕುಲದೊಂದಿಗೆ ದೇವರ ರಹಸ್ಯಮಯ ಸಂಬಂಧ***

ಮೇಲಾಗಿ, ದೇವರ ಮತ್ತು ಮನುಷ್ಯ ಜಾತಿಯಲ್ಲಿರುವ ಪ್ರತಿಯೊಂದು ವ್ಯಕ್ತಿಯ ನಡುವೆ ಒಂದು ರಹಸ್ಯಮಯ, ಸಕ್ರಿಯ ವೈಯಕ್ತಿಕ ಸಂಬಂಧ ಒಂದಿದೆ. ಇದು, ದೇವರ ಮತ್ತು ಆತ ಮುಕ್ತಿಗೆ ಆಯ್ಕೆ ಮಾಡಿದ ವ್ಯಕ್ತಿಗಳ ನಡುವೆ ಮಾತ್ರವಲ್ಲ, ದೇವರ ಮತ್ತು ಖಂಡಿತವಾಗಿಯು ನಾಶವಾಗಲಿರುವವರ, ಆತ ಆಯ್ಕೆ ಮಾಡದ ವ್ಯಕ್ತಿಗಳ ನಡುವೆ ಕೂಡ ನಿಜವಾಗಿದೆ.

ಯೇಸುವಿನ ದೃಷ್ಟಿಯಲ್ಲಿದ್ದ ಹೆಚ್ಚಿನ ಯೆರೂಸಲೇಮ್ ನಾಶವಾಗುವುದು ಎಂದು ಬೈಬಲ್ ನಲ್ಲಿ ಕೊಡಲಾಗಿರುವ ಪುರಾವೆ ನಮಗೆ ಹೇಳಿದರೂ, ಲೂಕ 19:41ರಲ್ಲಿ ಹೇಳಿರುವಂತೆ, ಯೇಸು ಯೆರೂಸಲೇಮಿಗಾಗಿ ಕಣ್ಣೀರಿಟ್ಟರು ಎಂಬ ಸತ್ಯದಲ್ಲಿ ನಾವು ಇದನ್ನು ಕಾಣುತ್ತೇವೆ. ಯೆಹೆಜ್ಕೇಲನು 33:11ರಲ್ಲಿ ಹೇಳಿರುವಂತೆ, ದುಷ್ಟರ ಸಾವಿನಲ್ಲಿ ದೇವರಿಗೆ ಸಂತೋಷವಿಲ್ಲ ಎಂದು ಬೈಬಲ್ ಘೋಷಿಸುವ ಸತ್ಯದಲ್ಲಿ ನಾವು ಇದನ್ನು ಕಾಣುತ್ತೇವೆ. ರೋಮಾಪುರದವರಿಗೆ 2:15ರಲ್ಲಿ ಹೇಳಿರುವಂತೆ, ಸ್ವಲ್ಪ ಮಟ್ಟಿಗೆ ದೇವರ ಕಾನೂನು ಎಲ್ಲಾ ಮನುಷ್ಯರ ಹೃದಯಗಳ ಮೇಲೂ ಬರೆಯಲಾಗಿದೆ ಎಂಬ ಸತ್ಯದಲ್ಲಿ ನಾವು ಇದನ್ನು ಕಾಣುತ್ತೇವೆ.

ಆದಿಕಾಂಡ 9:6ರಲ್ಲಿ ಹೇಳಿರುವಂತೆ, ದೇವರ ಸ್ವರೂಪದಲ್ಲಿ ಮತ್ತು ಯಥಾರೂಪವಾಗಿ ಸೃಷ್ಟಿಸಲ್ಪಟ್ಟ ಒಬ್ಬ ಮನುಷ್ಯನನ್ನು ಕೊಲೆ ಮಾಡಿದ ಕಾರಣಕ್ಕಾಗಿ, ದೇವರ ಕಾನೂನಿನ ಪ್ರಕಾರ, ಒಬ್ಬ ಕೊಲೆಗಾರನು ಸಾಯಬೇಕೆಂಬ ಸತ್ಯದಲ್ಲಿ ನಾವು ಇದನ್ನು ಕಾಣುತ್ತೇವೆ. ನಮ್ಮ ಶತ್ರುಗಳನ್ನು ನಾವು ಪ್ರೀತಿಸಬೇಕೆಂಬ ದೇವರ ಆಜ್ಞೆಯಲ್ಲಿ ನಾವು ಇದನ್ನು ಕಾಣುತ್ತೇವೆ. ಆಯ್ಕೆಯಾಗದ ಯಾವುದೇ ವ್ಯಕ್ತಿ ದೇವರ ಶತ್ರು ಎಂಬುದನ್ನು ನಾವು ನೆನಪಿನಲ್ಲಿಟ್ಟುಕೊಳ್ಳಬೇಕು, ಆದರೂ, ನಾವು ಪ್ರೀತಿಸಬಾರದಂತಹ ಯಾವ ಮನುಷ್ಯನೂ ಇಲ್ಲ. ಮತ್ತಾಯ 5:22ರಲ್ಲಿ ದೇವರು ನೀಡುವ ಎಚ್ಚರಿಕೆಯಲ್ಲಿ ನಾವು ಇದನ್ನು ಕಾಣುತ್ತೇವೆ, ನಾವು ಯಾರನ್ನೂ "ಛೀ ನೀಚ", ಅಂದರೆ, ಕೆಲಸಕ್ಕೆ ಬಾರದವ ಅಥವ ಮೂರ್ಖ, ಎಂದು ಕರೆಯಬಾರದು. ಯಾವ ಜೀವಂತ ವ್ಯಕ್ತಿಯನ್ನೂ ಮುಕ್ತಿಯ ಭರವಸೆ ಇಲ್ಲದವನು ಎಂದು ನಾವು ಪರಿಗಣಿಸಬಾರದು.

ಮೇಲಿನ ಪುರಾವೆಗಳಿಂದ, ತನ್ನ ಪಾಪದ ಕಾರಣ ಮನುಷ್ಯ ಆಧ್ಯಾತ್ಮಿಕವಾಗಿ ಸತ್ತವನಾದರೂ, ಅವನು ದೇವರಿಂದ ಶಕ್ತಿ ಪಡೆಯದಿದ್ದರೂ, ದೇವರು ಅವನೊಳಗೆ ವಾಸಿಸದಿದ್ದರೂ ಅವನು ದೇವರಿಂದ ಬೇರ್ಪಡಲಿಲ್ಲ ಅಥವ ದೇವರಿಂದ ದೂರ ಎಸೆಯಲ್ಪಡಲಿಲ್ಲ ಎಂದು ನಾವು ತೀರ್ಮಾನಿಸಬಹುದು. ಅವನು ಸಂಚಯಿತನಾಗದ, ಆಧ್ಯಾತ್ಮಿಕವಾಗಿ ಸತ್ತವನಂತೆ ಇರುವ ಪರಿಸ್ಥಿತಿಯಲ್ಲಿಯೂ ಅವನು ದೇವರಿಗೆ ಸಂಪೂರ್ಣವಾಗಿ ವಿಧೇಯನಾಗಿರಬೇಕು ಎಂಬುವುದರಲ್ಲಿ ಅವನಿಗೆ ಪೂರ್ತಿ ಜವಾಬ್ದಾರಿ ಇದೆ, ಮತ್ತು ನಿಜವಾಗಿಯೂ ಅವನಲ್ಲಿ ದೇವರಿಗೆ ವಿಧೇಯನಾಗಿರಲು ಸ್ವಲ್ಪ ಶಕ್ತಿಯಿದೆ. ಯೆಶಾಯ 66:24, ಯೆರೆಮೀಯ 23:39-40, 24:10ರಲ್ಲಿ ಹೇಳಿರುವಂತೆ, ಕೊನೆಯ ದಿನದಂದು ಮಾತ್ರ ಅವನು ದೇವರಿಂದ ಸಂಪೂರ್ಣವಾಗಿ ಬೇರ್ಪಡುತ್ತಾನೆ.

ಹೀಗೆ, ಪ್ರತಿಯೊಬ್ಬ ಮನುಷ್ಯ ದೇವರನ್ನು ನಂಬುವ ಕೆಲಸ ಮಾಡುತ್ತಾನೆ ಎಂದು ದೇವರು ನಿರೀಕ್ಷಿಸಬಹುದು, ಹೀಗೆ ಮಾಡಿದಾಗ, ಅವರು ಬೈಬಲ್ ನ ದೈವಾಜ್ಞೆಗಳಿಗೆ ಸ್ವಲ್ಪ ಮಟ್ಟಿಗೆ ವಿಧೇಯರಾಗಿರಲು ಪ್ರಯತ್ನಿಸುತ್ತಾರೆ. ನಮ್ಮ ಅಧ್ಯಯನದಲ್ಲಿ ಹಿಂದೆ ಗಮನಿಸಿರುವಂತೆ, ಅರಣ್ಯಕಾಂಡ 22 ಮತ್ತು 23ನೇ ಅಧ್ಯಾಯಗಳಲ್ಲಿ, ದುಷ್ಟ ಬಿಳಾಮನ ಪರಿಸ್ಥಿತಿ ಇದ್ದಂತೆ, ದೇವರು ಒಬ್ಬ ವ್ಯಕ್ತಿಯ ಬದುಕಿನಲ್ಲಿ ಕೆಲಸ ಮಾಡಿದರೆ, ಅಥವ ಯೋಹಾನ 6:44ರಲ್ಲಿ ಹೇಳಿರುವಂತೆ, ದೇವರಿಂದ ಆಯ್ಕೆಯಾಗಿದ್ದರೂ ಇನ್ನೂ ಹೊಸ ಶಾಶ್ವತ ಆತ್ಮವನ್ನು ಪಡೆಯದ ವ್ಯಕ್ತಿಯ ಬದುಕಿನಲ್ಲಿ ದೇವರು ಕೆಲಸ ಮಾಡುವುದರಿಂದ ಈ ವಿಧೇಯತೆ ಸ್ವಯಂ ದೇವರಿಂದ ಹೆಚ್ಚಾಗಬಹುದು.

*ತನ್ನ ಕಾನೂನುಗಳಿಗೆ ವಿಧೇಯರಾಗಿರಬೇಕೆಂದು ಮನುಷ್ಯರಿಗೆ ಆಜ್ಞಾಪಿಸಲು ದೇವರಿಗೆ ಕಾನೂನುಬದ್ಧ ಅಧಿಕಾರವಿದೆ.*

ತನ್ನ ಕಾನೂನುಗಳಿಗೆ ವಿಧೇಯರಾಗಿರಬೇಕೆಂದು ಮನುಷ್ಯರಿಗೆ ಆಜ್ಞಾಪಿಸಲು ದೇವರಿಗೆ ಕಾನೂನುಬದ್ಧ ಅಧಿಕಾರವಿದೆ ಎಂಬುದನ್ನೂ ಕೂಡ ನಾವು ನೆನಪಿನಲ್ಲಿಟ್ಟುಕೊಳ್ಳಬೇಕು. ಮನುಕುಲ ದೇವರ ಸ್ವರೂಪದಲ್ಲಿ ಮತ್ತು ಆತನ ಯಥಾರೂಪವಾಗಿ ಸೃಷ್ಟಿಯಾದ ಕಾರಣ, ಸ್ವಯಂ ದೇವರಂತೆ, ಮನುಕುಲ ದೇವರ ಪುಸ್ತಕವಾದ ಬೈಬಲ್ ಗೆ ಸಂಪೂರ್ಣವಾಗಿ ಅಧೀನವಾಗಿದೆ. ಆದ್ದರಿಂದ, ಸಂಚಯಿತನಾಗಲು ಆಯ್ಕೆಯಾದ ಅಥವ ಆಯ್ಕೆಯಾಗದ ಸಂಚಯಿತನಾಗದ ವ್ಯಕ್ತಿಯ ಬದುಕಿನಲ್ಲಿ ಕ್ರಿಸ್ತರನ್ನು ನಂಬುವ ಕೆಲಸ ನೋಡಬಹುದೆಂದು ನಾವು ಅರ್ಥಮಾಡಿಕೊಳ್ಳಬೇಕು. ಅವನು ಕ್ರಿಸ್ತರನ್ನು ನಂಬಿದಾಗ, ಲೂಕ 13, ಶ್ಲೋಕ 24ರಲ್ಲಿರುವ ಬೈಬಲ್ ನ ಆಜ್ಞೆಯನ್ನು ಅನುಸರಿಸಲು ಅವನು ಬಹಳ ಪ್ರಯತ್ನಿಸುತ್ತಾನೆ. ಅಲ್ಲಿ ದೇವರು ಹೇಳುವುದೇನೆಂದರೆ:

**ಇಕ್ಕಟ್ಟಾದ ಬಾಗಿಲಿನಿಂದ ಒಳಕ್ಕೆ ಹೋಗುವದಕ್ಕೆ ಹೆಣಗಾಡಿರಿ. ಬಹುಜನ ಒಳಕ್ಕೆ ಹೋಗುವದಕ್ಕೆ ನೋಡುವರು, ಆದರೆ ಅವರಿಂದಾಗುವದಿಲ್ಲ ಎಂದು ನಿಮಗೆ ಹೇಳುತ್ತೇನೆ.**

ಮತ್ತು ಇಬ್ರಿಯರ 4, ಶ್ಲೋಕ 11ರಲ್ಲಿ ನಾವು ಹೀಗೆಂದು ಓದುತ್ತೇವೆ:

**ಆದದರಿಂದ ನಾವು ಆ ವಿಶ್ರಾಂತಿಯಲ್ಲಿ ಸೇರುವದಕ್ಕೆ ಪ್ರಯಾಸಪಡೋಣ; ನಮ್ಮಲ್ಲಿ ಒಬ್ಬರಾದರೂ ಅವರ ಅವಿಧೇಯತ್ವವನ್ನು ಅನುಸರಿಸುವವರಾಗಬಾರದು.**

ಆದರೂ, ಪುನಃ, ನಂಬಿಕೆಯ ಈ ಯಾವುದೇ ಕೆಲಸ ಅವನು ಸಂಚಯಿತನಾಗುವುದಕ್ಕೆ ಯಾವುದೇ ರೀತಿಯಲ್ಲಿ ಕೊಡುಗೆ ಅಥವ ಭರವಸೆ ನೀಡಲಾರದು ಏಕೆಂದರೆ, ಮುಕ್ತಿಗೆ ಅಗತ್ಯವಿರುವ ಎಲ್ಲಾ ಕೆಲಸ ಕ್ರಿಸ್ತರಿಂದ ಆ ವ್ಯಕ್ತಿ ಹುಟ್ಟುವ ಬಹಳ ಮುಂಚೆಯೆ ಸಂಪೂರ್ಣವಾಗಿ ಮಾಡಲಾಗಿತ್ತು ಎಂಬುದನ್ನು ಸರಿಯಾಗಿ ಒತ್ತಿ ಹೇಳಬೇಕು.

*ನಂಬಿಕೆಯ ಈ ಯಾವುದೇ ಕೆಲಸ ಅವನು ಸಂಚಯಿತನಾಗುವುದಕ್ಕೆ ಯಾವುದೇ ರೀತಿಯಲ್ಲಿ ಕೊಡುಗೆ ಅಥವ ಭರವಸೆ ನೀಡಲಾರದು ಏಕೆಂದರೆ, ಮುಕ್ತಿಗೆ ಅಗತ್ಯವಿರುವ ಎಲ್ಲಾ ಕೆಲಸ ಕ್ರಿಸ್ತರಿಂದ ಆ ವ್ಯಕ್ತಿ ಹುಟ್ಟುವ ಬಹಳ ಮುಂಚೆಯೆ ಸಂಪೂರ್ಣವಾಗಿ ಮಾಡಲಾಗಿದೆ.*

ಅದ್ಭುತವಾಗಿ, ಸಂಚಯಿತನಾಗದ ವ್ಯಕ್ತಿ ದೇವರ ಇಚ್ಛೆಯಂತೆ ಮಾಡಲು ಪ್ರಯತ್ನಿಸಿದಾಗ, ಎರಡು ದೊಡ್ಡ ಅನುಗ್ರಹಗಳು ನೆರವೇರಲ್ಪಡುತ್ತವೆ.

ಮೊದಲ ಅನುಗ್ರಹವೇನೆಂದರೆ, ದೇವರ ಆಜ್ಞೆಗಳಿಗೆ ಸಂಚಯಿತನಾಗದ ವ್ಯಕ್ತಿ ವಿಧೇಯನಾಗಿರಲು ಪ್ರಯತ್ನಿಸಿದಾಗ, ಅವನು ಬೈಬಲ್ ನೊಂದಿಗೆ ಹೆಚ್ಚು ಪರಿಚಿತನಾಗುವುದು ಅಗತ್ಯವಾಗುತ್ತದೆ. ಪಾಪದ ಭೀಕರತೆ, ಪಾಪದ ದಂಡ, ದೇವರ ನ್ಯಾಯ, ಮತ್ತು ದೇವರ ಕರುಣೆಯಂತಹ ಮುಖ್ಯವಾದ ಸತ್ಯಗಳ ಬಗ್ಗೆ ಅವನು ಕಲಿತಾಗ ಇದು ಅವನ ಬದುಕನ್ನು ಸಮೃದ್ಧಗೊಳಿಸುತ್ತದೆ.

ಎರಡನೆಯದಾಗಿ, ದೇವರ ಪದವನ್ನು ಕೇಳುವ ಪರಿಸರದಲ್ಲಿ ಇದು ಅವನನ್ನು ಇರಿಸುತ್ತದೆ. ಹೀಗೆ, ದೇವರು ಅವನನ್ನು ಸಂಚಯಿತನನ್ನಾಗಿ ಮಾಡಲು ಯೋಜಿಸಿದರೆ, ಅವನ ಹೃದಯಕ್ಕೆ ದೇವರ ಪದವನ್ನು ದೇವರು ಲೇಪಿಸಲು ಅವನು ಸರಿಯಾದ ಪರಿಸರದಲ್ಲಿ ಇದ್ದಾನೆ.

***ದೇವರು ಮನುಕುಲವನ್ನು ಪರೀಕ್ಷೆ ಮಾಡುತ್ತಾರೆ***

ನಂಬಿಕೆಯ ಕೆಲಸವನ್ನು ಮಾಡಬೇಕೆಂದು ದೇವರು ಜನರಿಗೆ ಆಜ್ಞಾಪಿಸಲು ಮೂರನೆಯ ಕಾರಣ ಒಂದಿದೆ. ಅದು ಆ ವ್ಯಕ್ತಿಯನ್ನು ನ್ಯಾಯ ವಿಚಾರಣೆಗೆ ಗುರಿಪಡಿಸುತ್ತದೆ ಅಥವ ಪರೀಕ್ಷೆ ಮಾಡುತ್ತದೆ. ದೇವರ ಆಜ್ಞೆಗಳಿಗೆ ವಿಧೇಯನಾಗಿರಲು ಅವನ ಪ್ರಯತ್ನಗಳು ಅವನ ಮುಕ್ತಿಗೆ ಸಹಾಯಕವಾಗುತ್ತಿವೆ ಎಂದು ಅವನು ಆಲೋಚಿಸಲು ಪ್ರಾರಂಭಿಸುತ್ತಾನೆಯೆ?

ದೇವರು ಸದಾಕಾಲವೂ ಮನುಷ್ಯನನ್ನು ಪರೀಕ್ಷೆ ಮಾಡುತ್ತಿರುತ್ತಾರೆ. ಆದಾಮ ಮತ್ತು ಹವ್ವ ಏದೆನ್ ಉದ್ಯಾನವನದಲ್ಲಿ ಪರೀಕ್ಷೆಗೆ ಒಳಪಟ್ಟರು. ಅವರು ಆ ಪರೀಕ್ಷೆಯಲ್ಲಿ ವಿಫಲರಾದರು ಮತ್ತು ಪಾಪ ಜಗತ್ತನ್ನು ಪ್ರವೇಶಿಸಿತು. ಆದಿಕಾಂಡ 22ರಲ್ಲಿ ಹೇಳಿರುವಂತೆ, ತನ್ನ ಮಗನನ್ನು ಬಲಿ ಕೊಡಲು ಅಬ್ರಹಾಮನು ಆಜ್ಞೆಯಿಂದ ಪರೀಕ್ಷೆಗೆ ಒಳಗಾದನು. ಅವನು ಪರೀಕ್ಷೆಯಲ್ಲಿ ವಿಫಲನಾಗಲಿಲ್ಲ. ಅವರು ಪಾಳುಭೂಮಿಯಲ್ಲಿದ್ದ 40ವರ್ಷಗಳ ಕಾಲದಲ್ಲಿ ಇಸ್ರಾಯೇಲ್ಯರು ವಿವಿಧ ರೀತಿಯಲ್ಲಿ ಪರೀಕ್ಷೆಗೆ ಒಳಗಾದರು. ಅವರು ಆ ಪರೀಕ್ಷೆಗಳಲ್ಲಿ ವಿಫಲರಾದರು. ನಿಜವಾದ ನಂಬಿಕೆಯುಳ್ಳವನು ಪ್ರತಿದಿನವೂ ಪರೀಕ್ಷೆಗೆ ಒಳಗಾಗುತ್ತಾನೆ ಏಕೆಂದರೆ, ಅವನ ಬಳಿ ಪಾಪಕ್ಕೆ ಅತಿಯಾಸೆ ಪಡುವ ದೇಹ ಇನ್ನೂ ಇದೆ. ಆತನನ್ನು ಪ್ರೇರೇಪಿಸಲು ಸೈತಾನನಿಗೆ ದೇವರು ಅನುಮತಿ ನೀಡಿ ಯೇಸುವನ್ನು ಪರೀಕ್ಷೆ ಮಾಡಿದರು. ಅದ್ಭುತವಾಗಿ, ಆತ ಪರೀಕ್ಷೆಯಲ್ಲಿ ವಿಫಲರಾಗಲಿಲ್ಲ.

ಅಂತೆಯೆ, ನಂಬಿಕೆಯ ಕೆಲಸ ಮಾಡಲು, ಮತ್ತು ಮುಕ್ತಿಗಾಗಿ ದೇವರಲ್ಲಿ ಮೊರೆಯಿಡುವ ಕೆಲಸ ಮಾಡಲು ಹೇಳುವ ಆಜ್ಞೆ ಕೂಡ ಒಂದು ಪರೀಕ್ಷೆ. ಇವು, ನಾವು ವಿಧೇಯರಾಗಿರಬೇಕಾದ ದೇವರ ದೈವಾಜ್ಞೆಗಳಾದರೂ, ಈ ದೈವಾಜ್ಞೆಗಳಿಗೆ ವಿಧೇಯತೆ ನಮ್ಮ ಮುಕ್ತಿಗೆ ಎಂದೂ

ಕಾರಣವಾಗಲು ಸಾಧ್ಯವಿಲ್ಲ ಎಂಬ ಸತ್ಯವನ್ನು ನಾವು ಸಂಪೂರ್ಣವಾಗಿ ಗುರುತಿಸುತ್ತೇವೆಯೆ?

ಈ ಪರೀಕ್ಷಾ ಕಾರ್ಯಕ್ರಮ ಬಹಳ ಗಂಭೀರವಾದದ್ದು. ಸ್ವಭಾವತಃ, ಮನುಷ್ಯ ಗರ್ವಿಷ್ಠ ಮತ್ತು ತನ್ನ ಕೃತ್ಯಗಳಿಂದ ತಾನು ಸಾಧಿಸಿರುವ ಯಾವುದಕ್ಕಾದರೂ ಸ್ವಲ್ಪ ಗೌರವ ಮತ್ತು ಹೆಸರು ಪಡೆಯಲು ಅವನು ಯಾವಾಗಲೂ ಕಾತರದಿಂದಿರುತ್ತಾನೆ.

ಮೇಲಾಗಿ, ತಮ್ಮ ಸ್ವಂತ ಕೃತ್ಯಗಳಿಂದ ಮುಕ್ತಿಯ ಪ್ರಕ್ರಿಯೆಯನ್ನು ಸ್ವತಃ ತಾವೇ ಆರಂಭಿಸದ ಹೊರತು ದೇವರು ತಮ್ಮನ್ನು ಸಂಚಯಿತರನ್ನಾಗಿ ಮಾಡುವುದಿಲ್ಲ ಎಂದು ಅನೇಕ ಜನರು, ಬಹುಶಃ ಅದನ್ನು ಅರಿಯದೆಯೆ, ಪರಿಣಾಮಕಾರಿಯಾಗಿ ನಂಬುತ್ತಾರೆ.

*ನಾವು ಮಾಡುವ ಯಾವುದೇ ಕೆಲಸ, ನಮ್ಮನ್ನು ಸಂಚಯಿತರನ್ನಾಗಿ ಮಾಡಲು, ಒಂದು ಅತಿ ಚಿಕ್ಕ ರೀತಿಯಲ್ಲಾದರೂ, ಸಹಾಯಮಾಡಬಹುದು ಎಂದು ಒಂದು ಕ್ಷಣಕ್ಕೂ ನಾವು ಆಲೋಚಿಸುವಂತಿಲ್ಲ.*

ಆದರೆ, ದೇವರು ನ್ಯಾಯಬದ್ಧವಾಗಿ ಉತ್ಸಾಹದಿಂದ ಇರುತ್ತಾರೆ. ನಮ್ಮನ್ನು ಸಂಚಯಿತರನ್ನಾಗಿ ಮಾಡಲು ಎಲ್ಲಾ ಕೆಲಸವನ್ನು ದೇವರು ಮಾಡಿದರು. ಆದ್ದರಿಂದ, ನಾವು ಮಾಡುವ ಯಾವುದೇ ಕೆಲಸ, ನಮ್ಮನ್ನು ಸಂಚಯಿತರನ್ನಾಗಿ ಮಾಡಲು, ಒಂದು ಅತಿ ಚಿಕ್ಕ ರೀತಿಯಲ್ಲಾದರೂ, ಸಹಾಯಮಾಡಬಹುದು ಎಂದು ಒಂದು ಕ್ಷಣಕ್ಕೂ ನಾವು ಆಲೋಚಿಸುವಂತಿಲ್ಲ.

***ಏಳನೆ ದಿನದ ಸಬ್ಬತ್‌ನ ಅತಿ ಹೆಚ್ಚಿನ ಪ್ರಾಮುಖ್ಯತೆ***

ಈ ಎಲ್ಲಕ್ಕಿಂತಲೂ ಮುಖ್ಯವಾದ ಸತ್ಯವನ್ನು ನಾಟಕೀಯವಾಗಿ ಹಳೆ ಒಡಂಬಡಿಕೆಯಲ್ಲಿ ಪ್ರದರ್ಶಿಸಲಾಗಿದೆ. ಏಳನೆ ದಿನದ ಸಬ್ಬತ್ ಅನ್ನು ಇಸ್ರಾಯೇಲ್ ದೇಶವಾಗಿದ್ದ ಕ್ರೈಸ್ತ ಸಭೆ ಕಟ್ಟುನಿಟ್ಟಿನಿಂದ ಪಾಲಿಸಬೇಕಿತ್ತು ಎಂಬುದನ್ನು ನಾವು ನೆನಪಿನಲ್ಲಿಟ್ಟುಕೊಳ್ಳಬೇಕು. ಮುಕ್ತಿಯ ಕೆಲಸ ಸಂಪೂರ್ಣವಾಗಿ ದೇವರಿಂದ ಮಾಡಲ್ಪಟ್ಟಿದೆ ಎಂಬ ಸತ್ಯವನ್ನು ಸೂಚಿಸುವ ಕರ್ಮಾಚರಣೆಯ ವಿಧಿಯ ನಿಯಮ ಅದಾಗಿತ್ತು. ಏಳನೆ ದಿನದ ಸಬ್ಬತ್‌ನಂದು ಇಸ್ರಾಯೇಲ್ ಯಾವುದೇ ರೀತಿಯ ಕೆಲಸವನ್ನು ಮಾಡಬಾರದು ಎಂದು ಇದ್ದಂತೆಯೆ, ನಮ್ಮ ಮುಕ್ತಿಗೆ ಸಹಾಯವಾಗುವಂತೆ ಪ್ರಯತ್ನಿಸಿ ನಾವೂ ಕೂಡ ಯಾವುದೇ ರೀತಿಯ ಕೆಲಸವನ್ನು ಮಾಡಬಾರದು. ವಿಮೋಚನಕಾಂಡ 31, ಶ್ಲೋಕ 13 ಮತ್ತು 14ರಲ್ಲಿ ದೇವರು ಹೀಗೆಂದು ಘೋಷಿಸುತ್ತಾರೆ:

**ನೀನು ಇಸ್ರಾಯೇಲ್ಯರಿಗೆ ಆಜ್ಞಾಪಿಸಬೇಕಾದದ್ದೇನಂದರೆ - ನಾನು ನೇಮಿಸಿರುವ ಸಬ್ಬತ್ ದಿನಗಳನ್ನು ನೀವು ತಪ್ಪದೆ ಆಚರಿಸಬೇಕು. ನಿಮ್ಮನ್ನು ದೇವಜನರನ್ನಾಗಿ ಮಾಡಿರುವ ಯೆಹೋವನು ನಾನೇ ಎಂದು ನೀವು ತಿಳುಕೊಳ್ಳುವಂತೆ ಇದೇ ನನಗೂ ನಿಮಗೂ ನಿಮ್ಮ ಸಂತತಿಯವರಿಗೂ ಇರುವ ಗುರುತು. ಆದಕಾರಣ ನೀವು ಸಬ್ಬತ್ ದಿನವನ್ನು ದೇವರ ದಿನವೆಂದು ಭಾವಿಸಿ ಆಚರಿಸಬೇಕು. ಅದನ್ನು ಅಪರಿಶುದ್ಧವಾದದ್ದೆಂದು ಎಣಿಸಿ ನಡೆದವನಿಗೆ ಮರಣಶಿಕ್ಷೆಯಾಗಬೇಕು. ಆ ದಿನದಲ್ಲಿ ಕೆಲಸವೇನಾದರೂ ಮಾಡುವವನು ತನ್ನ ಕುಲದಿಂದ ತೆಗೆದುಹಾಕಲ್ಪಡಬೇಕು.**

ವಿಷಯವನ್ನು ತೋರಿಸುವ ಈ ಶ್ಲೋಕಗಳಲ್ಲಿ, ನಮ್ಮನ್ನು ದೇವಜನರನ್ನಾಗಿ ಮಾಡಲು ಎಲ್ಲಾ ಕೆಲಸವನ್ನು ದೇವರು ಮಾಡಿದ್ದಾರೆ ಎಂಬ ಎಲ್ಲಕ್ಕಿಂತ ಮುಖ್ಯವಾದ ತತ್ವವನ್ನು ದೇವರು ಮುಂದಿಡುತ್ತಿದ್ದಾರೆ. "ದೇವಜನರನ್ನಾಗಿ ಮಾಡುವುದು" ಎಂದರೆ, ದೇವರ ಸೇವೆಗಾಗಿ ಮೀಸಲಾಗಿಡುವುದು ಎಂದು ಅರ್ಥ. ನಾವು ಸಂಚಯಿತರಾದಾಗ, ಆತನ ಸೇವೆಗಾಗಿ ನಮ್ಮನ್ನು ಆಧ್ಯಾತ್ಮಿಕವಾಗಿ ಮೀಸಲಾಗಿಡಲಾಗುತ್ತದೆ. ಈ ಭಾಗದಲ್ಲಿ, ನಮ್ಮನ್ನು ದೇವಜನರನ್ನಾಗಿ ಮಾಡಲು ಅಥವ ಸಂಚಯಿತರನ್ನಾಗಿ ಮಾಡಲು ಅಗತ್ಯವಿರುವ ಎಲ್ಲಾ ಕೆಲಸವನ್ನು ತಾನೇ ಮಾಡಿದ್ದೆಂದು ದೇವರು ಒತ್ತಿ ಹೇಳುತ್ತಿದ್ದಾರೆ.

ಈ ಬಹಳ ಮುಖ್ಯವಾದ ಬೋಧನೆಯತ್ತ ಸೂಚಿಸುವಂತೆ, ಏಳನೆ ದಿನದ ಸಬ್ಬತ್‌ನಂದು ಯಾವುದೇ ಕೆಲಸವನ್ನು ಮಾಡಬಾರದು ಎಂದು ದೇವರು ಆಜ್ಞಾಪಿಸಿದರು. ಏಳನೆ ದಿನದ ಸಬ್ಬತ್‌ನಂದು ಕೆಲಸ ಮಾಡಿದ ಯಾರೇ ಆಗಲಿ, ಅವರು, ತನ್ನ ಮುಕ್ತಿಯನ್ನು ಸಾಧಿಸಲು ತನ್ನ ಸ್ವಂತ ಆಧ್ಯಾತ್ಮಿಕ ಕೆಲಸ ಯಾವುದೊ ಒಂದು ರೀತಿಯಲ್ಲಿ ಸಹಾಯಕವಾಗುತ್ತದೆ ಎಂದು ನಂಬಿದವನಂತೆ. ಆ ವ್ಯಕ್ತಿಗೆ ಮರಣ ಶಿಕ್ಷೆಯಾಗಬೇಕು, ಅಂದರೆ, ಇಂತಹ ವ್ಯಕ್ತಿ ದೇವರ ಕಡುಕೋಪವನ್ನು ಅನುಭವಿಸಲಿದ್ದಾನೆ.

ಈ ಸತ್ಯದ ಗಾಂಭೀರ್ಯತೆಯನ್ನು ನಿದರ್ಶಿಸಲು ದೇವರು ನಮಗೆ ಒಂದು ಉದಾಹರಣೆಯನ್ನು ನೀಡುತ್ತಾರೆ. ಅರಣ್ಯಕಾಂಡ 15, 32-36 ಶ್ಲೋಕಗಳಲ್ಲಿ, ಏಳನೆ ದಿನದ ಸಬ್ಬತ್‌ನಂದು ಕಟ್ಟಿಗೆ ಒಟ್ಟುಮಾಡಿದ ಒಬ್ಬ ಮನುಷ್ಯನ ಬಗ್ಗೆ ದೇವರು ನಮಗೆ ಹೇಳುತ್ತಾರೆ. ಇದು ಸಬ್ಬತ್ ದಿನದಂದು ಯಾವುದೇ ಕೆಲಸವನ್ನು ಮಾಡಬಾರದು ಎಂಬ ಆಜ್ಞೆಯ ಒಂದು ಬಹಳ ಚಿಕ್ಕ, ಬಹುತೇಕ ಪ್ರಾಸಂಗಿಕ ಉಲ್ಲಂಘನೆ.

ಆದರೂ, ಸಬ್ಬತ್‌ಗೆ ಸಂಬಂಧಿಸಿದ ಆಜ್ಞೆಯ ಈ ಅತಿ ಚಿಕ್ಕ ಉಲ್ಲಂಘನೆಗೆ ಯಾವ ಶಿಕ್ಷೆ ವಿಧಿಸಬೇಕು ಎಂದು ಮೋಶೆಯನು ದೇವರನ್ನು ಕೇಳಿದಾಗ, ಈ ಮನುಷ್ಯನನ್ನು ಕಲ್ಲೆಸೆದು

ಕೊಲ್ಲಬೇಕು ಎಂದು ದೇವರು ಆದೇಶಿಸಿದರು. ಮುಕ್ತಿ ಕೇವಲ ಕ್ರಿಸ್ತರ ಕೆಲಸದ ಮೂಲಕ ನಡೆಯುತ್ತದೆ ಎಂದು ನಮಗೆ ಅರ್ಥವಾಗಿದೆ ಎಂದು ನಾವು ಸಂಪೂರ್ಣವಾಗಿ ಖಚಿತಪಡಿಸಿಕೊಳ್ಳಬೇಕೆಂಬ ಸತ್ಯದ ಸಂಪೂರ್ಣ ಗಾಂಭೀರ್ಯತೆಯನ್ನು ಈ ಮನಮುಟ್ಟುವ ಘಟನೆ ನಿರೂಪಿಸುತ್ತದೆ.

> *ತಮ್ಮ ಮುಕ್ತಿಯನ್ನು ತಾವು ಯಾವುದಾದರು ರೀತಿಯಲ್ಲಿ ಆರಂಭಿಸಬಹುದು ಅಥವ ತಮ್ಮ ಮುಕ್ತಿಗೆ ತಾವು ಯಾವುದಾದರು ರೀತಿಯಲ್ಲಿ ಸಹಾಯಮಾಡಬಹುದು ಎಂದು ಆಲೋಚಿಸುವವರಿಗೆ ಯಾವುದೇ ಕರುಣೆ ಇಲ್ಲ.*

ದೇವರ ಕಾನೂನಿಗೆ ವಿಧೇಯರಾಗಿರುವುದರ ಮೂಲಕ ನಮ್ಮ ಮುಕ್ತಿಗೆ ನಾವು ಸಹಾಯ ಮಾಡಿದ್ದೇವೆ ಎಂದು ನಾವು ಎಂದೂ ಆಲೋಚಿಸಬಾರದು. ಕಾನೂನಿಗೆ ಯಾವುದೇ ರೀತಿಯ ವಿಧೇಯತೆ ನಾವು ಮಾಡುವ ಆಧ್ಯಾತ್ಮಿಕ ಕೆಲಸ ಎಂಬುದನ್ನು ನೆನಪಿಟ್ಟುಕೊಳ್ಳಿ. ಏಳನೆ ದಿನದ ಸಬ್ಬತ್‌ನಂದು ಕಟ್ಟಿಗೆ ಒಟ್ಟು ಮಾಡಿದ ಮನುಷ್ಯನ ಮರಣಶಿಕ್ಷೆಯ ಚಾರಿತ್ರಿಕ ದೃಷ್ಟಾಂತಕಥೆಯ ಮೂಲಕ, **"ತಮ್ಮ ಮುಕ್ತಿಯನ್ನು ತಾವು ಯಾವುದಾದರು ರೀತಿಯಲ್ಲಿ ಆರಂಭಿಸಬಹುದು ಅಥವ ತಮ್ಮ ಮುಕ್ತಿಗೆ ತಾವು ಯಾವುದಾದರು ರೀತಿಯಲ್ಲಿ ಸಹಾಯಮಾಡಬಹುದು ಎಂದು ಆಲೋಚಿಸುವವರಿಗೆ ಯಾವುದೇ ಕರುಣೆ ಇಲ್ಲ"** ಎಂದು ದೇವರು ಪರಿಣಾಮಕಾರಿಯಾಗಿ ನಮಗೆ ಕೂಗಿ ಹೇಳುತ್ತಿದ್ದಾರೆ.

***ದೇವರ ಪರೀಕ್ಷಾ ಕಾರ್ಯಕ್ರಮದ ಅನುಗ್ರಹಗಳು***

ತಾವು ಸಂಚಯಿತರಾಗಿದ್ದೇವೆ ಎಂದು ನಂಬುವವರಿಗೆ ಈ ಪರೀಕ್ಷಾ ಕಾರ್ಯಕ್ರಮ ಒಂದು ದೊಡ್ಡ ಅನುಗ್ರಹ. ಎರಡನೆ ಕೊರಿಂಥದವರ 13, ಶ್ಲೋಕ 5ರಲ್ಲಿ ದೇವರು ಹೀಗೆಂದು ಆಜ್ಞಾಪಿಸುತ್ತಾರೆ:

**ಕ್ರಿಸ್ತನಂಬಿಕೆಯಲ್ಲಿ ಇದ್ದೀರೋ ಇಲ್ಲವೋ ಎಂದು ನಿಮ್ಮನ್ನು ನೀವೇ ಪರೀಕ್ಷಿಸಿಕೊಳ್ಳಿರಿ, ನಿಮ್ಮನ್ನು ಪರಿಶೋಧಿಸಿಕೊಳ್ಳಿರಿ. ಏನು, ಯೇಸು ಕ್ರಿಸ್ತನು ನಿಮ್ಮಲ್ಲಿದ್ದಾನೆಂಬುದು ನಿಮ್ಮನ್ನು ಕುರಿತು ನಿಮಗೆ ಚೆನ್ನಾಗಿ ತಿಳಿಯುವದಿಲ್ಲವೋ?**

ನಾವು ನಿಜವಾಗಿಯೂ ಸಂಚಯಿತರಾಗಿದ್ದೇವೆ ಎಂದು ನಮಗೆ ನಾವು ಹೇಗೆ ಸಾಬೀತುಪಡಿಸಿಕೊಳ್ಳಬಹುದು? ನಾವು ಮಾಡಬಹುದಾದ ಒಂದು ದೊಡ್ಡ ಕೆಲಸವೆಂದರೆ ನಾವು ಸಂಚಯಿತರಾದೆವು ಎಂದು ನಾವು ಹೇಗೆ ನಂಬುತ್ತೇವೆ ಎಂಬುದನ್ನು ಪರೀಕ್ಷಿಸುವುದು.

ನಾವು ಯಾವುದಾದರು ಕೆಲಸವನ್ನು ಮಾಡಿರಬಹುದಾದ್ದರಿಂದ ನಮ್ಮ ಮುಕ್ತಿಯನ್ನು ನಾವು ಆರಂಭಿಸಿದ್ದೇವೆ ಅಥವ ನಮ್ಮ ಮುಕ್ತಿಗೆ ಯಾವುದೊ ರೀತಿಯಲ್ಲಿ ಸಹಾಯ ಮಾಡಿದ್ದೇವೆ ಎಂಬ ಆಲೋಚನೆಗಳನ್ನು ಅಥವ ವಿಚಾರಗಳನ್ನು ನಾವು ಸಂಪೂರ್ಣವಾಗಿ ತೊರೆದಿದ್ದೇವೆ ಎಂದು ನಾವು ಖಚಿತಪಡಿಸಿಕೊಳ್ಳಬೇಕಾಗಿದೆ. ನಾವು ನಿಜವಾಗಿಯೂ ಸಂಚಯಿತರಾಗಿದ್ದರೆ, ಸಂಚಯಿತರನ್ನಾಗಿ ಮಾಡುವ ಎಲ್ಲಾ ಕೆಲಸ ನಾವು ಹುಟ್ಟುವುದಕ್ಕೆ ಬಹಳ ಮುಂಚೆಯೆ ಕ್ರಿಸ್ತರಿಂದ ಮಾಡಲ್ಪಟ್ಟಿದೆ ಎಂಬ ಬೈಬಲ್ ನ ತತ್ವವನ್ನು ನಾವು ಸ್ಪಷ್ಟವಾಗಿ ಅರ್ಥಮಾಡಿಕೊಂಡಿದ್ದೇವೆ ಎಂಬುದನ್ನು ಖಚಿತಪಡಿಸಿಕೊಳ್ಳಬೇಕು. ಮುಕ್ತಿ ಸಂಪೂರ್ಣವಾಗಿ ಕ್ರಿಸ್ತರ ಕೆಲಸದಿಂದ ನೆರವೇರಿದೆ, ಮತ್ತು ಸಂಚಯಿತರಾಗಲು ಸಹಾಯವಾಗುವಂತೆ ನಾವು ಏನೂ ಮಾಡಲು ಸಾಧ್ಯವಿಲ್ಲ. ಯಾವ ಚಿಕ್ಕ ಕೆಲಸವೂ, ಅಂದರೆ, ದೇವರ ಯಾವುದೇ ಆಜ್ಞೆಗೆ ವಿಧೇಯತೆ, ಸಂಚಯಿತರಾಗಲು ಸಹಾಯಕವಾಗದು ಎಂಬುದನ್ನು ನಾವು ಅರ್ಥಮಾಡಿಕೊಳ್ಳಬೇಕು. ಏಳನೆ ದಿನದ ಸಬ್ಬತ್‌ನಂದು ಕಟ್ಟಿಗೆ ಒಟ್ಟುಮಾಡಿದ ಮನುಷ್ಯನಿಗೆ ನೀಡಲಾದ ತೀರ್ಪು ನಮ್ಮ ಕಿವಿಗಳಲ್ಲಿ ತುಂಬಿರಬೇಕು.

ಅದಕ್ಕೆ ಸೇರಿದಂತೆ, ಒಂದನೆ ಯೋಹಾನನ 2, 3ರಿಂದ 6ನೇ ಶ್ಲೋಕಗಳವರೆಗಿನ ಭಾಷೆಯ ಬೆಳಕಿನಲ್ಲಿ ನಮ್ಮನ್ನು ನಾವು ಪರೀಕ್ಷಿಸಿಕೊಂಡು ನಮ್ಮನ್ನು ನಾವು ಒರೆಹಚ್ಚಿ ನೋಡಿಕೊಳ್ಳುತ್ತೇವೆ. ಅಲ್ಲಿ ಹೇಳಲಾಗಿರುವುದು ಏನೆಂದರೆ:

**ನಾವು ಆತನ ಆಜ್ಞೆಗಳನ್ನು ಕೈಕೊಂಡು ನಡೆದರೆ ಅದರಿಂದಲೇ ಆತನನ್ನು ಬಲ್ಲವರಾಗಿದ್ದೇವೆಂದು ತಿಳಿಕೊಳ್ಳುತ್ತೇವೆ. ಆತನನ್ನು ಬಲ್ಲೆನೆಂದು ಹೇಳಿ ಆತನ ಆಜ್ಞೆಗಳನ್ನು ಕೈಕೊಳ್ಳದೆ ನಡೆಯುವವನು ಸುಳ್ಳುಗಾರನಾಗಿದ್ದಾನೆ; ಸತ್ಯವೆಂಬುದು ಅವನಲ್ಲಿ ಇಲ್ಲ. ಯಾವನಾದರೂ ಆತನ ವಾಕ್ಯವನ್ನು ಕೈಕೊಂಡು ನಡೆದರೆ ಅವನಲ್ಲಿ ನಿಜವಾಗಿ ದೇವರ ಮೇಲಣ ಪ್ರೀತಿಯು ಪರಿಪೂರ್ಣವಾಗಿದೆ. ಇದರಿಂದಲೇ ಆತನಲ್ಲಿದ್ದೇವೆಂಬದನ್ನು ತಿಳುಕೊಳ್ಳುತ್ತೇವೆ. ಆತನಲ್ಲಿ ನೆಲೆಗೊಂಡವನಾಗಿದ್ದೇನೆಂದು ಹೇಳುವವನು ಕ್ರಿಸ್ತನು ನಡೆದಂತೆಯೇ ತಾನೂ ನಡೆಯುವದಕ್ಕೆ ಬದ್ಧನಾಗಿದ್ದಾನೆ.**

ನಿಜವಾಗಿಯೂ ಸಂಚಯಿತನಾಗಿರುವ ಪ್ರತಿಯೊಬ್ಬ ವ್ಯಕ್ತಿಯೂ ಒಂದು ಹೊಚ್ಚಹೊಸ ಪುನರುಜ್ಜೀವನಗೊಂಡ ಆತ್ಮವನ್ನು ಪಡೆದಿದ್ದಾನೆ, ಆದ್ದರಿಂದ, ದೇವರ ಇಚ್ಛೆಯನ್ನು ನೆರವೇರಿಸುವುದಕ್ಕೆ ಅವನಿಗೆ ಸದಾಕಾಲವೂ ಸಂತೋಷವಾಗುತ್ತದೆ. ಕೀರ್ತನೆಗಳು 139, 23 ಮತ್ತು 24ನೇ ಶ್ಲೋಕಗಳಲ್ಲಿನ ಕೀರ್ತನಗಾರನಂತೆ ಅವನು ನಿಜವಾಗಿಯೂ ಪ್ರಾರ್ಥಿಸುತ್ತಾನೆ:

**ದೇವಾ, ನನ್ನನ್ನು ಪರೀಕ್ಷಿಸಿ ನನ್ನ ಹೃದಯವನ್ನು ತಿಳಿದುಕೋ; ನನ್ನನ್ನು ಶೋಧಿಸಿ ನನ್ನ ಆಲೋಚನೆಗಳನ್ನು ಗೊತ್ತುಮಾಡು. ನಾನು ಕೇಡಿನ ಮಾರ್ಗದಲ್ಲಿರುತ್ತೇನೋ ಏನೋ ನೋಡಿ, ಸನಾತನಮಾರ್ಗದಲ್ಲಿ ನನ್ನನ್ನು ನಡಿಸು.**

***ದೇವರು ತನ್ನ ಪರೀಕ್ಷಾ ಕಾರ್ಯಕ್ರಮದ ಕಷ್ಟಗಳನ್ನು ಇನ್ನೂ ಹೆಚ್ಚು ಕಠಿಣಗೊಳಿಸುತ್ತಾರೆ***

ಈ ಆಜ್ಞೆಗಳ ಮೂಲಕ ನಡೆಯುವ ಪರೀಕ್ಷೆಗಳನ್ನು ಇನ್ನೂ ಹೆಚ್ಚು ಕಠಿಣಗೊಳಿಸಲಾಗಿದೆ ಏಕೆಂದರೆ, ಸಂಚಯಿತನಾಗದ ವ್ಯಕ್ತಿ ಆಧ್ಯಾತ್ಮಿಕವಾಗಿ ಸತ್ತಿದ್ದರೂ ಮತ್ತು ದೇವರ ಕಡುಕೋಪಕ್ಕೆ ಗುರಿಯಾಗಿದ್ದರೂ ದೇವರ ಆಜ್ಞೆಗಳಿಗೆ ಸ್ವಲ್ಪ ಮಟ್ಟಿಗೆ ವಿಧೇಯನಾಗಿರಲು ಅವನಲ್ಲಿ ಸಾಮರ್ಥ್ಯವಿದೆ. ಈ ಹಿಂದೆ ಈ ಅಧ್ಯಯನದಲ್ಲಿ ನಾವು ಈ ಕೆಳಗಿನ ವಿಚಾರಗಳನ್ನು ಕಲಿತೆವು.

1. ಸಂಚಯಿತನಾಗದ ಮನುಷ್ಯನನ್ನು ಪಾಪ ಮಾಡಿದ ತಪ್ಪಿತಸ್ಥನೆಂದು ಹೇಳುವ ಆತ್ಮಸಾಕ್ಷಿ ಇನ್ನೂ ಅವನಲ್ಲಿದೆ. ಇದಕ್ಕೆ ಕಾರಣವೇನೆಂದರೆ, ಯೋಹಾನ 8:9 ಮತ್ತು ರೋಮಾಪುರದವರ 2:14-15ಗಳಲ್ಲಿ ಹೇಳಿರುವಂತೆ, ಅವನ ಹೃದಯದ ಮೇಲೆ ದೇವರ ಕಾನೂನುಗಳು ಸ್ವಲ್ಪ ಮಟ್ಟಿಗೆ ಬರೆಯಲಾಗಿವೆ.

2. ಅರಣ್ಯಕಾಂಡ 22:12-13, ಎರಡನೆ ಪೇತ್ರನು 2:15-16, ಒಂದನೆ ಸಮುವೇಲನು 10:9-12 ಮತ್ತು ಒಂದನೆ ಪೂರ್ವಕಾಲವೃತ್ತಾಂತ 10:13ಗಳಲ್ಲಿ ಹೇಳಿರುವಂತೆ, ಹಳೆ ಒಡಂಬಡಿಕೆಯ ಬಿಳಾಮ ಮತ್ತು ರಾಜ ಸೌಲನಂತಹ ಆಧ್ಯಾತ್ಮಿಕವಾಗಿ ಸತ್ತಿರುವ ವ್ಯಕ್ತಿಗಳು. ಅವರನ್ನು ಸಂಚಯಿತರನ್ನಾಗಿ ಮಾಡುವ ಉದ್ದೇಶ ದೇವರಿಗೆ ಇಲ್ಲದಿದ್ದರೂ, ತನ್ನ ಇಚ್ಛೆಯನ್ನು ನೆರವೇರಿಸುವಂತೆ ದೇವರು ಮಾಡಬಲ್ಲರು.

ಹೀಗೆ, ಒಬ್ಬ ವ್ಯಕ್ತಿ ದೇವರ ಆಜ್ಞೆಗಳಿಗೆ ವಿಧೇಯನಾಗಿರಲು ಬಹಳ ಪ್ರಯತ್ನಿಸುತ್ತಿದ್ದರೂ, ದೇವರು ಅವನ ಹೃದಯದಲ್ಲಿ ಕೆಲಸ ಮಾಡುತ್ತಿದ್ದಾರೋ ಅಥವ ತನ್ನ ಸ್ವಂತ ಆತ್ಮಸಾಕ್ಷಿ ತನ್ನನ್ನು ತಪ್ಪಿತಸ್ಥನೆಂದು ಹೇಳುತ್ತಿದೆಯೋ ಎಂಬುದು ಅವನಿಗೆ ತಿಳಿಯುವುದಿಲ್ಲ. ಮತ್ತು ಹೃತ್ಪೂರ್ವಕವಾಗಿ ತಾನು ದೇವರಿಗೆ ವಿಧೇಯನಾಗಿರಲು ಪ್ರಯತ್ನಿಸುತ್ತಿದ್ದಾನೋ ಎಂಬುದು ಅವನಿಗೆ ತಿಳಿಯುವುದಿಲ್ಲ. ಆದರೆ, ದೇವರನ್ನು ಸಂತೋಷಗೊಳಿಸಲು ತನ್ನ ಯಾವುದೇ ಪ್ರಯತ್ನಗಳು ಮುಕ್ತಿಯನ್ನು ಆರಂಭಿಸಲಾರವು ಅಥವ ಮುಕ್ತಿಯನ್ನು ಖಚಿತಪಡಿಸಲಾರವು ಅಥವ ತಾನು ಸಂಚಯಿತನಾಗಲು ಇರುವ ಯಾವುದೇ ಅಗತ್ಯತೆಯನ್ನು ಅವು ಪೂರೈಸಲಾರವು ಎಂಬುದು ಅವನಿಗೆ ತಿಳಿದಿರಬೇಕು.

*ತಾನು ಈ ಆಜ್ಞೆಗಳಿಗೆ ವಿಧೇಯನಾಗಿರುವುದರಿಂದ ದೇವರು ತನ್ನನ್ನು ಸಂಚಯಿತನನ್ನಾಗಿ ಮಾಡುತ್ತಾರೆ ಎಂದು ಕೂಡ ಅವನು ತಪ್ಪಾಗಿ ಆಲೋಚಿಸಬಹುದು*

ಒಬ್ಬ ಸಂಚಯಿತನಾಗದ ವ್ಯಕ್ತಿ ದೇವರ ಆಜ್ಞೆಗಳಿಗೆ ವಿಧೇಯನಾಗಿರಲು ಪ್ರಾರಂಭಿಸಿದಾಗ, ದೇವರು ಆಗಲೆ ತನ್ನನ್ನು ಸಂಚಯಿತನನ್ನಾಗಿ ಮಾಡಿದ್ದಾರೆ ಎಂಬುದಕ್ಕೆ ತನ್ನ ವಿಧೇಯತೆ ಪುರಾವೆ ಎಂದು ಆಲೋಚಿಸುವ ಬಲೆಗೆ ಅವನು ಸುಲಭವಾಗಿ ಬೀಳಬಹುದು. ತಾನು ಈ ಆಜ್ಞೆಗಳಿಗೆ ವಿಧೇಯನಾಗಿರುವುದರಿಂದ ದೇವರು ತನ್ನನ್ನು ಸಂಚಯಿತನನ್ನಾಗಿ ಮಾಡುತ್ತಾರೆ ಎಂದು ಕೂಡ ಅವನು ತಪ್ಪಾಗಿ ಆಲೋಚಿಸಬಹುದು. ಈ ಎರಡೂ ಸಂದರ್ಭಗಳಲ್ಲಿ, ಯಾರೇ ಮಾಡುವ ಯಾವುದೇ ಕೆಲಸ ಅವರ ಮುಕ್ತಿಗೆ ಯಾವುದೇ ಕೊಡುಗೆಯನ್ನು ನೀಡಲಾಗದು ಎಂದು ಘೋಷಿಸುವ ದೇವರ ಕಾನೂನನ್ನು ಅವನು ಉಲ್ಲಂಘಿಸುತ್ತಿದ್ದಾನೆ. ದೇವರ ಎಲ್ಲಾ ಆಜ್ಞೆಗಳಿಗೆ ಅವನು ವಿಧೇಯನಾಗಿರುತ್ತಾನೋ ಇಲ್ಲವೋ ಎಂದು ಮನುಷ್ಯನನ್ನು ಪರೀಕ್ಷೆ ಮಾಡುವುದು ದೇವರ ಯೋಜನೆಯಾಗಿರುವಾಗ, ದೇವರ ಕರುಣೆ ಇಲ್ಲದಿದ್ದರೆ, ಮನುಷ್ಯ ಈ ಪರೀಕ್ಷೆಯಲ್ಲಿ ವಿಫಲನಾಗುತ್ತಾನೆ.

ಇದನ್ನು ಪುರಾತನ ಇಸ್ರಾಯೇಲಿನ ನಡವಳಿಕೆಯಲ್ಲಿ ಪರಿಣಾಮಕಾರಿಯಾಗಿ ನೋಡಬಹುದಾಗಿದೆ. ಧರ್ಮೋಪದೇಶಕಾಂಡ 28:1, 28:15, 30:6-16ಗಳಲ್ಲಿ ಹೇಳಿರುವಂತೆ, ಅವರು ದೇವರ ಎಲ್ಲಾ ಆಜ್ಞೆಗಳಿಗೆ ವಿಧೇಯರಾಗಿದ್ದರೆ, ತಾನು ಅವರನ್ನು ನಿರಂತರವಾಗಿ ಅನುಗ್ರಹಿಸುವುದಾಗಿ ದೇವರು ಅವರಿಗೆ ಹೇಳಿದರು.

ಆದ್ದರಿಂದ, ಅವರು, ಈ ಮೂಲಕ ತಮ್ಮ ಮುಕ್ತಿ ಖಚಿತವಾಗಿದೆ ಎಂದು ನಂಬಿ, ಸಾಧ್ಯವಾದಷ್ಟು ಒಳ್ಳೆಯವರಾಗಿರಲು ಪ್ರಯತ್ನಿಸಿದರು. ಆದರೆ, ವಿಷಾದನೀಯವಾಗಿ, ದೇವರು ರೋಮಾಪುರದವರ 9, 31 ಮತ್ತು 32ನೇ ಶ್ಲೋಕಗಳಲ್ಲಿ ನಮಗೆ ತಿಳಿಸುವುದೇನೆಂದರೆ:

**ಆದರೆ ಇಸ್ರಾಯೇಲ್ಯರು ನೀತಿಯನ್ನು ದೊರಕಿಸುವ ಧರ್ಮವನ್ನು ಹಿಡಿಯಬೇಕೆಂದು ಪ್ರಯತ್ನಿಸಿದರೂ, ಆ ಧರ್ಮವನ್ನು ಹಿಡಿಯಲಾರದೆ ಹೋದರೆಂದು ಹೇಳಬೇಕು. ಅದಕ್ಕೆ ಕಾರಣವೇನು? ಅವರು ನಂಬಿಕೆಯನ್ನು ಆಧಾರ ಮಾಡಿಕೊಳ್ಳದೆ ನೇಮನಿಷ್ಠೆಗಳನ್ನು ಆಧಾರ ಮಾಡಿಕೊಂಡದ್ದೇ ಕಾರಣ. . . . . . ಆ ಎಡವುವ ಕಲ್ಲಿಗೆ ಅವರು ಎಡವಿಬಿದ್ದರು.**

ಸಂಚಯಿತನಾಗಲು ಒಬ್ಬ ವ್ಯಕ್ತಿ ಶ್ರದ್ಧೆಯಿಂದ ಕಷ್ಟಪಟ್ಟಾಗ, ತನ್ನ ವಿಧೇಯತೆ ಮುಕ್ತಿಯನ್ನು ಆರಂಭಿಸುತ್ತಿದೆ ಅಥವ ಖಚಿತಪಡಿಸುತ್ತಿದೆ ಎಂದು ಆಲೋಚಿಸುವ ಬಲೆಗೆ

ಸುಲಭವಾಗಿ ಬೀಳಬಹುದು. ಅದು, ಏಳನೆ ದಿನದ ಸಬ್ಬತ್‌ನಂದು ಕಟ್ಟಿಗೆ ಒಟ್ಟು ಮಾಡುತ್ತಿದ್ದ ವ್ಯಕ್ತಿಯಂತೆ ಅವನು ಕೆಲಸ ಮಾಡುತ್ತಿರುವ ಹಾಗಿರುತ್ತದೆ.

ನಮ್ಮ ಮನೋಭಾವ ಯಾವಾಗಲು ನಿನೆವೆಯವರಂತೆ ಮಾತ್ರ ಇರಬೇಕು, ಅದೇನೆಂದು ನಾವು ಯೋನ 3, ಶ್ಲೋಕ 9ರಲ್ಲಿ ಹೀಗೆಂದು ಓದುತ್ತೇವೆ:

**ದೇವರು ಒಂದು ವೇಳೆ ಮನಮರುಗಿ ಹಿಂದಿರುಗಿ ತನ್ನ ಉಗ್ರಕೋಪವನ್ನು ತೊಲಗಿಸಾನು, ನಾವು ನಾಶವಾಗದೆ ಉಳಿದೇವು ಎಂಬದನ್ನು ನಿನೆವೆಯಲ್ಲೆಲ್ಲಾ ಸಾರಿಸಿದನು.**

*ನಾವು ಮಾಡಿರುವ ಅಥವ ಮಾಡುತ್ತಿರುವ ಯಾವುದೇ ಕೆಲಸ ಮುಕ್ತಿಯನ್ನು ಆರಂಭಿಸುತ್ತದೆ ಅಥವ ಖಚಿತಪಡಿಸುತ್ತದೆ ಎಂದು ನಾವು ಎಂದೂ ಎಣಿಸುವಂತಿಲ್ಲ.*

ಆದ್ದರಿಂದ, ನಾವು ಮಾಡಿರುವ ಅಥವ ಮಾಡುತ್ತಿರುವ ಯಾವುದೇ ಕೆಲಸ ಮುಕ್ತಿಯನ್ನು ಆರಂಭಿಸುತ್ತದೆ ಅಥವ ಖಚಿತಪಡಿಸುತ್ತದೆ ಎಂದು ನಾವು ಎಂದೂ ಎಣಿಸುವಂತಿಲ್ಲ. ತನ್ನ ಇಚ್ಛೆಯನ್ನು ನಾವು ನೆರವೇರಿಸುವಂತೆ ದೇವರು ನಮ್ಮ ಬದುಕಿನಲ್ಲಿ ಕೆಲಸ ಮಾಡುತ್ತಿದ್ದಾರೆ ಎಂದು ನಾವು ನಂಬಿದರೂ ಅಥವ ನಮ್ಮ ಆತ್ಮಸಾಕ್ಷಿ ನಮ್ಮನ್ನು ತಪ್ಪಿತಸ್ಥನೆಂದು ಹೇಳುತ್ತಿರುವ ಕಾರಣಕ್ಕಾಗಿ ನಾವು ವಿಧೇಯರಾಗಿರಲು ಪ್ರಯತ್ನಿಸುತ್ತಿದ್ದರೂ ಇದು ಸತ್ಯ.

ಸಂಚಯಿತನಾಗದ ದೀನಯಾಚಕನ ಪ್ರಾರ್ಥನೆ ಹೀಗಿರಬೇಕು, “ದೇವರೇ, ನನ್ನ ಮೇಲೆ ಕರುಣೆ ತೋರಿಸಿ. ನಾನು ಮುಕ್ತಿಗೆ ಅರ್ಹನಲ್ಲ. ನಿಮ್ಮ ಇಚ್ಛೆಯನ್ನು ನೆರವೇರಿಸಲು ನಾನು ಶ್ರದ್ಧೆಯಿಂದ ಕೆಲಸ ಮಾಡುವಾಗ, ಹೃತ್ಪೂರ್ವಕವಾಗಿ ಮತ್ತು ನನ್ನ ಆತ್ಮದಿಂದ ನಾನು ದೇವರನ್ನು ಹುಡುಕಲು ದೇವರು ಮಾತ್ರ ನನ್ನನ್ನು ಅರ್ಹಗೊಳಿಸುತ್ತಾರೆ ಎಂದು ನನಗೆ ತಿಳಿದಿರುವುದಕ್ಕೆ ನಾನು ಕೃತಜ್ಞನಾಗಿದ್ದೇನೆ, ಮತ್ತು ನಾನು ಹೊಸ ಹೃದಯವನ್ನು ಪಡೆದಾಗ ಮಾತ್ರ, ಅಂದರೆ, ದೇವರು ಆಗಲೆ ನನ್ನನ್ನು ಸಂಚಯಿತನನ್ನಾಗಿ ಮಾಡಿರುವಾಗ ಮಾತ್ರ ಇದು ನಿಜವಾಗುತ್ತದೆ.”

ಲೂಕ 18, ಶ್ಲೋಕ 13ರ ಸುಂಕದವನ ಉದಾಹರಣೆ ನಮ್ಮ ಆಲೋಚನೆಗಳಲ್ಲಿರಬೇಕು. ಅಲ್ಲಿ ನಾವು ಓದುವುದೇನೆಂದರೆ,

**ಆದರೆ ಆ ಸುಂಕದವನು ದೂರದಲ್ಲಿ ನಿಂತು ಆಕಾಶದ ಕಡೆಗೆ ಕಣ್ಣೆತ್ತಿ ನೋಡುವದಕ್ಕೂ ಮನಸ್ಸಿಲ್ಲದೆ ಎದೆಯನ್ನು ಬಡುಕೊಳ್ಳುತ್ತಾ - ದೇವರೇ, ಪಾಪಿಯಾದ ನನ್ನನ್ನು ಕರುಣಿಸಿ ಅಂದನು.**

ಯೋವೇಲನು 2, 12,13 ಮತ್ತು 14ನೇ ಶ್ಲೋಕಗಳಲ್ಲಿ ದೇವರು ಮಾತನಾಡುವ ಪದಗಳನ್ನು ನಮಗೆ ಜ್ಞಾಪಿಸಬೇಕು:

**ಯೆಹೋವನು ಇಂತೆನ್ನುತ್ತಾನೆ - ಈಗಲಾದರೋ ನೀವು ಮನಃಪೂರ್ವಕವಾಗಿ ನನ್ನ ಕಡೆಗೆ ತಿರುಗಿಕೊಂಡು ಉಪವಾಸಮಾಡಿರಿ, ಅಳಿರಿ, ಗೋಳಾಡಿರಿ; ನಿಮ್ಮ ಬಟ್ಟೆಗಳನ್ನಲ್ಲ, ನಿಮ್ಮ ಹೃದಯಗಳನ್ನು ಹರಿದುಕೊಂಡು ನಿಮ್ಮ ದೇವರಾದ ಯೆಹೋವನ ಕಡೆಗೆ ತಿರಿಗಿಕೊಳ್ಳಿರಿ; ಆತನು ದಯೆಯೂ ಕನಿಕರವೂ ದೀರ್ಘಶಾಂತಿಯೂ ಮಹಾಕೃಪೆಯೂ ಉಳ್ಳವನಾಗಿ ಮಾಡಬೇಕೆಂದಿದ್ದ ಕೇಡಿಗೆ ಮನಮರುಗುತ್ತಾನೆ. ಆತನು ಒಂದು ವೇಳೆ ಪಶ್ಚಾತ್ತಾಪಪಟ್ಟು ಹಿಂದಿರುಗಿ ನಿಮ್ಮ ದೇವರಾದ ಯೆಹೋವನ ಧ್ಯಾನಪಾನ ನೈವೇದ್ಯಗಳಿಗೆ ಅನುಕೂಲವಾದ ಸುವರವನ್ನು ದಯಪಾಲಿಸಿ ಹೋದಾನು.**

ಹೀಗೆ, ದೇವರು ತನ್ನ ಜನರನ್ನು ಕರೆತರುವ ಮಾರ್ಗವಿದು. ಇದನ್ನು ಯೆರೆಮೀಯ 31, 8 ಮತ್ತು 9ನೇ ಶ್ಲೋಕಗಳಲ್ಲಿ ಇನ್ನೂ ಹೆಚ್ಚು ವರ್ಣಿಸಲಾಗಿದೆ. ಅಲ್ಲಿ ನಾವು ಓದುವುದೇನೆಂದರೆ:

**ಇಗೋ, ನಾನು ಅವರನ್ನು ಉತ್ತರ ದೇಶದಿಂದ ಬರಮಾಡುವೆನು, ದಿಗಂತಗಳಿಂದ ಅವರನ್ನು ಕೂಡಿಸುವೆನು, ಅವರೊಂದಿಗೆ ಕುರುಡರನ್ನೂ ಕುಂಟರನ್ನೂ ಗರ್ಭಿಣಿಯರನ್ನೂ ದಿನ ತುಂಬಿದ ಬಸುರಿಯರನ್ನೂ ಒಟ್ಟಿಗೆ  ಕರತರುವೆನು; ದೊಡ್ಡ ಗುಂಪಾಗಿ ಇಲ್ಲಿಗೆ ಹಿಂದಿರುಗುವರು. ಅವರು ಅಳುತ್ತಾ ನಡೆದು ಬರುವರು, ಅವರ ವಿಜ್ಞಾಪನೆಗಳಿಂದಲೇ ಅವರನ್ನು ಮುಂದರಿಸುವೆನು; ಎಡವದ  ಸಮಮಾರ್ಗದಲ್ಲಿ ನಡಿಸುತ್ತಾ ತುಂಬಿದ ತೊರೆಗಳ ಬಳಿಗೆ ಬರಮಾಡುವೆನು; ನಾನು ಇಸ್ರಾಯೇಲಿಗೆ ತಂದೆ, ಎಫ್ರಾಯೀಮು ನನ್ನ ಹಿರಿಯ ಮಗನಲ್ಲವೆ.**

***ನಾವು ಬೈಬಲ್ ಅನ್ನು ಆಲಿಸಿಯೂ ಆಲಿಸದೆ ಇರಲು ಸಾಧ್ಯವೆ?***

ಬೈಬಲ್ ನ ಅನೇಕ ಕಡೆಗಳಲ್ಲಿ, ಯೆರೆಮೀಯ 29, 17, 18  ಮತ್ತು 19ನೇ ಶ್ಲೋಕಗಳಲ್ಲಿ ದೇವರು ಎಚ್ಚರಿಕೆ ನೀಡುತ್ತಾರೆ. ಅಲ್ಲಿ ನಾವು ಓದುವುದೇನೆಂದರೆ:

**. . . ಇಂತೆನ್ನುತ್ತಾನೆ - ಆಹಾ, ನಾನು ಅವರ ಮೇಲೆ ಖಡ್ಗ ಕ್ಷಾಮವ್ಯಾಧಿಗಳನ್ನು ಬರಮಾಡಿ ಯಾರೂ ತಿನ್ನದ ಹಾಗೆ ಕೆಟ್ಟು ಕೇವಲ ಅಸಹ್ಯವಾದ ಅಂಜೂರದ ಹಣ್ಣುಗಳ ಗತಿಗೆ ಅವರನ್ನು ತರುವೆನು, ನಾನು ಖಡ್ಗ ಕ್ಷಾಮವ್ಯಾಧಿಗಳಿಂದ ಅವರನ್ನು ಹಿಂದಟ್ಟುತ್ತಾ ಲೋಕದ ಸಮಸ್ತರಾಜ್ಯಗಳಿಗೆ ಭಯಾಸ್ಪದವಾಗುವಂತೆಯೂ ನಾನು ಅವರನ್ನು ಅಟ್ಟಿಬಿಟ್ಟಿರುವ ಸಕಲ ಜನಾಂಗಗಳಲ್ಲಿ ಶಾಪ, ಬೆರಗಿನ ಸಿಳ್ಳು, ದೂಷಣೆ, ಇವುಗಳಿಗೆ**

**ಗುರಿಯಾಗುವಂತೆಯೂ ಮಾಡುವೆನು. ಅವರು ನನ್ನ ಮಾತುಗಳನ್ನು ಕೇಳಲಿಲ್ಲವಲ್ಲಾ; ನಾನು ನನ್ನ ಸೇವಕರಾದ ಪ್ರವಾದಿಗಳನ್ನು ಅವರ ಬಳಿಗೆ ಸಾವಕಾಶಮಾಡದೆ ಕಳುಹಿಸಿ ಹೇಳಿಸುತ್ತಾ ಬಂದರೂ ಅವರು ಕೇಳಲೊಲ್ಲದೆ ಹೋದರು. ಇದು ಯೆಹೋವನ ನುಡಿ.**

*ಆಲಿಸುವುದು ಎಂದರೆ, ಆಜ್ಞಾಪಿಸಲಾಗಿರುವುದನ್ನು ಅರ್ಥಮಾಡಿಕೊಳ್ಳಲು ಪ್ರಯತ್ನಿಸುವ ಮತ್ತು ವಿಧೇಯರಾಗಿರಲು ಪ್ರಯತ್ನಿಸುವ ದೃಷ್ಟಿಯಿಂದ ಕೇಳುವುದು.*

ಆಲಿಸುವುದು ಎಂದರೆ, ಆಜ್ಞಾಪಿಸಲಾಗಿರುವುದನ್ನು ಅರ್ಥಮಾಡಿಕೊಳ್ಳಲು ಪ್ರಯತ್ನಿಸುವ ಮತ್ತು ವಿಧೇಯರಾಗಿರಲು ಪ್ರಯತ್ನಿಸುವ ದೃಷ್ಟಿಯಿಂದ ಕೇಳುವುದು. ಆದರೆ, ಸತ್ಯವನ್ನು ಮೊದಲೇ ನಾವು ಅರ್ಥಮಾಡಿಕೊಂಡ ಸ್ಥಿತಿಯಲ್ಲಿ ಬೈಬಲ್ ನ ಬಳಿ ಬಂದರೆ, ನಾವು ಸತ್ಯವನ್ನು ಆಲಿಸುವುದಿಲ್ಲ, ಮತ್ತು ಆದರಿಂದಾಗಿ, ಈ ಭಾಗದ ಪ್ರಕಾರ, ನಾವು ಸತ್ಯದ ಪದವನ್ನು **ಕೇಳುವುದಿಲ್ಲ.**

ಉದಾಹರಣೆಗೆ, ನಿಯತಿವಾದದ ನಿಲುವನ್ನು ಧರಿಸುವ ಅಥವ ತನ್ನ 'ನೀವೇ ಮಾಡಿರಿ', ಸ್ವೇಚ್ಛೆಯ ಸುವಾರ್ತೆ ಸರಿಯಾಗಿದೆ ಎಂದು ಮನಗಂಡಿರುವ ಒಬ್ಬ ವ್ಯಕ್ತಿ ಅಥವ ಸಂಚಯಿತನಾಗಲು ಶ್ರದ್ಧೆಯಿಂದ ಕೆಲಸ ಮಾಡಿ ಎಂಬ ದೇವರ ಆಜ್ಞೆಗಳನ್ನು ಬೇಕೆಂದೇ ಉಪೇಕ್ಷಿಸುವ ಒಬ್ಬ ವ್ಯಕ್ತಿ ದೇವರ ಪದವನ್ನು ಆಲಿಸುತ್ತಿಲ್ಲ. ಬೈಬಲ್ ನಲ್ಲಿ ಮುಕ್ತಿಯ ಬಗ್ಗೆ ಅವನು ಓದಿದ ಕೂಡಲೆ, ತನ್ನ ಮನಸ್ಸಿನಲ್ಲಿ ಅವನು ಅದನ್ನು ತಿರುಚಿ, ತಾನು ಮೊದಲೇ ಕಲ್ಪಿಸಿರುವ ವಿಚಾರಕ್ಕೆ ತಕ್ಕಂತೆ ಅದರ ಅರ್ಥವನ್ನು ಬದಲಾಯಿಸಲು ಅವನು ಪ್ರಯತ್ನಿಸುತ್ತಾನೆ. ಅವನಿಗೆ, ಬೈಬಲ್ ನ ಹೇಳಿಕೆಯ ಸತ್ಯ ಅವನ ಬಂಡಾಯದ, ಮಾನವ ಕೃತ ವಿಚಾರಗಳಿಂದ ನಾಶವಾಗಿದೆ. ಪರಿಣಾಮಕಾರಿಯಾಗಿ, ಅವನು ತನ್ನನ್ನು ದೇವರ ಪದದ ಆಲಿಕೆಯಿಂದ ಹೊರಗಿಟ್ಟುಕೊಂಡಿದ್ದಾನೆ. ಹೀಗೆ, ಅವನು ತನ್ನನ್ನು ಒಂದು ಅತಿ ಅಪಾಯಕಾರಿ ಸ್ಥಾನದಲ್ಲಿ ನಿಲ್ಲಿಸಿಕೊಂಡಿದ್ದಾನೆ ಏಕೆಂದರೆ, ಕ್ರಿಸ್ತರನ್ನು ರಕ್ಷಕರನ್ನಾಗಿ ನಂಬುವ ನಂಬಿಕೆ ಕೇವಲ ದೇವರ ಪದವನ್ನು ಆಲಿಸುವುದರಿಂದ ಮಾತ್ರ ಬರಬಹುದಾಗಿದೆ ಎಂದು ರೋಮಾಪುರದವರಿಗೆ 10:17ರಲ್ಲಿ ಹೇಳಲಾಗಿದೆ.

ದೇವರ ವಿರುದ್ಧ ಯಾರೇ ಎಷ್ಟೇ ವಿಪರೀತವಾಗಿ ದಂಗೆ ಎದ್ದಿದ್ದರೂ, ಅವರು ಹಠ ಹಿಡಿದು ದೇವರ ಪದವನ್ನು ಕೇಳಲು ನಿರಾಕಾರಿಸಿದರೂ, ದೇವರು ಯಾರನ್ನಾದರೂ ಸಂಚಯಿತರನ್ನಾಗಿ ಮಾಡಬಹುದೆಂಬುದು ತಾತ್ವಿಕವಾಗಿ ಸತ್ಯ. ಆದರೆ, ದೇವರ ಪದವನ್ನು ಆಲಿಸಲು ನಿರಾಕರಿಸಿದವರಿಗೆ ಬೈಬಲ್ ಯಾವುದೇ ಪ್ರೋತ್ಸಾಹವನ್ನು ಅಥವ

ಭರವಸೆಯನ್ನು ನೀಡುವುದಿಲ್ಲ, ಆದ್ದರಿಂದ, ಮೇಲೆ ಹೇಳಲಾಗಿರುವ ಯೆರೆಮೀಯ 19, 18 ಮತ್ತು 19ನೇ ಶ್ಲೋಕಗಳ ಎಚ್ಚರಿಕೆಯನ್ನು ನಾವು ಜಾಗರೂಕತೆಯಿಂದ ಆಲೋಚಿಸಬೇಕು. ದುರದೃಷ್ಟವಶಾತ್, ಮತ್ತು ಹೆಚ್ಚಿನ ಮಟ್ಟಿಗೆ, ಇಂತಹ ವ್ಯಕ್ತಿ, ಮತ್ತಾಯ ಅಧ್ಯಾಯ 23ರ ಆದ್ಯಂತ ಪ್ರಸ್ತಾಪಿಸಲಾಗಿರುವ ಫರಿಸಾಯರ ಭಯಂಕರವಾದ ವರ್ಣನೆಗೆ ಸರಿ ಹೊಂದುತ್ತಾನೆ.

ಆದರೆ, ಭರವಸೆ ಇದೆ, ತಮ್ಮ ಪಾಪಗಳನ್ನು ದೀನರಾಗಿ ಒಪ್ಪಿಕೊಳ್ಳುವವರಿಗೆ ಮತ್ತು ತಾವು ಮೊದಲೇ ರೂಪಿಸಿಕೊಂಡಿರುವ ವಿಚಾರಗಳಿಂದ ವಿಮುಖರಾಗುವವರಿಗೆ, ಸಂಪೂರ್ಣ ಬೈಬಲ್ ಗೆ ವಿಧೇಯರಾಗಿರಲು ಮನಃಪೂರ್ವಕವಾಗಿ ದುಡಿಯುವವರಿಗೆ ಮತ್ತು ಕರುಣೆಗಾಗಿ ದೇವರಲ್ಲಿ ದೀನರಾಗಿ ಮೊರೆಯಿಡುವವರಿಗೆ ಅದ್ಭುತವಾದ ಭರವಸೆ ಇದೆ.

ನಾವು ಬೈಬಲ್ ಅನ್ನು ಸಮೀಪಿಸಿದಂತೆ, ಅವು ಎಷ್ಟೇ ನ್ಯಾಯಸಮ್ಮತವಾಗಿ ಮತ್ತು ಸಮರ್ಥನೀಯವಾಗಿ ಕಂಡುಬಂದರೂ, ಮೊದಲೇ ರೂಪಿಸಿಕೊಂಡಿರುವ ಯಾವುದೇ ವಿಚಾರಗಳಿಲ್ಲದೆ ನಾವು ಬೈಬಲ್ ನ ಬಳಿ ಬರಬೇಕು

ನಾವು ಬೈಬಲ್ ಅನ್ನು ಸಮೀಪಿಸಿದಂತೆ, ಅವು ಎಷ್ಟೇ ನ್ಯಾಯಸಮ್ಮತವಾಗಿ ಮತ್ತು ಸಮರ್ಥನೀಯವಾಗಿ ಕಂಡುಬಂದರೂ, ಮೊದಲೇ ರೂಪಿಸಿಕೊಂಡಿರುವ ಯಾವುದೇ ವಿಚಾರಗಳಿಲ್ಲದೆ ನಾವು ಬೈಬಲ್ ನ ಬಳಿ ಬರಬೇಕು. “ನನಗೆ ಏನೂ ತಿಳಿಯದು, ದೇವರೇ, ನೀವು ನನಗೆ ಬೋಧಿಸಬೇಕು” ಎಂಬ ಮನೋಭಾವದೊಂದಿಗೆ ನಾವು ಬೈಬಲ್ ಅನ್ನು ಸಮೀಪಿಸಬೇಕು. ನಾವು ದೇವರ ಆಜ್ಞೆಗಳಿಗೆ ವಿಧೇಯರಾಗಿರಲು ಶ್ರದ್ಧೆಯಿಂದ ದುಡಿಯುವಾಗ, ಯಾವುದೇ ರೀತಿಯಲ್ಲಿ ನಾವು ಮುಕ್ತಿಗೆ ಅರ್ಹರಲ್ಲದಿದ್ದರೂ, ಯೋನ 3:9ರಲ್ಲಿ ಹೇಳಿರುವಂತೆ, ದೇವರು ಬಹುಶಃ ನನ್ನನ್ನೂ ಕೂಡ ಸಂಚಯಿತನನ್ನಾಗಿ ಮಾಡಬಹುದೆಂಬ ದೊಡ್ಡ ನಿರೀಕ್ಷೆ ನಮಗಿದೆ ಎಂಬ ಮನೋಭಾವ ನಮ್ಮದಾಗಿರಬೇಕು.

***ಧರ್ಮಗ್ರಂಥದೊಂದಿಗೆ ಧರ್ಮಗ್ರಂಥವನ್ನು ಹೋಲಿಸಿ***

ನಾವು ಬೈಬಲ್ ನಿಂದ ಕಲಿಯಲು ಪ್ರಯತ್ನಿಸುವಾಗ ನಾವು ಅನುಸರಿಸಬೇಕಾದ ಬೈಬಲ್ ನ ಒಂದು ಮೂಲ ನಿಯಮವನ್ನು ಯಾವಾಗಲು ನೆನಪಿನಲ್ಲಿಟ್ಟುಕೊಳ್ಳಬೇಕು, ಅ ನಿಯಮ ಯಾವುದೆಂದರೆ, ಒಂದನೆ ಕೊರಿಂಥದವರ 2:13ರಲ್ಲಿ ಹೇಳಿರುವಂತೆ, ಧರ್ಮಗ್ರಂಥದೊಂದಿಗೆ ಧರ್ಮಗ್ರಂಥವನ್ನು ನಾವು ಹೋಲಿಸಬೇಕಾಗಿದೆ. ಅಂದರೆ, ನಾವು ಬೈಬಲ್ ಅನ್ನು ಅಧ್ಯಯನ

ಮಾಡುವಾಗ, ನಮ್ಮ ಪ್ರತಿಯೊಂದು ತೀರ್ಮಾನ ಸಂಪೂರ್ಣ ಬೈಬಲ್ ನೊಂದಿಗೆ ಸಾಮರಸ್ಯದಿಂದಿದೆ ಎಂಬುದು ನಮಗೆ ಖಚಿತವಾಗಿರಬೇಕು.

ಈ ಸತ್ಯಗಳನ್ನು ಮನಸ್ಸಿನಲ್ಲಿಟ್ಟುಕೊಂಡು ಮತ್ತು ಈ ಅಧ್ಯಯನದಲ್ಲಿ ನಾವು ಈಗಾಗಲೆ ಕಲಿತಿರುವ ತತ್ವಗಳನ್ನು ಬಳಸಿಕೊಂಡು, ಸಂಚಯಿತರಾಗುವ ವಿಷಯದ ಬಗ್ಗೆ ನೇರವಾಗಿ ಪ್ರಸ್ತಾಪಿಸುವ ಅನೇಕ ಶ್ಲೋಕಗಳನ್ನು ನಾವು ನೋಡೋಣ. ಸುಪ್ರಸಿದ್ಧವಾದ ಶ್ಲೋಕ, ರೋಮಾಪುರದವರಿಗೆ 10, ಶ್ಲೋಕ 13ರಿಂದ ಪ್ರಾರಂಭಿಸೋಣ, ಇದರಲ್ಲಿ ದೇವರು ಹೀಗೆಂದು ಘೋಷಿಸುತ್ತಾರೆ:

**ಕರ್ತನ ನಾಮವನ್ನು ಹೇಳಿಕೊಳ್ಳುವವರೆಲ್ಲರಿಗೆ ರಕ್ಷಣೆಯಾಗುವದೆಂದು ಬರೆದದೆ.**

ಕೂಡಲೆ, ಒಂದು ಕೆಂಪು ಬಾವುಟ ಕಾಣುತ್ತದೆ, ಅಂದರೆ, ನಾವು ಜಾಗರೂಕರಾಗಿರಬೇಕು. ದೇವರನ್ನು ಕರೆಯಬೇಕೆಂಬ ಆಜ್ಞೆಗೆ ವಿಧೇಯರಾಗಿರುವುದು ನಾವು ಮಾಡುವ ಕೆಲಸ. ದೇವರನ್ನು ಕರೆಯುವ ಕೆಲಸವನ್ನು ನಾವು ಮಾಡಿದರೆ, ಅದು ನಮ್ಮ ಮುಕ್ತಿಯಲ್ಲಿ ಪರಿಣಮಿಸುತ್ತದೆ ಎಂದು ಈ ಶ್ಲೋಕ ಬೋಧಿಸುತ್ತಿರುವಂತೆ ತೋರುತ್ತದೆ, ಆದರೆ, ಅದು ಅಸಾಧ್ಯ, ಏಕೆಂದರೆ, ನಮ್ಮನ್ನು ಸಂಚಯಿತರನ್ನಾಗಿ ಮಾಡಲು ಎಲ್ಲಾ ಕೆಲಸವನ್ನು ದೇವರು ಮಾಡಿದರು. ಹೀಗೆ, ಬೈಬಲ್ ನಲ್ಲಿ ಹೆಚ್ಚಿನ ಮಾಹಿತಿಯನ್ನು ಹುಡುಕದೆ ನಾವು ಈ ಶ್ಲೋಕವನ್ನು ಅರ್ಥಮಾಡಿಕೊಳ್ಳಲು ಸಾಧ್ಯವಿಲ್ಲ ಎಂದು ನಮಗೆ ತಿಳಿದಿದೆ.

ಹೆಚ್ಚಿನ ಮಾಹಿತಿಯನ್ನು ಹುಡುಕುವಾಗ, ಯೆರೆಮೀಯ 29, 11 ರಿಂದ 13ನೇ ಶ್ಲೋಕಗಳಿಗೆ ನಾವು ಬರುತ್ತೇವೆ, ಅಲ್ಲಿ ದೇವರು ಹೇಳುವುದೇನೆಂದರೆ:

**ಇವರಿಗೆ ಗತಿಯಾಗಲಿ, ನಿರೀಕ್ಷೆಯಿರಲಿ ಎಂದು ನಾನು ನಿಮ್ಮ ವಿಷಯದಲ್ಲಿ ಮಾಡಿಕೊಳ್ಳುತ್ತಿರುವ ಆಲೋಚನೆಗಳನ್ನು ನಾನೇ ಬಲ್ಲೆನು; ಅವು ಅಹಿತದ ಯೋಚನೆಗಳಲ್ಲ, ಹಿತದ ಯೋಚನೆಗಳೇ. ನೀವು ನನಗೆ ಮೊರೆಯಿಡುವಿರಿ, ನನ್ನನ್ನು ಪ್ರಾರ್ಥಿಸಲು ಹೋಗುವಿರಿ; ನಾನು ಕಿವಿಗೊಡುವೆನು. ನೀವು ನನ್ನನ್ನು ಹುಡುಕುವಿರಿ; ಮನಃಪೂರ್ವಕವಾಗಿ ಹುಡುಕಿದಾಗ ನನ್ನನ್ನು ಕಂಡುಕೊಳ್ಳುವಿರಿ.**

ಇದೇ ಸತ್ಯವನ್ನು ಧರ್ಮೋಪದೇಶಕಾಂಡ 4, ಶ್ಲೋಕ 29ರಲ್ಲಿ ಹೇಳಲಾಗಿದೆ, ಅಲ್ಲಿ ನಾವು ಓದುವುದೇನೆಂದರೆ:

**ಅಲ್ಲಿಂದಲಾದರೂ ನೀವು ಸಂಪೂರ್ಣ ಹೃದಯದಿಂದಲೂ ಮನಸ್ಸಿನಿಂದಲೂ ನಿಮ್ಮ ದೇವರಾದ ಯೇಹೋವನನ್ನು ಹುಡುಕಿದರೆ ಆತನು ನಿಮಗೆ ಸಿಕ್ಕುವನು.**

ಮುಕ್ತಿಗಾಗಿ ನಾವು ದೇವರನ್ನು ಕರೆದರೆ ಅಥವ ಹುಡುಕಿದರೆ, ನಮ್ಮ ಸಂಪೂರ್ಣ ಹೃದಯದಿಂದ ಆತನನ್ನು ಹುಡುಕಬೇಕು ಎಂಬ ಮುಖ್ಯವಾದ ಮಾಹಿತಿಯನ್ನು ದೇವರು ನಮಗೆ ನೀಡುತ್ತಿದ್ದಾರೆ.

ಆದರೆ ಅದು ಅಸಾಧ್ಯವಾದ ಕೆಲಸ ಏಕೆಂದರೆ, ಸಂಚಯಿತನಾಗದ ವ್ಯಕ್ತಿಯ ಮನಸ್ಥಿತಿಯ ಬಗ್ಗೆ ಬೈಬಲ್ ನಮಗೆ ಹೇಳುತ್ತದೆ. ಯೆರೆಮೀಯ 17, ಶ್ಲೋಕ 9ರಲ್ಲಿ ನಾವು ಹೀಗೆಂದು ಓದುತ್ತೇವೆ:

**ಹೃದಯವು ಎಲ್ಲಕ್ಕಿಂತಲೂ ವಂಚಕ; ಗುಣವಾಗದ ರೋಗಕ್ಕೆ ಒಳಗಾಗಿದೆ; ಅದನ್ನು ಯಾರು ತಿಳಿದಾರು?**

ಮತ್ತು ಮಾರ್ಕ 7, ಶ್ಲೋಕ 21ರಲ್ಲಿ ನಾವು ಹೀಗೆಂದು ಓದುತ್ತೇವೆ:

**ಒಳಗಿನಿಂದ ಅಂದರೆ ಮನುಷ್ಯರ ಮನಸ್ಸಿನೊಳಗಿಂದ ಸೂಳೆಗಾರಿಕೆ, ಕಳ್ಳತನ, ಕೊಲೆ, ಹಾದರ, ದ್ರವ್ಯಾಶೆ, ಕೆಡುಕುತನ, ಮೋಸ, ಬಂಡತನ, ಹೊಟ್ಟೇಕಿಚ್ಚು, ಬೈಗಳು, ಸೊಕ್ಕು, ಬುದ್ಧಿಗೇಡಿತನ, ಇವೇ ಮೊದಲಾದವುಗಳ ಕೆಟ್ಟ ಆಲೋಚನೆಗಳು ಹೊರಡುತ್ತವೆ.**

*ತಮ್ಮ ಹೃದಯಪೂರ್ವಕವಾಗಿ ಯಾರಾದರು ದೇವರನ್ನು ಕರೆಯುವ ಮುನ್ನ, ಅವರಿಗೆ ಹೊಸ ಹೃದಯವನ್ನು ಕೊಡಬೇಕು.*

ಆದ್ದರಿಂದ, ತಮ್ಮ ಹೃದಯಪೂರ್ವಕವಾಗಿ ಯಾರಾದರು ದೇವರನ್ನು ಕರೆಯುವ ಮುನ್ನ, ಅವರಿಗೆ ಹೊಸ ಹೃದಯವನ್ನು ಕೊಡಬೇಕು, ಅಂದರೆ, ಅವರ ಬಳಿ ದುಷ್ಟ ಹೃದಯ ಇನ್ನಿಲ್ಲ. ಉದಾಹರಣೆಗೆ, ಯೆಹೆಜ್ಕೇಲನು 36, 25 ರಿಂದ 27ನೇ ಶ್ಲೋಕಗಳಲ್ಲಿ ಬೈಬಲ್ ಇದನ್ನೆ ಬೋಧಿಸುವುದು. ಅಲ್ಲಿ ದೇವರು ಹೇಳುವುದೇನೆಂದರೆ:

**ನಾನು ನಿಮ್ಮ ಮೇಲೆ ನಿರ್ಮಲೋದಕವನ್ನು ಪ್ರೋಕ್ಷಿಸಲು ನೀವು ನಿರ್ಮಲರಾಗುವಿರಿ; ನಿಮ್ಮ ಸಮಸ್ತ ವಿಗ್ರಹಗಳಿಂದಲೂ ಸಕಲ ವಿಧವಾದ ಹೊಲಸಿನಿಂದಲೂ ನಿಮ್ಮನ್ನು ಶುದ್ಧಿಮಾಡುವೆನು. ನಾನು ನಿಮಗೆ ಹೊಸ ಮನಸ್ಸನ್ನು ಕೊಟ್ಟು ನಿಮ್ಮಲ್ಲಿ ನೂತನ ಸ್ವಭಾವವನ್ನು ಹುಟ್ಟಿಸುವೆನು; ಕಲ್ಲಾದ ಹೃದಯವನ್ನು ನಿಮ್ಮೊಳಗಿಂದ ತೆಗೆದು ಮೃದುವಾದ ಹೃದಯವನ್ನು ನಿಮಗೆ ದಯಪಾಲಿಸುವೆನು. ನನ್ನ ಆತ್ಮವನ್ನು ನಿಮ್ಮಲ್ಲಿ ನೆಲಸಿರುವಂತೆ ಅನುಗ್ರಹಿಸಿ ನೀವು ನನ್ನ ನಿಯಮಗಳನ್ನು ಅನುಸರಿಸುವ ಹಾಗೆ ಮಾಡುವೆನು. ನೀವು ನನ್ನ ವಿಧಿಗಳನ್ನು ಕೈಕೊಂಡು ಆಚರಿಸುವಿರಿ.**

ಈ ಶ್ಲೋಕಗಳಲ್ಲಿ, ದೇವರು ನಮಗೆ ಹೊಸ ಹೃದಯವನ್ನು ಕೊಡುತ್ತಾರೆ ಎಂದು ದೇವರು ಸ್ಪಷ್ಟವಾಗಿ ಬೋಧಿಸುತ್ತಾರೆ. ನಮಗೆ, ಹೊಸ ಆತ್ಮವೆಂದೂ ಕರೆಯಲ್ಪಡುವ, ಹೊಸ ಹೃದಯವನ್ನು ಕೊಡುವ ಅತ್ಯಮೋಘ ಪವಾಡದ ಮೂಲಕ ಆತನ ಎದುರು ನಾವು ವಿಧೇಯತೆಯಿಂದ ನಡೆಯುವಂತೆ ಆತ ಮಾಡುತ್ತಾರೆ. ಪ್ರಾಸಂಗಿಕವಾಗಿ, ಈ ಅಧ್ಯಯನದಲ್ಲಿ, ಹೊಸ ಹೃದಯದ ಬಗ್ಗೆ ಅಥವ ಹೊಸ ಆತ್ಮದ ಬಗ್ಗೆ, ನಾವು ಸಂಚಯಿತರಾದಾಗ ಪಡೆಯುವ ಹೊಚ್ಚಹೊಸ ಪುನರುಜ್ಜೀವನಗೊಂಡ ಆತ್ಮವೆಂದು ಪ್ರಸ್ತಾಪಿಸುತ್ತೇವೆ. ದೇವರು ನಮ್ಮನ್ನು ಹೇಗೆ ಸಂಚಯಿತರಾದ ವ್ಯಕ್ತಿಗಳನ್ನಾಗಿ ಮಾಡುತ್ತಾರೆ ಎಂದು ಯೆಹೆಜ್ಕೇಲನ ಈ ಶ್ಲೋಕಗಳು ವರ್ಣಿಸುತ್ತವೆ ಮತ್ತು ನಮ್ಮನ್ನು ಸಂಚಯಿತರನ್ನಾಗಿ ಮಾಡುವ ಎಲ್ಲಾ ಕೆಲಸವನ್ನು ದೇವರು ಒಬ್ಬರೆ ಮಾಡುತ್ತಾರೆ.

### *ದೇವರಿಗೆ ಮೊರೆಹೋಗಲು ಎಲ್ಲಾ ಮನುಷ್ಯರಿಗೆ ಆದೇಶಿಸಲಾಗಿದೆ*

ರೋಮಾಪುರದವರಿಗೆ 10:13ರಲ್ಲಿ, **"ಕರ್ತನ ನಾಮವನ್ನು ಹೇಳಿಕೊಳ್ಳುವವರೆಲ್ಲರಿಗೆ ರಕ್ಷಣೆಯಾಗುವದೆಂದು ಬರೆದದೆ"** ಎಂದು ನಾವು ಓದುತ್ತೇವೆ, ಆದರೆ, ಸಂಚಯಿತರಾಗಲು ನಮ್ಮ ಹೃದಯಪೂರ್ವಕವಾಗಿ ದೇವರಿಗೆ ಮೊರೆಹೋಗಬೇಕೆಂಬ ಅಗತ್ಯವಾದ ಹೆಚ್ಚಿನ ಮಾಹಿತಿಯನ್ನು ಸೇರಿಸಿದ ಹೊರತು ಮುಕ್ತಿಗೆ ಸಂಬಂಧಿಸಿದಂತೆ ತೀರ್ಮಾನಕ್ಕೆ ನಾವು ಬರಲಾಗುವುದಿಲ್ಲ. ಕೇವಲ ದೇವರನ್ನು ಕರೆಯುವುದರಿಂದ ಮುಕ್ತಿ ಸಿಗುವುದಿಲ್ಲ ಎಂದು ನಮಗೆ ತಿಳಿದಿದೆ. ಮತ್ತು ದೇವರು ನಮಗೆ ಹೊಸ ಹೃದಯವನ್ನು ಕೊಟ್ಟು ನಮ್ಮನ್ನು ಮೊದಲೆ ಸಂಚಯಿತರನ್ನಾಗಿ ಮಾಡಿದ ಹೊರತು ನಾವು ದೇವರಿಗೆ ಮೊರೆಹೋಗುವುದಿಲ್ಲ, ಅಂದರೆ, ನಮ್ಮನ್ನು ಸಂಚಯಿತರನ್ನಾಗಿ ಮಾಡಲು ಎಲ್ಲಾ ಕೆಲಸವನ್ನು ದೇವರು ಮಾಡಿದ ಹೊರತು ನಾವು ದೇವರಿಗೆ ಮೊರೆಹೋಗುವುದಿಲ್ಲ.

ಆದರೆ, ಅದು ಇನ್ನೊಂದು ಸಮಸ್ಯೆಯನ್ನು ಪರಿಚಯಿಸುತ್ತದೆ. ರೋಮಾಪುರದವರಿಗೆ 10:13 ಘೋಷಿಸುವುದೇನೆಂದರೆ, ದೇವರ ನಾಮವನ್ನು ಹೇಳಿಕೊಳ್ಳುವವರ "ರಕ್ಷಣೆಯಾಗುವುದು". "ರಕ್ಷಣೆಯಾಗುವುದು" ಎಂಬುದು ಗ್ರೀಕ್ ಕ್ರಿಯಾಪದ, ಅದು ಸೂಚಿಸುವುದೇನೆಂದರೆ ಮುಕ್ತಿ ಎಂಬುದು ದೇವರ ನಾಮವನ್ನು ಕರೆಯುವುದರ ಪರಿಣಾಮವಾಗಿ ಭವಿಷ್ಯದಲ್ಲಿ ನಡೆಯುವ ಒಂದು ಘಟನೆ. ನಾವು ಮನಃಪೂರ್ವಕವಾಗಿ ದೇವರನ್ನು ಕರೆಯಬೇಕೆಂಬುದು ಶ್ಲೋಕದ ಮೊದಲ ಭಾಗದ ಬೈಬಲ್ ನ ಅರ್ಥವೆಂದು ನಾವು ಈಗಷ್ಟೆ ಕಲಿತಿದ್ದೇವೆ. ದೇವರು ನಮ್ಮನ್ನು ಸಂಚಯಿತರನ್ನಾಗಿ ಮಾಡಿರುವುದರಿಂದ

ಮತ್ತು ನಮಗೆ ಹೊಸ ಹೃದಯವನ್ನು ಕೊಟ್ಟಿರುವುದರಿಂದ ಮಾತ್ರ ನಾವು ಆತನನ್ನು ಮನಃಪೂರ್ವಕವಾಗಿ ಕರೆಯಬಹುದಾಗಿದೆ ಎಂದು ಸಹ ನಾವು ಕಲಿತಿದ್ದೇವೆ.

ಆದ್ದರಿಂದ, "ರಕ್ಷಣೆಯಾಗುವುದು" ಮನಃಪೂರ್ವಕವಾಗಿ ದೇವರನ್ನು ಕರೆಯುವುದರ ಪರಿಣಾಮವಾದ್ದರಿಂದ, ನಮಗೆ ಸಮಸ್ಯೆ ಉಂಟಾಗಿದೆ. ಈಗಾಗಲೆ ಸಂಚಯಿತನಾಗಿರುವ ವ್ಯಕ್ತಿ ಸಂಚಯಿತನಾಗಲು ಹೇಗೆ ಸಾಧ್ಯ?

ಈ ಅಧ್ಯಯನದಲ್ಲಿ ಈ ಹಿಂದೆ ನಾವು ಕಲಿತಿರುವಂತೆ, ದೇವರಿಂದ ಆಯ್ಕೆಯಾದ ಒಬ್ಬರ ಬದುಕಿನಲ್ಲಿ ಮುಕ್ತಿಯ ವಾಸ್ತವತೆ ಹಲವಾರು ಹೆಜ್ಜೆಗಳ ಚಟುವಟಿಕೆ ಎಂದು ನಾವು ಅರಿತಾಗ ಈ ಸಮಸ್ಯೆಯನ್ನು ಬಗೆಹರಿಸಬಹುದು. ಮೊದಲ ಹೆಜ್ಜೆ ಸಂಚಯಿತನಾಗಲು ಆ ವ್ಯಕ್ತಿಯ ಆಯ್ಕೆ. ಎರಡನೆಯ ಹೆಜ್ಜೆ ಯಾವುದೆಂದರೆ, ನಮ್ಮ ಪಾಪಗಳಿಗೆ ದೇವರು ಕೇಳಿದ ಬೆಲೆಯನ್ನು ಕ್ರಿಸ್ತರು ತೆತ್ತ ಘಳಿಗೆ, ಅಂದರೆ, ಶಿಲುಬೆಯನ್ನೇರಿದಾಗ, ಆ ಘಳಿಗೆಯಲ್ಲಿ, ಕಾನೂನು ಪ್ರಕಾರ, ನಮ್ಮ ಪಾಪಗಳಿಗೆ ದಂಡ ತೆರಲಾಯಿತು.

ಕ್ರಿಸ್ತರು ಆಯ್ಕೆಯಾದ ಯಾವ ವ್ಯಕ್ತಿಗಳ ಪಾಪಗಳಿಗೋಸ್ಕರ ಬೆಲೆ ತೆರಲು ಆಗಲೆ ದೇವರ ಕಡುಕೋಪವನ್ನು ಸಹಿಸಿದ್ದರೊ, ಅವರಿಗೆ ದೇವರು ಹೊಸ ಹೃದಯವನ್ನು ಅಥವ ಹೊಸ ಆತ್ಮವನ್ನು ಕೊಟ್ಟಾಗ ಮೂರನೆಯ ಹೆಜ್ಜೆ ನಡೆಯಿತು. ಸಂಚಯಿತರಾಗಿದ್ದೇವೆ ಎಂಬುದರ ಬಗ್ಗೆ ನಾವು ಮಾತನಾಡುವಾಗ, ಸಾಮಾನ್ಯವಾಗಿ ಈ ಮೂರನೆಯ ಹೆಜ್ಜೆ ನಮ್ಮ ಮನಸಿನಲ್ಲಿ ಇರುತ್ತದೆ.

ಆದರೆ ನಮ್ಮ ಮುಕ್ತಿ ಇನ್ನೂ ಪೂರ್ತಿಯಾಗಿಲ್ಲ. ಸಂಚಯಿತವಾಗಬೇಕಾದ ಪಾಪಿಷ್ಠ ದೇಹ ಇನ್ನೂ ನಮ್ಮ ಬಳಿ ಇದೆ. ಈಗ, ನಾವು ನಾಲ್ಕನೆಯ ಹೆಜ್ಜೆಗೆ ಬರುತ್ತೇವೆ, ಅದು, ಕೊನೆಯ ದಿನದಂದು, ಕ್ರಿಸ್ತರು ಹಿಂದಿರುಗಿ ಎಲ್ಲಾ ನಿಜ ನಂಬಿಕೆಯುಳ್ಳವರಿಗೆ ಅವರ ಹೊಚ್ಚಹೊಸ ಪುನರುಜ್ಜೀವನಗೊಂಡ ದೇಹಗಳನ್ನು ಕೊಟ್ಟಾಗ ನಡೆಯುತ್ತದೆ ಎಂದು ಒಂದನೆ ಕೊರಿಂಥದವರ 15ರಲ್ಲಿ ಹೇಳಲಾಗಿದೆ.

ಹೀಗೆ, "ನಾವು ಸಂಚಯಿತರಾಗಿದ್ದೇವೆ" ಮತ್ತು "ನಾವು ಸಂಚಯಿತರಾಗಲಿದ್ದೇವೆ" ಎಂದೂ ಕೂಡ ಘೋಷಿಸುವುದು ಬೈಬಲ್ ನ ಪ್ರಕಾರ ಸರಿಯಾಗಿದೆ. ಅದಕ್ಕಾಗಿಯೆ, ಆಗಲೆ ಸಂಚಯಿತನಾದ ವ್ಯಕ್ತಿ "ಸಂಚಯಿತನಾಗಲಿದ್ದಾನೆ" ಎಂದು ಬೈಬಲ್ ಒತ್ತಿ ಹೇಳಬಹುದು. ಅದಕ್ಕಾಗಿಯೆ, ಉದಾಹರಣೆಗೆ, ಒಂದನೆ ಪೇತ್ರನು 1:5ರಲ್ಲಿ ನಾವು ಹೀಗೆಂದು ಓದುತ್ತೇವೆ:

**ಅಂತ್ಯಕಾಲದಲ್ಲಿ ಪ್ರತ್ಯಕ್ಷವಾಗುವದಕ್ಕೆ ಸಿದ್ಧವಾಗಿರುವ ರಕ್ಷಣೆಯು ನಂಬುವವರಾದ ನಿಮಗೆ ದೊರೆಯಬೇಕೆಂದು ದೇವರು ನಿಮ್ಮನ್ನು ತನ್ನ ಬಲದಿಂದ ಕಾಯುತ್ತಾನೆ.**

ಆದುದರಿಂದಲೆ ಮಾರ್ಕ 13, ಶ್ಲೋಕ 13ರಲ್ಲಿ ನಾವು ಹೀಗೆಂದು ಓದುತ್ತೇವೆ:

**ಮತ್ತು ನನ್ನ ಹೆಸರಿನ ನಿಮಿತ್ತವಾಗಿ ನಿಮ್ಮನ್ನು ಎಲ್ಲರೂ ಹಗೆ ಮಾಡುವರು. ಆದರೆ ಕಡೇವರೆಗೂ ತಾಳುವವನು ರಕ್ಷಣೆ ಹೊಂದುವನು.**

*ಕೇವಲ ಅಂತ್ಯದಲ್ಲಿ, ದೇವರು ನಮಗೆ ಮಹಿಮೆ ಪಡೆದ ಪುನರುಜ್ಜೀವನಗೊಂಡ ದೇಹವನ್ನು ಕೊಟ್ಟಾಗ ಮಾತ್ರ ನಮ್ಮ ವ್ಯಕ್ತಿತ್ವದ ಪ್ರತಿಯೊಂದು ಭಾಗದಲ್ಲಿ ನಾವು ಸಂಚಯಿತರಾಗುತ್ತೇವೆ.*

ನಾವು ಈಗಾಗಲೆ ಸಂಚಯಿತರಾಗಿರುವ ಕಾರಣ ಅಂತ್ಯದವರೆಗೆ ಸಹಿಸುತ್ತೇವೆ. ಆದರೆ, ಅಂತ್ಯದಲ್ಲಿ ಮಾತ್ರ, ದೇವರು ನಮಗೆ ಮಹಿಮೆ ಪಡೆದ ಪುನರುಜ್ಜೀವನಗೊಂಡ ದೇಹವನ್ನು ಕೊಟ್ಟಾಗ ಮಾತ್ರ ನಮ್ಮ ವ್ಯಕ್ತಿತ್ವದ ಪ್ರತಿಯೊಂದು ಭಾಗದಲ್ಲಿ ನಾವು ಸಂಚಯಿತರಾಗುತ್ತೇವೆ.

ಹೀಗೆ, ಆಧ್ಯಾತ್ಮಿಕ ವಿಷಯಗಳನ್ನು ಆಧ್ಯಾತ್ಮಿಕದವುಗಳೊಂದಿಗೆ ಹೋಲಿಸಬೇಕೆಂಬ ಬೈಬಲ್ ನ ಆದೇಶವನ್ನು ನಾವು ಅನುಸರಿಸದಿದ್ದರೆ, ಬೈಬಲ್ ನ ಸತ್ಯಕ್ಕೆ ನಮ್ಮನ್ನು ಕುರುಡು ಮಾಡುವ ಬಲೆಗೆ ನಾವು ಸುಲಭವಾಗಿ ಬೀಳಬಹುದು ಎಂದು ಈ ಶ್ಲೋಕದಿಂದ ನಾವು ಕಲಿಯುತ್ತೇವೆ.

ಇದುವರೆಗೆ, ನಾವು ಅನೇಕ ಬಹಳ ಮುಖ್ಯವಾದ ಸತ್ಯಗಳನ್ನು ಕಲಿತಿದ್ದೇವೆ. ಈ ಕೆಳಗಿನವುಗಳು ಅವುಗಳಲ್ಲಿ ಕೆಲವು:

1. ಒಬ್ಬ ವ್ಯಕ್ತಿಯನ್ನು ಸಂಚಯಿತನನ್ನಾಗಿ ಮಾಡಲು ಅಗತ್ಯವಿರುವ <u>ಎಲ್ಲಾ</u> ಕೆಲಸವನ್ನು ಕ್ರಿಸ್ತರು ಒಬ್ಬರೆ ಮಾಡಿದ್ದಾರೆ.

2. ದೈವಾಜ್ಞೆಗೆ ವಿಧೇಯರಾಗಿರುವಾಗೆಲ್ಲ ನಾವು ಆಧ್ಯಾತ್ಮಿಕ ಕೆಲಸವನ್ನು ಮಾಡುತ್ತಿದ್ದೇವೆ. ಒಬ್ಬ ವ್ಯಕ್ತಿ ಸಂಚಯಿತನಾಗಿರದಿದ್ದಾಗ ಕೂಡ, ಸ್ವಲ್ಪ ಮಟ್ಟಿಗೆ ಅವನು ಕ್ರಿಸ್ತರನ್ನು ನಂಬುವಂತಹ ಆಧ್ಯಾತ್ಮಿಕ ಕೆಲಸವನ್ನು ಮಾಡಬಹುದು, ಆದರೆ, ಈ ಕೆಲಸ ಮುಕ್ತಿಯನ್ನು ಆರಂಭಿಸುವುದಕ್ಕಾಗಲಿ ಅಥವ ಯಾರಾದರು ಸಂಚಯಿತರಾಗಲು ಸಹಾಯಕವಾಗುವುದಿಲ್ಲ.

ಬೈಬಲ್ ನ ಈ ತತ್ವಗಳನ್ನು ಮನಸ್ಸಿನಲ್ಲಿಟ್ಟುಕೊಂಡು, ನಾವು ಬೈಬಲ್ ನ ದೈವಾಜ್ಞೆಗಳಿಗೆ ವಿಧೇಯರಾಗಿರುವುದು ಅಥವ ನಂಬುವುದು ಯಾವುದೊ ರೀತಿಯಲಿ ನಮ್ಮ ಮುಕ್ತಿಯಾಗಿ ಪರಿಣಮಿಸುತ್ತದೆ ಎಂದು ಬೋಧಿಸುವಂತೆ ಬೈಬಲ್ ನ ಯಾವುದಾದರು ಶ್ಲೋಕ ಕಂಡುಬಂದರೂ, ಅದು ಆ ಶ್ಲೋಕದ ಸಂಪೂರ್ಣವಾಗಿ ತಪ್ಪು ಗ್ರಹಿಕೆ ಎಂದು ನಮಗೆ

ಕೂಡಲೆ ತಿಳಿಯಬೇಕೆಂದು ನಮಗೆ ಎಚ್ಚರಿಕೆ ನೀಡಲಾಗಿದೆ. ನಾವು ಧರ್ಮಗ್ರಂಥಗಳಲ್ಲಿ ಹುಡುಕಬೇಕು ಮತ್ತು ಆ ಶ್ಲೋಕವನ್ನು ನಾವು ಸರಿಯಾಗಿ ಅರ್ಥಮಾಡಿಕೊಳ್ಳುವಂತಾಗಲು ಜ್ಞಾನಕ್ಕಾಗಿ ಪ್ರಾರ್ಥಿಸಬೇಕೆಂದು ನಮಗೆ ತಿಳಿದಿದೆ.

**ನಂಬುವ ಕೆಲಸ**

ಮುಕ್ತಿಯ ಬಗ್ಗೆ ಮಾತನಾಡುವಾಗ, ಬಹುಶಃ, ಸರಿಯಾಗಿ ಅರ್ಥಮಾಡಿಕೊಳ್ಳಬೇಕಾದ ಅತಿ ಮುಖ್ಯವಾದ ಪದವೆಂದರೆ "ನಂಬು". ನಾವು ಕಲಿತಿರುವಂತೆ, "ನಂಬು" ಎಂಬ ಪದ "ನಂಬಿಕೆ" ಎಂಬ ನಾಮವಾಚಕದ ಕ್ರಿಯಾಪದ ರೂಪ. ನಂಬಿಕೆ ಒಂದು ಕೆಲಸ ಎಂದೂ ಕೂಡ ನಾವು ಕಲಿತಿದ್ದೇವೆ, ಆದ್ದರಿಂದ, "ನಂಬುವುದು" ಆಧ್ಯಾತ್ಮಿಕ ಕೆಲಸ. ಮತ್ತು ನಮ್ಮ ಮುಕ್ತಿಯನ್ನು ಆರಂಭಿಸಲು ಅಥವ ಅದಕ್ಕೆ ಸಹಾಯಕವಾಗುವಂತೆ ನಾವು ಯಾವುದೇ ಕೆಲಸ ಮಾಡಲು ಸಾಧ್ಯವಿಲ್ಲ ಎಂದು ನಾವು ಕಲಿತಿದ್ದೇವೆ.

ಸಂಚಯಿತನಾಗುವ ಹೊರತಾಗಿ, ಮನುಷ್ಯ ಸ್ವಲ್ಪ ಮಟ್ಟಿಗೆ ನಂಬುವ ಕೆಲಸ ಮಾಡಬಹುದು ಏಕೆಂದರೆ, ಅವನಲ್ಲಿ ಆತ್ಮಸಾಕ್ಷಿ ಇದೆ ಮತ್ತು ಸ್ವಲ್ಪ ಮಟ್ಟಿಗೆ, ದೇವರ ನಿಯಮವನ್ನು ಅವನ ಹೃದಯದ ಮೇಲೆ ಬರೆಯಲಾಗಿದೆ. ಸತ್ಯವೆಂದರೆ, ಒಬ್ಬ ವ್ಯಕ್ತಿ ಶ್ರದ್ಧೆಯಿಂದ ದೇವರ ರಾಜ್ಯವನ್ನು ಪ್ರವೇಶಿಸಲು ಪ್ರಯತ್ನಿಸುವಾಗ, ಅಂದರೆ, ಸಂಚಯಿತನಾಗಲು ಪ್ರಯತ್ನಿಸುವಾಗ, ಅವನು ಆ ಆಜ್ಞೆಗೆ ವಿಧೇಯನಾಗಿರುತ್ತಾನೆ ಏಕೆಂದರೆ, ಅವನು ನಂಬುವ ಸಾಮರ್ಥ್ಯವುಳ್ಳವನಾಗಿದ್ದಾನೆ. ಆದರೆ, ಅಂತಹ ನಂಬಿಕೆ ಮುಕ್ತಿಗೆ ಸಂಬಂಧಿಸಿದ ನಂಬಿಕೆ ಅಲ್ಲ. ಸಂಚಯಿತರಾದ ವ್ಯಕ್ತಿಗಳು ಹೃದಯದಿಂದ ನಂಬುವುದರ ಬಗ್ಗೆ ದೇವರು ರೋಮಾಪುರದವರ 10, 9 ಮತ್ತು 10ನೇ ಶ್ಲೋಕಗಳಲ್ಲಿ ಪ್ರಸ್ತಾಪಿಸುತ್ತಾರೆ, ಅಲ್ಲಿ ನಾವು ಹೀಗೆಂದು ಓದುತ್ತೇವೆ:

**ಅದೇನೆಂದರೆ ನೀನು ಯೇಸುವನ್ನೇ ಕರ್ತನೆಂದು ಬಾಯಿಂದ ಅರಿಕೆಮಾಡಿಕೊಂಡು ದೇವರು ಆತನನ್ನು ಸತ್ತವರೊಳಗಿಂದ ಎಬ್ಬಿಸಿದನೆಂದು ಹೃದಯದಿಂದ ನಂಬಿದರೆ ನಿನಗೆ ರಕ್ಷಣೆಯಾಗುವದು ಎಂಬದೇ. ಹೃದಯದಿಂದ ನಂಬುವದರ ಮೂಲಕ ನೀತಿಯು ದೊರಕುತ್ತದೆ. ಬಾಯಿಂದ ಅರಿಕೆಮಾಡುವದರ ಮೂಲಕ ರಕ್ಷಣೆಯಾಗುತ್ತದೆ.**

ಆದರೆ, ಯೆರೆಮೀಯ 17:9 ಮತ್ತು ಮತ್ತಾಯ 15:19ರಲ್ಲಿ, ಮನುಷ್ಯನ ಹೃದಯ ಬಹಳ ದುಷ್ಟವಾದುದು ಎಂದು ನಾವು ಕಲಿತೆವು. ಆದ್ದರಿಂದ, ದೇವರು ನಮಗೆ ಹೊಸ ಹೃದಯವನ್ನು ಕೊಡುವ ತನಕ ಹೃದಯದಿಂದ ನಂಬುವುದು ಅಸಾಧ್ಯ. ದೇವರು ನಮಗೆ ಹೊಸ ಹೃದಯವನ್ನು ಕೊಟ್ಟಾಗ, ಯೆಹೆಜ್ಕೇಲನು 36:24-27ರಲ್ಲಿ ಹೇಳಿರುವಂತೆ, ಆತ

ನಮ್ಮನ್ನು ಸಂಚಯಿತರನ್ನಾಗಿ ಮಾಡಿದ್ದಾರೆ ಎಂದು ಅರ್ಥ. ಆದ್ದರಿಂದ, ಸಂಚಯಿತರಾಗುವ ಮುನ್ನ ನಾವು ನಂಬಿದಾಗ, ಅದು ಹೃದಯದಿಂದಲ್ಲ, ಆದ್ದರಿಂದ, ಅದು ಮುಕ್ತಿಗೆ ಸಂಬಂಧಪಡುವುದಿಲ್ಲ.

ಇನ್ನೊಂದೆಡೆ, ನಾವು ಹೃತ್ಪೂರ್ವಕವಾಗಿ ನಂಬಿದರೆ, ನಮಗೆ ಹೊಸ ಹೃದಯವನ್ನು ಕೊಟ್ಟು ದೇವರು ಆಗಲೆ ನಮ್ಮನ್ನು ಸಂಚಯಿತರನ್ನಾಗಿ ಮಾಡಿದ್ದಾರೆ ಎಂದು ಅರ್ಥ. ನಮ್ಮ ನಂಬಿಕೆ ಸಂಪೂರ್ಣವಾಗಿ ದೇವರು ನಮ್ಮನ್ನು ಸಂಚಯಿತರನ್ನಾಗಿ ಮಾಡಿದ್ದಾರೆ ಎಂಬ ಸತ್ಯದ ಫಲ. ಆದ್ದರಿಂದ, "ನಂಬುವುದು" ಎಂಬ ಪದ ಮತ್ತು "ವಿಶ್ವಾಸ ಮಾಡುವುದು" ಎಂಬ ನುಡಿಗಟ್ಟು ನಾವು ಸಂಚಯಿತರಾಗುವುದಕ್ಕೆ ಒಂದು ಮಾರ್ಗ ಅಥವ ಒಂದು ಸಾಧನ ಎಂದು ಎಂದಿಗೂ ಗುರುತಿಸಲಾಗುವುದಿಲ್ಲ.

ಅಪೋಸ್ತಲರ ಕೃತ್ಯಗಳು, ಅಧ್ಯಾಯ 8, 13ರಿಂದ 23ನೇ ಶ್ಲೋಕಗಳ ವರೆಗೆ, ನಾವು ಓದುವುದೇನೆಂದರೆ, ಸಿಮೋನನೆಂಬ ಮಂತ್ರವಾದಿ ನಂಬಿದನು ಮತ್ತು ಅವನಿಗೆ ದೀಕ್ಷಾಸ್ನಾನ ಮಾಡಿಸಲಾಯಿತು, ಆದರೆ, ಅವನು ಸಂಚಯಿತನಾಗಲಿಲ್ಲ ಎಂದು ನಂತರದ ಶ್ಲೋಕಗಳು ತೋರಿಸುತ್ತವೆ. ಅಬ್ರಹಾಮನು ದೇವರನ್ನು, ಅಂದರೆ ಕ್ರಿಸ್ತರನ್ನು, ನಂಬಿದನು, ಅವನ ಆ ನಂಬಿಕೆ ಅವನ ಲೆಕ್ಕಕ್ಕೆ ನೀತಿಯಾಯಿತು. ಸಿಮೋನನು ಸಂಚಯಿತನಾಗದ ವ್ಯಕ್ತಿಯಾಗಿ ನಂಬಿದನು. ಅಬ್ರಹಾಮನು ಸಂಚಯಿತನಾದ ವ್ಯಕ್ತಿಯಾಗಿ ನಂಬಿದನು. ಆದರೆ, ಸಿಮೋನನ ಬದುಕಿನಲ್ಲಾಗಲಿ ಅಥವ ಅಬ್ರಹಾಮನ ಬದುಕಿನಲ್ಲಾಗಲಿ ನಂಬಿಕೆ ಮುಕ್ತಿಗೆ ಸಹಾಯಕವಾಗಲಿಲ್ಲ.

ಹಾಗಾಗಿ, ಸಂಚಯಿತರಾಗುವ ಮುನ್ನ, ನಾವು ನಂಬುವ ಕೆಲಸವನ್ನು ಮಾಡಿದರೆ, ಅದು ಯಾವುದೇ ರೀತಿಯಲ್ಲಿ ನಮ್ಮ ಮುಕ್ತಿಗೆ ಸಹಾಯಕವಾಗುವುದಿಲ್ಲ ಎಂದು ವಿಶ್ವಾಸದಿಂದ ತೀರ್ಮಾನಿಸಬಹುದು. ಸಂಚಯಿತರಾದ ಬಳಿಕ ನಾವು ನಂಬುವ ಕೆಲಸ ಮಾಡಿದರೆ, ಅದು ಸಂಪೂರ್ಣವಾಗಿ ದೇವರು ನಮ್ಮನ್ನು ಸಂಚಯಿತರನ್ನಾಗಿ ಮಾಡಿದ್ದಾರೆ ಎಂಬ ಸತ್ಯದ ಫಲ.

*ನಂಬಿ ಎಂದು ಹೇಳುವ ಆಜ್ಞೆಗೆ ವಿಧೇಯರಾಗಿರುವುದು, ದೇವರ ಎಲ್ಲಾ ಆಜ್ಞೆಗಳಿಗೆ ವಿಧೇಯರಾಗಿರಬೇಕೆಂದು ಪ್ರಯತ್ನಿಸುವ ಬಯಕೆಯೊಂದಿಗೆ ಗುರುತಿಸಲ್ಪಡುತ್ತದೆ.*

ಆದರೆ, "ನಂಬು" ಎಂಬ ಪದ ನಾವು ಸಂಚಯಿತರಾಗುವ ಮುನ್ನ ನಂಬುವುದರ ಮೌಲ್ಯ ಮತ್ತು ಪ್ರಾಮುಖ್ಯತೆಯನ್ನು ಸೂಚಿಸುತ್ತದೆ. ನಂಬಿ ಎಂಬ ಆಜ್ಞೆಗೆ ವಿಧೇಯರಾಗಿರುವುದು ದೇವರ ಎಲ್ಲಾ ಆಜ್ಞೆಗಳಿಗೆ ವಿಧೇಯರಾಗಿರಬೇಕೆಂದು ಪ್ರಯತ್ನಿಸುವ ಬಯಕೆಯೊಂದಿಗೆ

ಗುರುತಿಸಲ್ಪಡುತ್ತದೆ. ದೇವರನ್ನು ಪ್ರೀತಿಸುವುದು, ಮುಕ್ತಿಯನ್ನು ಹುಡುಕುವುದು, ಆತನ ಸೇವೆ ಮಾಡುವುದು, ನಮ್ಮ ಪಾಪಗಳಿಗೆ ಪಶ್ಚಾತ್ತಾಪ ಪಡುವುದು ಮತ್ತು ಮುಕ್ತಿಗಾಗಿ ಪ್ರಾರ್ಥಿಸುವುದು ಈ ದೈವಾಜ್ಞೆಗಳಲ್ಲಿ ಸೇರಿವೆ. ಈ ಆಜ್ಞೆಗಳಿಗೆ ವಿಧೇಯರಾಗಿರುವುದು ನಾವು ಮಾಡುತ್ತಿರುವ ಕೆಲಸ ಆದರೆ ಅದು ನಮಗೆ ಎಂದಿಗೂ ಮುಕ್ತಿಯನ್ನು ನೀಡದು. ಆದರೂ, ಈ ರೀತಿಯ ವಿಧೇಯತೆ, ನಾವು ಬೈಬಲ್ ಅನ್ನು ಇನ್ನೂ ಹೆಚ್ಚು ಜಾಗರೂಕತೆಯಿಂದ ಕೇಳುವಂತೆ ಮಾಡುತ್ತದೆ. ಹೀಗೆ, ದೇವರು ನಮ್ಮನ್ನು ಸಂಚಯಿತರನ್ನಾಗಿ ಮಾಡಲು ಯೋಜಿಸಿದರೆ ನಾವು ಸರಿಯಾದ ಪರಿಸರದಲ್ಲಿರುತ್ತೇವೆ.

ನಾವು ಆಧ್ಯಾತ್ಮಿಕವಾಗಿ ಸತ್ತಿದ್ದರೆ ಹೇಗೆ ನಂಬುವುದು? ಯೆಹೆಜ್ಕೇಲನು 37ರಲ್ಲಿ ಹೇಳಿರುವಂತೆ, ಮನುಷ್ಯನನ್ನು ಒಣಗಿದ ಮೂಳೆಗಳ ಕಣಿವೆಯಂತೆ ಮತ್ತು ಯೋಹಾನ 11:39ರಲ್ಲಿ ಹೇಳಿರುವಂತೆ, ಮನುಷ್ಯನನ್ನು ನಾತ ಬೀರುವ ಹೆಣದಂತೆ ದೇವರು ಮಾದರಿಗೊಳಿಸುತ್ತಾರೆ ಎಂಬುದನ್ನು ನೆನಪಿಸಿಕೊಳ್ಳಿ. ರೋಮಾಪುರದವರಿಗೆ 3ರಲ್ಲಿ, ದೇವರನ್ನು ಹುಡುಕುವವರು ಯಾರೂ ಇಲ್ಲ, ಒಬ್ಬರೂ ಇಲ್ಲ ಎಂದು ದೇವರು ಘೋಷಿಸುತ್ತಾರೆ. ಮುಕ್ತಿಯ ಮುನ್ನ, ಪ್ರತಿಯೊಬ್ಬ ಮನುಷ್ಯ ಆಧ್ಯಾತ್ಮಿಕವಾಗಿ ಸತ್ತಿರುತ್ತಾನೆ ಎಂಬ ಸತ್ಯಕ್ಕೆ ಈ ಹೇಳಿಕೆಗಳು ಪ್ರಾಧಾನ್ಯ ಕೊಡುತ್ತವೆ. ದೇಹ ಮತ್ತು ಆತ್ಮ, ಎರಡರಲ್ಲೂ ಅವನು ಆಧ್ಯಾತ್ಮಿಕವಾಗಿ ಸತ್ತಿದ್ದಾನೆ ಮತ್ತು ದೇವರು ಅವನೊಳಗೆ ವಾಸಿಸುತ್ತಿಲ್ಲ. ಅವನ ಪಾಪಗಳ ಕಾರಣ, ನ್ಯಾಯಬದ್ಧವಾಗಿ, ಅವನು ಪ್ರಸ್ತುತ ದೇವರ ಕಡುಕೋಪಕ್ಕೆ ಪಾತ್ರನಾಗಿದ್ದಾನೆ ಮತ್ತು ವಿನಾಶದತ್ತ ನಡೆದಿದ್ದಾನೆ.

ಪ್ರತಿಯೊಂದು ಪಾಪ ವಿನಾಶದ ಶಿಕ್ಷೆಯಲ್ಲಿ ಪರಿಣಮಿಸುತ್ತದೆ, ಆದ್ದರಿಂದ, ದೇವರ ಮಧ್ಯಸ್ಥಿಕೆ ಇಲ್ಲದೆ, ಪ್ರತಿಯೊಬ್ಬ ವ್ಯಕ್ತಿ ವಿನಾಶಕ್ಕೆ ಗುರಿಯಾಗುವುದು ಖಚಿತವಾಗಿದೆ. ದೇವರ ನಿಯಮ ಸ್ವಲ್ಪ ಮಟ್ಟಿಗೆ ಅವನೊಳಗಿದ್ದರೂ, ಮತ್ತು ಸರಿ ಯಾವುದು, ತಪ್ಪು ಯಾವುದು ಎಂದು ಅವನಿಗೆ ತಿಳಿಯುವಂತೆ ಆತ್ಮಸಾಕ್ಷಿ ಅವನಲ್ಲಿದ್ದರೂ, ದೇವರ ಸಹಾಯವಿಲ್ಲದೆ, ಅವನ ಪರಿಸ್ಥಿತಿ ವಿಪರೀತ ನಿರಾಶಾದಾಯಕವಾಗಿದೆ. ಹೀಗೆ, ಸಂಚಯಿತನಾಗದ ಮನುಷ್ಯ ಕ್ರಿಸ್ತರನ್ನು ನಂಬುವ ಕೆಲಸವನ್ನು ಮಾಡಿದರೂ ಅವನು ನಾತ ಬೀರುವ ಹೆಣ, ಒಣ ಮೂಳೆಗಳ ಕಣಿವೆ. ಹೃತ್ಪೂರ್ವಕವಾಗಿ ಅವನು ದೇವರನ್ನು ಹುಡುಕಲು ಸಾಧ್ಯವಿಲ್ಲ ಅಥವ ಹೃತ್ಪೂರ್ವಕವಾಗಿ ನಂಬಲು ಸಾಧ್ಯವಿಲ್ಲ ಏಕೆಂದರೆ, ಅವನ ಹೃದಯ ವಿಪರೀತ ದುಷ್ಟವಾದುದು. ದೇವರು ಅವನಿಗೆ ಹೊಸ ಹೃದಯವನ್ನು ನೀಡಿದರೆ ಮಾತ್ರ, ಅಂದರೆ, ದೇವರು ಅವನನ್ನು ಸಂಚಯಿತನನ್ನಾಗಿ ಮಾಡಿದಾಗ ಮಾತ್ರ

ಅವನು ಹೃತ್ಪೂರ್ವಕವಾಗಿ ದೇವರನ್ನು ಹುಡುಕುತ್ತಾನೆ ಮತ್ತು ನಂಬುತ್ತಾನೆ. ಅವನಿಗೆ ಹೊಸ ಹೃದಯವನ್ನು ಕೊಟ್ಟಾಗ, ಅವನ ಆತ್ಮದಲ್ಲಿ ಅವನು ನಿರಂತರವಾಗಿ ಬದುಕುತ್ತಾನೆ.

***ದೇವರನ್ನು ನಂಬಲು ಎಲ್ಲಾ ಮನುಷ್ಯರಿಗೆ ಆಜ್ಞಾಪಿಸಲಾಗಿದೆ***

ಅಪೋಸ್ತಲರ ಕೃತ್ಯಗಳು 16, ಶ್ಲೋಕ 31ರಲ್ಲಿ ನಾವು ಹೀಗೆಂದು ಓದುತ್ತೇವೆ:

**ಅವರು - ಕರ್ತನಾದ ಯೇಸುವಿನ ಮೇಲೆ ನಂಬಿಕೆಯಿಡಿ. ಆಗ ನೀನು ರಕ್ಷಣೆಹೊಂದುವಿ, ನಿನ್ನ ಮನೆಯವರೂ ರಕ್ಷಣೆಹೊಂದುವರು ಎಂದು ಹೇಳಿ ಅವನಿಗೂ ಅವನ ಮನೆಯಲ್ಲಿದ್ದವರೆಲ್ಲರಿಗೂ ದೇವರ ವಾಕ್ಯವನ್ನು ತಿಳಿಸಿದರು.**

ನಮ್ಮ ಹೃದಯದಲ್ಲಿ ನಂಬುವುದು ಮಾತ್ರ ಮುಕ್ತಿಗೆ ಸಂಬಂಧಿಸಿದೆ ಎಂದು ನಮಗೆ ತಿಳಿದಿದೆ. ನಾವು ನಮ್ಮ ಹೃದಯದಲ್ಲಿ ನಂಬಿದಾಗ, ನಾವು ಆಗಲೆ ಸಂಚಯಿತರಾಗಿದ್ದೇವೆ ಏಕೆಂದರೆ, ಯೆಹೆಜ್ಕೇಲನು 36:26ರಲ್ಲಿ ಹೇಳಿರುವಂತೆ, ನಮ್ಮ ಹೃದಯದಲ್ಲಿ ನಾವು ನಂಬಬೇಕಾದರೆ ದೇವರು ನಮಗೆ ಹೊಸ ಹೃದಯವನ್ನು ನೀಡಬೇಕು. ಮತ್ತು ಹೊಸ ಹೃದಯ ನಾವು ಸಂಚಯಿತರಾಗಿದ್ದೇವೆ ಎಂಬ ಸತ್ಯವನ್ನು ಸೂಚಿಸುತ್ತದೆ.

ಯೋಹಾನ 3, ಶ್ಲೋಕ 16ರ ಪ್ರಸಿದ್ಧ ಘೋಷಣೆಯಲ್ಲಿ ನಾವು ಓದುವುದೇನೆಂದರೆ:

**ದೇವರು ಲೋಕದ ಮೇಲೆ ಎಷ್ಟೋ ಪ್ರೀತಿಯನ್ನಿಟ್ಟು ತನ್ನ ಒಬ್ಬನೇ ಮಗನನ್ನು ಕೊಟ್ಟನು; ಆತನನ್ನು ನಂಬುವ ಒಬ್ಬನಾದರೂ ನಾಶವಾಗದೆ ಎಲ್ಲರೂ ನಿತ್ಯ ಜೀವವನ್ನು ಪಡೆಯಬೇಕೆಂದು ಆತನನ್ನು ಕೊಟ್ಟನು.**

ಈಗ, "ಒಬ್ಬನಾದರೂ" ಎಂಬ ಪದ ದೇವರಿಂದ ಆಯ್ಕೆಯಾದವರನ್ನು ಮಾತ್ರ ಒಳಗೊಂಡಿರಬಹುದೆಂದು ನಮಗೆ ತಿಳಿದಿದೆ. ದೇವರು ಸಂಚಯಿತನನ್ನಾಗಿ ಮಾಡಲು ಎಂದೂ ಉದ್ದೇಶಿಸದ ಸಂಚಯಿತನಾಗಿರದ ವ್ಯಕ್ತಿ ಸ್ವಲ್ಪ ಮಟ್ಟಿಗೆ ಆತನನ್ನು ನಂಬಬಹುದೆಂದು ಕೂಡ ನಮಗೆ ತಿಳಿದಿದೆ. ಸಂಚಯಿತರಾಗದೆ ಉಳಿಯುವವರು ಸಂಚಯಿತರಾಗದಿರಲು ಕಾರಣವೇನೆಂದರೆ ಅವರು ಕ್ರಿಸ್ತರನ್ನು ನಂಬುವ ಕೆಲಸ ಮಾಡಲಿಲ್ಲ ಎಂಬುದು ನಮಗೆ ತಿಳಿದಿದೆ. ಸತ್ಯವೇನೆಂದರೆ, ದೇವರು ಅವರಿಗೆ ನಿರಂತರ ಬದುಕನ್ನು ಕೊಟ್ಟಿರುವ ಕಾರಣ ಅವರು ಆತನನ್ನು ನಂಬುತ್ತಾರೆ. ದೇವರು ಅವರನ್ನು ಸಂಚಯಿತರನ್ನಾಗಿ ಮಾಡಿದ್ದರು ಎಂಬ ಸತ್ಯದ ಫಲ ಅವರ ನಂಬಿಕೆ.

*ಸತ್ಯವೇನೆಂದರೆ, ದೇವರು ಅವರಿಗೆ ನಿರಂತರ ಬದುಕನ್ನು ಕೊಟ್ಟಿರುವ ಕಾರಣ ಅವರು ಆತನನ್ನು ನಂಬುತ್ತಾರೆ.*

***ನಮ್ಮನ್ನು ಸಂಚಯಿತರನ್ನಾಗಿ ಮಾಡಲು ನಿಷ್ಠಾವಂತರಾಗಿದ್ದ ಕ್ರಿಸ್ತರು ಎಲ್ಲಾ ಕೆಲಸ ಮಾಡಿದರು***

ದೇವರು ಬೈಬಲ್ ಅನ್ನು ಬರೆದಾಗ, ಸತ್ಯವನ್ನು ಕಂಡುಹಿಡಿಯುವುದನ್ನು ಆತ ಸುಲಭ ಮಾಡಲಿಲ್ಲ. ಆತ ನಮ್ಮನ್ನು ಬಹಳ ದೀನರಾಗಿ ಉಳಿಯುವಂತೆ ಮಾಡುತ್ತಾರೆ, ಮತ್ತು ಜ್ಞಾನಕ್ಕಾಗಿ ದೇವರನ್ನು ಸತತವಾಗಿ ಪ್ರಾರ್ಥಿಸುತ್ತ ಈ ಕಷ್ಟಕರವಾದ ಶ್ಲೋಕಗಳನ್ನು ನಾವು ಸಮಾಧಾನದಿಂದ ಮತ್ತು ಶ್ರದ್ಧೆಯಿಂದ ಪರೀಶಿಲಿಸುವಂತೆ ಮಾಡುತ್ತಾರೆ. ಬೈಬಲ್ ಬೋಧಿಸುವ ಎಲ್ಲದರೊಂದಿಗೆ ನಾವು ಸಾಮರಸ್ಯವನ್ನು ಕಂಡುಹಿಡಿಯುವ ತನಕ ನಾವು ಓದುತ್ತಿರುವ ಶ್ಲೋಕ ನಮಗೆ ಅರ್ಥವಾಗಿಲ್ಲ ಎಂಬುದನ್ನು ನಾವು ಯಾವಾಗಲು ನೆನಪಿನಲ್ಲಿಟ್ಟುಕೊಳ್ಳಬೇಕು.

ಬೈಬಲ್ ಪ್ರಸ್ತುತಪಡಿಸುವ ಒಂದು ಒಗಟನ್ನು ನಾವು ಗಲಾತ್ಯದವರ 2 ಮತ್ತು ಗಲಾತ್ಯದವರ 3ರ ಅನೇಕ ಶ್ಲೋಕಗಳಲ್ಲಿ ಕಾಣಬಹುದು. ಉದಾಹರಣೆಗೆ, ಗಲಾತ್ಯದವರ 3, ಶ್ಲೋಕ 2ರಲ್ಲಿ ದೇವರು ಹೀಗೆಂದು ಒತ್ತಿ ಹೇಳುತ್ತಾರೆ:

**ಒಂದು ಸಂಗತಿಯನ್ನು ಮಾತ್ರ ನಿಮ್ಮಿಂದ ತಿಳುಕೊಳ್ಳಬೇಕೆಂದಿದ್ದೇನೆ. ನೀವು ದೇವರಾತ್ಮನನ್ನು ಹೊಂದಿದ್ದು,** ಅಂದರೆ ನೀವು ಸಂಚಯಿತರಾದದ್ದು, **ನೇಮನಿಷ್ಠೆಗಳನ್ನು ಅನುಸರಿಸಿದ್ದರಿಂದಲೋ? ಕೇಳಿ ನಂಬಿದ್ದರಿಂದಲೋ?**

ನಂಬುವುದು ಒಂದು ಕೆಲಸ ಎಂಬುದನ್ನು ನೆನಪಿಸಿಕೊಳ್ಳಿ. ಆದರೆ ನಮ್ಮನ್ನು ಸಂಚಯಿತರನ್ನಾಗಿ ಮಾಡಲು ಎಲ್ಲಾ ಕೆಲಸವನ್ನು ಮಾಡಿದ್ದು ಯಾರು? ಯೇಸು ಎಲ್ಲಾ ಕೆಲಸವನ್ನು ಮಾಡಿದರು. ದೇವರ ಎಲ್ಲಾ ಆಜ್ಞೆಗಳಿಗೆ ಆತ ಸಂಪೂರ್ಣವಾಗಿ ನಿಷ್ಠಾವಂತರಾಗಿದ್ದರು ಮತ್ತು ಆತ ನಮಗೆ ಮುಕ್ತಿಯನ್ನು ತಂದರು. ಹೀಗೆ, ಗಲಾತ್ಯದವರ 3, ಶ್ಲೋಕ 2ನ್ನು ಬೇರೆ ಮಾತಿನಲ್ಲಿ ನಾವು ಈ ರೀತಿಯಲ್ಲಿ ಹೇಳಬಹುದು: "ನೀವು ದೇವರಾತ್ಮನನ್ನು ಹೊಂದಿದ್ದು ನೇಮನಿಷ್ಠೆಗಳನ್ನು ಅನುಸರಿಸಿದ್ದರಿಂದಲೋ? ಕೇಳಿ ನಂಬಿದ್ದರಿಂದಲೋ, ನಮ್ಮನ್ನು ಸಂಚಯಿತರನ್ನಾಗಿ ಮಾಡಲು ಕ್ರಿಸ್ತರು ಮಾಡಿದ ಕೆಲಸದಿಂದಲೋ?" ಆದುದರಿಂದಲೆ ಆತನ ಹೆಸರು, ಪ್ರಕಟನೆ 19:11ರಲ್ಲಿ ಹೇಳಿರುವಂತೆ, ನಂಬಿಗಸ್ತ ಎಂದು. ಆತನೇ ನಂಬಿಕೆಯ ಕೆಲಸದ ತಿರುಳು.

ಗಲಾತ್ಯದವರ 2, ಶ್ಲೋಕ 16 ಹೀಗೆಂದು ಘೋಷಿಸುತ್ತದೆ:

**ಆದರೂ, ಯಾವನಾದರೂ ಯೇಸು ಕ್ರಿಸ್ತನ ಮೇಲಣ ನಂಬಿಕೆಯಿಂದಲೇ ಹೊರತು ನೇಮನಿಷ್ಠೆಗಳನ್ನನುಸರಿಸಿ ನೀತಿವಂತನೆಂದು ನಿರ್ಣಯಿಸಲ್ಪಡುವದಿಲ್ಲವೆಂಬದು ನಮಗೆ ತಿಳಿದಿರುವದರಿಂದ ನಾವು ಸಹ ನೇಮನಿಷ್ಠೆಗಳನ್ನು ಬಿಟ್ಟು ಕ್ರಿಸ್ತನ ಮೇಲಣ ನಂಬಿಕೆಯಿಂದಲೇ ನೀತಿವಂತರೆಂದು ನಿರ್ಣಯಿಸಲ್ಪಡುವದಕ್ಕಾಗಿ ಕ್ರಿಸ್ತ ಯೇಸುವಿನಲ್ಲಿ ನಂಬಿಕೆಯಿಟ್ಟೆವು; ಯಾಕಂದರೆ ಯಾವನಾದರೂ ನೇಮನಿಷ್ಠೆಗಳನ್ನನುಸರಿಸಿ ನೀತಿವಂತನೆಂದು ನಿರ್ಣಯಿಸಲ್ಪಡುವದಿಲ್ಲ.**

ಮನುಷ್ಯನು ಯೇಸು ಕ್ರಿಸ್ತರ ಮೇಲಿನ ನಂಬಿಕೆಯಿಂದ, ಆತನ ಕೆಲಸದಿಂದ ನೀತಿವಂತನೆಂದು ನಿರ್ಣಯಿಸಲ್ಪಡುತ್ತಾನೆಯೆ ಹೊರತು ನೇಮನಿಷ್ಠೆಗಳನ್ನು ಅನುಸರಿಸುವುದರಿಂದಲ್ಲ. ನಮ್ಮ ಮುಕ್ತಿಗಾಗಿ ಅಗತ್ಯವಿರುವ ಎಲ್ಲಾ ಕೆಲಸವನ್ನು ಮಾಡಲು ಆತ ನಿಷ್ಠಾವಂತರಾಗಿದ್ದರು.

ಪದೇ ಪದೇ, ಶ್ಲೋಕಗಳಲ್ಲಿ "ನಂಬಿಕೆ" ಎಂಬ ಪದವಿರುವಲ್ಲಿ "ನಂಬಿಗಸ್ತ" ಎಂಬ ಹೆಸರಿರುವ "ಕ್ರಿಸ್ತ"ರ ಹೆಸರನ್ನು ಬದಲಿಯಾಗಿ ಬಳಸಿದರೆ, ಆ ಶ್ಲೋಕಗಳನ್ನು ಇನ್ನೂ ಸುಲಭವಾಗಿ ನಾವು ಅರ್ಥ ಮಾಡಿಕೊಳ್ಳಬಹುದು. ಹೀಗೆ, ಎಫೆಸದವರ 2, ಶ್ಲೋಕ 8ನ್ನು ನಾವು ಹೀಗೆಂದು ಅರ್ಥಮಾಡಿಕೊಳ್ಳಬಹುದು, "ನಂಬಿಕೆಯ, ಅಂದರೆ ಕ್ರಿಸ್ತರ ಮೂಲಕ, ಕೃಪೆಯಿಂದಲೇ ರಕ್ಷಣೆ ಹೊಂದಿದವರಾಗಿದ್ದೀರಿ". ಗಲಾತ್ಯದವರ 3, ಶ್ಲೋಕ 11ನ್ನು ಈ ರೀತಿಯಲ್ಲಿ ಅರ್ಥಮಾಡಿಕೊಳ್ಳಬಹುದು, "ಯಾಕಂದರೆ ನೀತಿವಂತನು ನಂಬಿಕೆಯಿಂದಲೇ, ಅಂದರೆ ಕ್ರಿಸ್ತರಿಂದಲೇ, ಬದುಕುವನೆಂದು ಬರೆದದೆ." ಮತ್ತು ಗಲಾತ್ಯದವರ 3, ಶ್ಲೋಕ 2ನ್ನು ಈ ರೀತಿಯಲ್ಲಿ ಅರ್ಥಮಾಡಿಕೊಳ್ಳಬಹುದು, "ನೀವು ದೇವರಾತ್ಮನನ್ನು ಹೊಂದಿದ್ದು ನೇಮನಿಷ್ಠೆಗಳನ್ನು ಅನುಸರಿಸಿದ್ದರಿಂದಲೋ? ಕೇಳಿ ನಂಬಿದ್ದರಿಂದಲೋ, ಅಥವ ದೇವರ ಪದವಾದ ಕ್ರಿಸ್ತರನ್ನು ಕೇಳಿದ್ದರಿಂದಲೋ?"

***ಮುದ್ರೆಯನ್ನು ಹಾಕುವುದು ಯಾವಾಗಲು ದೇವರ ಕೆಲಸ***

ಪ್ರಾಸಂಗಿಕವಾಗಿ, ಕ್ರೈಸ್ತದೇವಾಲಯಗಳಿಂದ ಮತ್ತು ಧರ್ಮಶಾಸ್ತ್ರಜ್ಞರಿಂದ ನಡೆಯುತ್ತಿರುವ ಬೈಬಲ್ ನ ಒಂದು ಗಂಭೀರವಾದ ತಪ್ಪು ಬೋಧನೆಯೆಂದರೆ, ನಿರ್ಮಲೋದಕ ದೀಕ್ಷಾಸ್ನಾನ ಒಬ್ಬ ವ್ಯಕ್ತಿಯನ್ನು ನೀತಿವಂತನನ್ನಾಗಿ ಒಡಂಬಡಿಕೆಯ ಮುದ್ರೆಯನ್ನು ಹಾಕುವುದು

ಅವರು ರೋಮಾಪುರದವರ 4, ಶ್ಲೋಕ 11ರ ಆಧಾರದ ಮೇಲೆ ಹೀಗೆ ತಪ್ಪಾಗಿ ತೀರ್ಮಾನಿಸುತ್ತಾರೆ, ಅಲ್ಲಿ ನಾವು ಓದುವುದೇನೆಂದರೆ:

**ಆ ಮೇಲೆ ಸುನ್ನತಿಯೆಂಬ ಸಂಸ್ಕಾರವನ್ನು ಗುರುತಾಗಿ ಹೊಂದಿದನು. ಇದು ಸುನ್ನತಿಯಾಗುವದಕ್ಕೆ ಮೊದಲೇ ಅವನಿಗಿದ್ದ ನಂಬಿಕೆಯಿಂದಾದ ನೀತಿಗೆ ಮುದ್ರೆಯಾಗಿತ್ತು. ಹೀಗಿರುವದರಿಂದ ಅವನು ನಂಬುವವರೆಲ್ಲರಿಗೂ, ಅವರು ಸುನ್ನತಿಯಿಲ್ಲದವರಾದಾಗ್ಯೂ ಮೂಲತಂದೆಯಾದನು; ಅವರೂ ನೀತಿವಂತರೆಂದು ಎಣಿಸಲ್ಪಡುವರು.**

ಮುದ್ರೆ ಹಾಕುವುದು ಕೇವಲ ದೇವರು ಮಾಡಬಹುದಾದ ಒಂದು ಅಧಿಕೃತ ಕಾನೂನುಬದ್ಧ ಕೆಲಸ. ಉದಾಹರಣೆಗೆ, ಎಫೆಸದವರ 1, ಶ್ಲೋಕ 13ರಲ್ಲಿ ತನ್ನಿಂದ ಆಯ್ಕೆಯಾದವರಲ್ಲಿ ಒಬ್ಬರ ಮುಕ್ತಿಯನ್ನು ದೇವರು ಹೀಗೆಂದು ವರ್ಣಿಸುತ್ತಾರೆ:

**ನಿಮ್ಮ ರಕ್ಷಣೆಯ ವಿಷಯವಾದ ಸುವಾರ್ತೆಯೆಂಬ ಸತ್ಯವಾಕ್ಯವನ್ನು ಕೇಳಿ ಕ್ರಿಸ್ತನಲ್ಲಿ ನಂಬಿಕೆಯಿಟ್ಟವರಾದ ನೀವು ಸಹ ವಾಗ್ದಾನಮಾಡಲ್ಪಟ್ಟ ಪವಿತ್ರಾತ್ಮನೆಂಬ ಮುದ್ರೆಯನ್ನು ಹೊಂದಿದಿರಿ.**

ಕೇಳುವುದರಿಂದ ನಂಬಿಕೆ ಉಂಟಾಗುವುದರಿಂದ, ಅವರು ದೇವರ ಪದವನ್ನು ಕೇಳಿದರು ಎಂದು ದೇವರು ಈ ಶ್ಲೋಕದಲ್ಲಿ ಸೂಚಿಸುತ್ತಾರೆ, ಅವರು ಬೈಬಲ್ ಅನ್ನು ವಿಶ್ವಾಸ ಮಾಡಲು ಪ್ರಾರಂಭಿಸಿದರು, ಯೋನ 3:5ರಲ್ಲಿ ಹೇಳಿರುವಂತೆ, ಅವರು ನಂಬಿದರು, ಮತ್ತು ಅವರು ದೇವರಿಂದ ಆಯ್ಕೆಯಾದ ಕಾರಣ ಮತ್ತು ಆತ ಆಗಲೆ ಅವರ ಪಾಪಗಳಿಗೆ ಬೆಲೆ ತೆತ್ತ ಕಾರಣ, ದೇವರು ಅವರನ್ನು ಸಂಚಯಿತರನ್ನಾಗಿ ಮಾಡಿದ್ದಾರೆ ಎಂಬುದಕ್ಕೆ ಪುರಾವೆಯಾಗಿ ಅವರಿಗೆ ಪವಿತ್ರಾತ್ಮನನ್ನು ಕೊಟ್ಟು ದೇವರು ಅವರಿಗೆ ಮುದ್ರೆ ಹಾಕಿದರು. ಹೀಗೆ, ಮುದ್ರೆ ಹಾಕುವುದು ದೇವರು ಒಬ್ಬ ವ್ಯಕ್ತಿಗೆ ಹೊಸ ಆತ್ಮವನ್ನು ಕೊಡುವ ಕೆಲಸವೆಂದು ಗುರುತಿಸಲಾಗುವುದು ಎಂದು ದೇವರು ನಮಗೆ ಬೋಧಿಸುತ್ತಿದ್ದಾರೆ.

ಆದ್ದರಿಂದ, ರೋಮಾಪುರದವರ 4, ಶ್ಲೋಕ 11ನ್ನು ಅರ್ಥಮಾಡಿಕೊಂಡು, ಈ ಕೆಳಗಿನದ್ದನ್ನು ಬೋಧಿಸಬೇಕು:

**ಆ ಮೇಲೆ ಸುನ್ನತಿಯೆಂಬ ಸಂಸ್ಕಾರವನ್ನು**, ಅಂದರೆ ಧರ್ಮೋಪದೇಶಕಾಂಡ 30:6ರಲ್ಲಿ ಹೇಳಿರುವಂತೆ, ಮುಕ್ತಿಯಾದ ಆಧ್ಯಾತ್ಮಿಕ ಸುನ್ನತಿಯನ್ನು, **ಗುರುತಾಗಿ**, ಅಂದರೆ ಪವಾಡವಾಗಿ, **ಹೊಂದಿದನು. ಇದು ಸುನ್ನತಿಯಾಗುವದಕ್ಕೆ ಮೊದಲೇ**, ಅಂದರೆ ದೈಹಿಕ ಸುನ್ನತಿ, **ಅವನಿಗಿದ್ದ ನಂಬಿಕೆಯಿಂದಾದ**, ಅಂದರೆ ಕ್ರಿಸ್ತರಿಂದಾದ, **ನೀತಿಗೆ ಮುದ್ರೆಯಾಗಿತ್ತು**, ಅಂದರೆ ಭರವಸೆಯಾಗಿತ್ತು…..

ಈ ತಿಳುವಳಿಕೆಯಿಂದ, ಮುಕ್ತಿಯ ಬಗ್ಗೆ ಬೈಬಲ್ ಬೋಧಿಸುವ ಎಲ್ಲದರೊಂದಿಗೆ ಇದು ಸಮರಸವಾಗಿದೆ ಎಂದು ನಮಗೆ ತಿಳಿದಿದೆ.

***ವಿರಳವಾಗಿ, ಅನುವಾದಕ್ಕೆ ತಿದ್ದುಪಡಿ ಮಾಡಬೇಕು***

ಸಾಮಾನ್ಯವಾಗಿ, ಎಲ್ಲಾ ಅನುವಾದಗಳಲ್ಲಿ ಅತ್ಯಂತ ವಿಶ್ವಾಸಾರ್ಹವಾದ ಕಿಂಗ್ ಜೇಮ್ಸ್ ಬೈಬಲ್ ಅನ್ನು ಮಂಡಿಸಿರುವ ಅನುವಾದಕರು ಮೂಲ ಇಬ್ರಿಯ ಮತ್ತು ಗ್ರೀಕ್ ಭಾಷೆಗಳಿಂದ ಆಂಗ್ಲ ಭಾಷೆಗೆ ನಿಖರವಾಗಿ ಅನುವಾದ ಮಾಡಿದ್ದಾರೆ ಎಂದು ನಾವು ನಂಬಬಹುದು. ಆದರೆ, ಮೂಲ ಬೈಬಲ್ ಅನ್ನು ದೇವರ ಬಾಯಿಂದ ಬರೆದ ಲೇಖಕರಾದ ದೇವರ ಪವಿತ್ರ ಜನರು ದೇವರಿಂದ ಪ್ರೇರಣೆ ಪಡೆದಂತೆ ಅನುವಾದಕರು ದೇವರಿಂದ ಪ್ರೇರಣೆ ಪಡೆಯದಿದ್ದುದರಿಂದ ಅವರು ಕೆಲವು ತಪ್ಪುಗಳನ್ನು ಮಾಡಿರಬಹುದು. ಮುಕ್ತಿಗೆ ಸಂಬಂಧಪಟ್ಟ ಕೆಲವು ಶ್ಲೋಕಗಳನ್ನು ನಾವು ಜಾಗರೂಕತೆಯಿಂದ ಅಧ್ಯಯನ ಮಾಡಿದಾಗ, ಅವರ ಅನುವಾದಗಳಿಗೆ ನಿಜವಾಗಿಯೂ ತಿದ್ದುಪಡಿ ಮಾಡಬೇಕೆಂದು ನಾವು ಕಾಣುತ್ತೇವೆ. ಅನುವಾದಕ್ಕೆ ತಿದ್ದುಪಡಿ ಮಾಡಬೇಕು, ಮೂಲ ಇಬ್ರಿಯ ಅಥವ ಗ್ರೀಕ್‌ಗೆ ಅಲ್ಲ ಎಂಬುದನ್ನು ನೆನಪಿಟ್ಟುಕೊಳ್ಳಬೇಕು.

ಸತ್ಯವೆಂದರೆ, ಎಲ್ಲಾ ಧರ್ಮಗ್ರಂಥಗಳನ್ನು ಜಾಗರೂಕತೆಯಿಂದ ಸಮರಸಗೊಳಿಸಬೇಕೆಂಬ ನಮ್ಮ ಬಯಕೆಯಲ್ಲಿ, ಬೈಬಲ್ ಅನುವಾದದಲ್ಲಿ ಒಂದು ಬಹಳ ಗಂಭೀರ ಸಮಸ್ಯೆ ಬೆಳಕಿಗೆ ಬಂದಿದೆ. ಸಾಮಾನ್ಯವಾಗಿ, ಬೈಬಲ್ ಅನುವಾದಕರು ಹಳೆ ಒಡಂಬಡಿಕೆಯ ಮೂಲ ಇಬ್ರಿಯ ಬರವಣಿಗೆಗೆ ಮತ್ತು ಹೊಸ ಒಡಂಬಡಿಕೆಯ ಮೂಲ ಗ್ರೀಕ್ ಬರವಣಿಗೆಗೆ ಸಾಧ್ಯವಾದಷ್ಟು ನಿಷ್ಠಾವಂತರಾಗಿರಬೇಕೆಂಬ ತಮ್ಮ ಸಾಧನೆಯಲ್ಲಿ ಸಾಕಷ್ಟು ನಿಖರವಾಗಿದ್ದರು, ಇದು ವಿಶೇಷವಾಗಿ ಕಿಂಗ್ ಜೇಮ್ಸ್ ಬೈಬಲ್ ನ ಅನುವಾದಕರ ಬಗ್ಗೆ ನಿಜವಾಗಿದೆ.

ಆದರೆ, ಬೈಬಲ್ ನಲ್ಲಿರುವ ಕೆಲವು ಶ್ಲೋಕಗಳು, ಅವು ಅನುವಾದವಾಗಿರುವ ರೀತಿಯಲ್ಲಿ ಪರಿಪೂರ್ಣವಾಗಿ ಸಮರಸಗೊಂಡಿರುವಂತೆ ತೋರುತ್ತವೆ, ಆದರೆ ನಿಜಸ್ಥಿತಿಯಲ್ಲಿ, ದೇವರ ಮುಕ್ತಿಯ ಸಂದೇಶಕ್ಕೆ ಸಂಬಂಧಿಸಿದಂತೆ, ಅವು ಒಂದು ದೊಡ್ಡ ದುರಂತವನ್ನು ಸೃಷ್ಟಿಸಿವೆ. ಸಂಚಯಿತರಾಗುವುದಕ್ಕೆ ನಂಬುವುದು ಹೇಗೆ ಸಂಬಂಧಿಸಿದೆ ಎಂಬ ವಿಚಾರಕ್ಕೆ ಅವು ಸಂಬಂಧಿಸಿವೆ. ಈ ಕೆಳಗಿನ ಶ್ಲೋಕಗಳ ನಡುವೆ ಇರುವ ಸಮರಸವನ್ನು ದಯವಿಟ್ಟು ಗಮನಿಸಿ.

ಆದಿಕಾಂಡ **15:6: ಅಬ್ರಹಾಮನು ಯೆಹೋವನನ್ನು ನಂಬಿದನು; ಯೆಹೋವನು ಅವನ ನಂಬಿಕೆಯನ್ನು ಅವನ ಲೆಕ್ಕಕ್ಕೆ ನೀತಿಯೆಂದು ಎಣಿಸಿದನು.**

ರೋಮಾಪುರದವರ 4:3: **ಇದರ ವಿಷಯದಲ್ಲಿ ಶಾಸ್ತ್ರವು ಹೇಳುವದನ್ನು ಆಲೋಚಿಸಿರಿ. ಅಬ್ರಹಾಮನು ದೇವರನ್ನು ನಂಬಿದನು; ಆ ನಂಬಿಕೆಯು ಅವನ ಲೆಕ್ಕಕ್ಕೆ ನೀತಿಯೆಂದು ಎಣಿಸಲ್ಪಟ್ಟಿತ್ತು ಎಂದು ಹೇಳುತ್ತದೆ.**

ರೋಮಾಪುರದವರ 4:9: **ಈ ಶುಭವಚನವು ಸುನ್ನತಿಯಿದ್ದವರಿಗೆ ಮಾತ್ರವೋ? ಸುನ್ನತಿಯಿಲ್ಲದವರಿಗೆ ಸಹ ಆಗುತ್ತದೋ? ನೋಡೋಣ. ಅಬ್ರಹಾಮನ ಲೆಕ್ಕಕ್ಕೆ ಅವನ ನಂಬಿಕೆಯೇ ನೀತಿಯೆಂದು ಎಣಿಸಲ್ಪಟ್ಟಿತೆಂಬದಾಗಿ ಹೇಳುತ್ತೇವಲ್ಲಾ.**

ಗಲಾತ್ಯದವರ 3:6: **ಅಬ್ರಹಾಮನು ದೇವರನ್ನು ನಂಬಿದನು, ಆ ನಂಬಿಕೆ ಅವನ ಲೆಕ್ಕಕ್ಕೆ ನೀತಿಯೆಂದು ಎಣಿಸಲ್ಪಟ್ಟಿತು ಎಂಬದಾಗಿ ಬರೆದದೆಯಲ್ಲಾ.**

ನಮಗೆ ಕಾಣುವಂತೆ, ಒಬ್ಬ ವ್ಯಕ್ತಿ ಯೇಸುವನ್ನು ತನ್ನ ರಕ್ಷಕನನ್ನಾಗಿ ನಂಬುವುದರ ಫಲವಾಗಿ ಅವನಿಗೆ ಮುಕ್ತಿ ಬರುತ್ತದೆಂದು ಈ ಶ್ಲೋಕಗಳು ನಿರ್ಣಾಯಕವಾಗಿ ಬೋಧಿಸುತ್ತವೆ, ಮತ್ತು ಆ ತೀರ್ಮಾನ, ವಾಸ್ತವಿಕವಾಗಿ ಪ್ರತಿಯೊಂದು ಕ್ರೈಸ್ತದೇವಾಲಯದಲ್ಲಿ ಮತ್ತು ಪಂಥದಲ್ಲಿ ದೇವರ ಮುಕ್ತಿಯ ಕಾರ್ಯಕ್ರಮವೆಂದು ಬೋಧಿಸಲ್ಪಡುವ ಸಿದ್ಧಾಂತದ ಅಡಿಗಲ್ಲಾಗಿದೆ.

*ಯಾವುದೇ ಸಮಯದಲ್ಲಿ, ಕ್ರಿಸ್ತರನ್ನು ನಂಬಬೇಕೆಂಬ ಆಜ್ಞೆಯೂ ಸೇರಿದಂತೆ, ಬೈಬಲ್ ನ ಯಾವುದೇ ಆಜ್ಞೆಗೆ ನಾವು ವಿಧೇಯರಾಗಿರುವಾಗ, ಅದು ನಾವು ಮಾಡುವ ಒಂದು ಕೆಲಸ.*

ಆದರೆ, ಆ ತೀರ್ಮಾನ ಒಂದು ಅಸಾಧ್ಯವಾದ ತೀರ್ಮಾನ. ಕ್ರಿಸ್ತರನ್ನು ನಂಬುವುದು ನಾವು ಮಾಡುವ ಒಂದು ಕೆಲಸ. ಯಾವುದೇ ಸಮಯದಲ್ಲಿ, ಕ್ರಿಸ್ತರನ್ನು ನಂಬಬೇಕೆಂಬ ಆಜ್ಞೆಯೂ ಸೇರಿದಂತೆ, ಬೈಬಲ್ ನ ಯಾವುದೇ ಆಜ್ಞೆಗೆ ನಾವು ವಿಧೇಯರಾಗಿರುವಾಗ, ಅದು ನಾವು ಮಾಡುವ ಒಂದು ಕೆಲಸ. ನಾವು ಕಲಿತಿರುವಂತೆ, ಒಬ್ಬ ವ್ಯಕ್ತಿಯನ್ನು ಸಂಚಯಿತನನ್ನಾಗಿ ಮಾಡಲು ಎಲ್ಲಾ ಕೆಲಸವನ್ನು ಕ್ರಿಸ್ತರು ಮಾಡಿದರು. ಆದ್ದರಿಂದ, ಮುಕ್ತಿಯನ್ನು ಪಡೆಯಲು ಯಾವುದೇ ರೀತಿಯಲ್ಲಿ ಆರಂಭಿಸಲು ಅಥವ ಸಹಾಯಕವಾಗಲು ನಾವು ಮಾಡಬಲ್ಲ ಯಾವ ಕೆಲಸವೂ ಇಲ್ಲ. ನಂಬುವುದು ಎಂದರೆ ವಿಶ್ವಾಸ ಮಾಡುವುದು, ಮತ್ತು ವಿಶ್ವಾಸ ಮಾಡುವುದು ಒಂದು ಕೆಲಸ ಎಂದು ಬೈಬಲ್ ಸ್ಪಷ್ಟವಾಗಿ ಹೇಳುತ್ತದೆ.

ಒಂದನೆ ಥೆಸಲೋನಿಕದವರ 1, ಶ್ಲೋಕ 3ರಲ್ಲಿ ನಾವು ಹೀಗೆಂದು ಓದುತ್ತೇವೆ:

**ನಾವು <u>ನಂಬಿಕೆಯ ಫಲವಾದ ನಿಮ್ಮ ಕೆಲಸವನ್ನೂ</u> ಪ್ರೀತಿಪೂರ್ವಕವಾದ ನಿಮ್ಮ ಪ್ರಯಾಸವನ್ನೂ ನಮ್ಮ ಕರ್ತನಾದ ಯೇಸು ಕ್ರಿಸ್ತನ ಮೇಲಣ ನಿರೀಕ್ಷೆಯಿಂದುಂಟಾದ ನಿಮ್ಮ**

**ಸ್ಮರಣೆಯನ್ನೂ ನಮ್ಮ ತಂದೆಯಾದ ದೇವರ ಮುಂದೆ ಎಡಬಿಡದೆ ಜ್ಞಾಪಕಮಾಡಿಕೊಂಡು. . .**

ಮತ್ತು ಎರಡನೆ ಥೆಸಲೋನಿಕದವರ 1, ಶ್ಲೋಕ 11ರಲ್ಲಿ ನಾವು ಹೀಗೆಂದು ಓದುತ್ತೇವೆ:

**ಆ ದಿನವನ್ನು ನಾವು ಎದುರುನೋಡುತ್ತಾ ನಿಮಗೋಸ್ಕರ ಯಾವಾಗಲೂ ಪ್ರಾರ್ಥನೆಮಾಡಿ - ನಮ್ಮ ದೇವರು ನಿಮ್ಮನ್ನು ಕರೆದದ್ದಕ್ಕೆ ತಾನೇ ನಿಮ್ಮನ್ನು ಯೋಗ್ಯರೆಂದು ಎಣಿಸಬೇಕೆಂತಲೂ ಸತ್ಕ್ರಿಯೆಗಳಲ್ಲಿ ಸಂತೋಷಿಸುವ ನಿಮ್ಮ ಸಕಲ ಆಲೋಚನೆಯನ್ನೂ ನಂಬಿಕೆಯ ಫಲವಾದ ನಿಮ್ಮ ಕೆಲಸವನ್ನೂ ಶಕ್ತಿಪೂರ್ವಕವಾಗಿ ಸಿದ್ಧಿಗೆ ತರಬೇಕೆಂತಲೂ ಬೇಡಿಕೊಳ್ಳುತ್ತೇವೆ.**

*ಕೇವಲ ಕ್ರಿಸ್ತರನ್ನು ನಂಬುವುದರಿಂದ ಮುಕ್ತಿ ಫಲಿಸುತ್ತದೆ ಎಂಬ ತೀರ್ಮಾನ ಸಂಪೂರ್ಣವಾಗಿ ಅಸಾಧ್ಯವಾದುದು.*

ಹೀಗೆ, ಕೇವಲ ಕ್ರಿಸ್ತರನ್ನು ನಂಬುವುದರಿಂದ ಮುಕ್ತಿ ಫಲಿಸುತ್ತದೆ ಎಂಬ ತೀರ್ಮಾನ ಸಂಪೂರ್ಣವಾಗಿ ಅಸಾಧ್ಯವಾದುದು. ದುರದೃಷ್ಟವಶಾತ್, ಅರಣ್ಯಕಾಂಡ 15ರಲ್ಲಿ ಸಬ್ಬತ್ ದಿನದಂದು ಕೆಲವು ಕಟ್ಟಿಗೆಗಳನ್ನು ಒಟ್ಟುಮಾಡಿ, ಆ ಕಾರಣದಿಂದಾಗಿ ದೇವರ ಆದೇಶದ ಪ್ರಕಾರ, ಕಲ್ಲೆಸೆದು ಮರಣ ದಂಡನೆಗೆ ಗುರಿಯಾದ ವ್ಯಕ್ತಿಯ ಕೆಲಸಕ್ಕೆ ಸಮಾನವಾದ, ಒಂದು ಮುಕ್ತಿಯ ಯೋಜನೆಯನ್ನು ನಂಬುವುದು ಹೇಗಾದರೂ ನಮ್ಮ ಮುಕ್ತಿಗೆ ಸಹಾಯಕವಾಗುತ್ತದೆ ಎಂಬ ಬೋಧನೆ ಮಂಡಿಸುತ್ತದೆ. ಯಾವುದೇ ರೀತಿಯ ಯಾವುದೇ ಕೆಲಸವನ್ನು ಮಾಡಬಾರದಂತಹ ಏಳನೆ ದಿನದ ಸಬ್ಬತ್, ನಾವು ಸಂರಕ್ಷಿತರಾಗುವುದಕ್ಕೆ ನಾವು ಮಾಡುವ ಯಾವುದಾದರು ಕೆಲಸ ಯಾವುದೊ ರೀತಿಯಲ್ಲಿ ಸಹಾಯಕವಾಗಬಹುದು ಎಂದು ಒಂದು ಕ್ಷಣಕ್ಕೂ ನಾವು ಎಣಿಸಬಾರದು ಎಂಬ ತತ್ವದ ಚಿತ್ರಣವಾಗಿದೆ.

ವಾಸ್ತವಿಕವಾಗಿ ಪ್ರತಿಯೊಂದು ಕ್ರೈಸ್ತದೇವಾಲಯದಲ್ಲಿ ಬೆಳೆದಿರುವ ದೊಡ್ಡ ದುರಂತವನ್ನು ನಾವು ಕೂಡಲೆ ನೋಡುತ್ತೇವೆ. ಕ್ರಿಸ್ತರನ್ನು ನಂಬಲು ಪ್ರಾರಂಭಿಸಿದ ಕಾರಣ ತಾನು ಸಂರಕ್ಷಿತನಾಗಿರುವುದಾಗಿ ಆಲೋಚಿಸುವ ಪ್ರತಿಯೊಬ್ಬ ವ್ಯಕ್ತಿಯನ್ನು ಸಬ್ಬತ್ ದಿನದಂದು ಕಟ್ಟಿಗೆ ಒಟ್ಟು ಮಾಡಿದ ಮನುಷ್ಯನೊಂದಿಗೆ ಅದೇ ಸ್ಥಳದಲ್ಲಿ ಇರಿಸುವ ಒಂದು ಮುಕ್ತಿಯ ಯೋಜನೆಯನ್ನು ಅವರು ಬೋಧಿಸುತ್ತಾರೆ. ಆ ವ್ಯಕ್ತಿ ಇನ್ನೂ ದೇವರ ಕಡುಕೋಪಕ್ಕೆ ಪಾತ್ರನಾಗಿದ್ದಾನೆ. ಎಂತಹ ಭಯಂಕರ ಪರಿಸ್ಥಿತಿ ಉಂಟಾಗಿದೆ!

ಹಾಗಾದರೆ, ಈ ಶ್ಲೋಕಗಳನ್ನು ಹೇಗೆ ಅನುವಾದ ಮಾಡಬೇಕಿತ್ತು? ನಂಬುವುದು ಒಂದು ಕೆಲಸ ಎಂಬ ಸತ್ಯವನ್ನು ಮನಸ್ಸಿನಲ್ಲಿಟ್ಟುಕೊಂಡು ಪ್ರತಿಯೊಂದು ಶ್ಲೋಕವನ್ನು ನಾವು ನೋಡೋಣ.

***ಅಬ್ರಹಾಮನು ದೇವರನ್ನು ನಂಬಿದ್ದನೇ ಮತ್ತು ಅದರಿಂದಾಗಿ ಸಂಚಯಿತನಾದನೆ?***

ಮೊದಲು ನಾವು ಆದಿಕಾಂಡ 15, ಶ್ಲೋಕ 6ನ್ನು ನೋಡೋಣ. ಕಿಂಗ್ ಜೇಮ್ಸ್ ಬೈಬಲ್ ನಲ್ಲಿ ಅನುವಾದ ಈ ರೀತಿ ಇದೆ:

**ಅಬ್ರಾಮನು ಯೆಹೋವನನ್ನು ನಂಬಿದನು; ಯೆಹೋವನು ಅವನ ನಂಬಿಕೆಯನ್ನು ಅವನ ಲೆಕ್ಕಕ್ಕೆ ನೀತಿಯೆಂದು ಎಣಿಸಿದನು.**

ಅಬ್ರಹಾಮನ ನಂಬಿಕೆಯು ಅವನ ಲೆಕ್ಕಕ್ಕೆ ನೀತಿ ಎಂದು ಪರಿಗಣಿಸಲಾಯಿತು, ಅಂದರೆ, ಅವನು ನಂಬಿದ್ದರಿಂದ, ದೇವರು ಅವನನ್ನು ಸಂಚಯಿತನನ್ನಾಗಿ ಮಾಡಿದರು ಎಂದು ನಮಗೆ ಈ ಶ್ಲೋಕ ಭರವಸೆ ನೀಡುತ್ತಿರುವಂತೆ ತೋರುತ್ತದೆ.

*ನಂಬುವುದು ನಾವು ಮಾಡುವ ಒಂದು ಕೆಲಸ ಮತ್ತು ನಮ್ಮ ಕೆಲಸ ಎಂದೂ ನಮ್ಮ ಮುಕ್ತಿಯ ಭಾಗವಾಗಲಾರದು.*

ಆದರೆ, ನಾವು ಕಲಿತಿರುವಂತೆ, ಆ ತೀರ್ಮಾನ ಅಸಾಧ್ಯ ಏಕೆಂದರೆ, ನಂಬುವುದು ನಾವು ಮಾಡುವ ಒಂದು ಕೆಲಸ ಮತ್ತು ನಮ್ಮ ಕೆಲಸ ಎಂದೂ ನಮ್ಮ ಮುಕ್ತಿಯ ಭಾಗವಾಗಲಾರದು. ಈ ಶ್ಲೋಕವನ್ನು ನಾವು ಕಾಣುವ ಸಂದರ್ಭ ನಮಗೆ ಹೇಳುವುದೇನೆಂದರೆ, ಅಬ್ರಹಾಮನ ನಂಬಿಕೆ ಸಂಚಯಿತನಾದ ಒಬ್ಬ ವ್ಯಕ್ತಿಯ ನಂಬಿಕೆಯಾಗಿತ್ತು. ದೇವರು ನಮ್ಮನ್ನು ರಕ್ಷಿಸಿದಾಗ, ನಾವು ಒಳ್ಳೆಯ ಕೆಲಸಗಳನ್ನು ಮಾಡುತ್ತೇವೆ, ಆದರೆ, ನಂಬಿಕೆಯೂ ಸೇರಿದಂತೆ, ಈ ಒಳ್ಳೆಯ ಕೆಲಸಗಳು ಯಾವುದೇ ರೀತಿಯಲ್ಲಿ ನಾವು ಸಂಚಯಿತರಾಗಲು ನಮಗೆ ಸಹಾಯಕವಾಗಿಲ್ಲ ಎಂಬುದನ್ನು ನಾವು ನೆನಪಿನಲ್ಲಿಟ್ಟುಕೊಳ್ಳಬೇಕು. ಅವು ಯಾವಾಗಲೂ ನಾವು ಸಂಚಯಿತರಾಗಿರುವ ಪರಿಣಾಮವಾಗಿವೆ.

ಇಬ್ರಿಯದಲ್ಲಿ, “ಮತ್ತು” ಎಂಬ ಸಂಬಂಧಾವ್ಯಯ “ಏಕೆಂದರೆ” ಎಂದೂ ಕೆಲವೊಮ್ಮೆ ಅನುವಾದಿಸಲಾಗುತ್ತದೆ ಎಂಬ ಸತ್ಯದ ಅರಿವು ನಮಗಿರಬೇಕು. ಆದ್ದರಿಂದ, ಈ ಶ್ಲೋಕದಲ್ಲಿ, “ಮತ್ತು” ಎಂಬ ಸಂಬಂಧಾವ್ಯಯ “ಏಕೆಂದರೆ” ಎಂದು ಅನುವಾದವಾಗಬೇಕಿತ್ತು.

ಎರಡನೆಯ ಸಮಸ್ಯೆ "ಅದು" ಎಂಬ ಸರ್ವನಾಮವನ್ನು ಅರ್ಥಮಾಡಿಕೊಳ್ಳುವುದರಲ್ಲಿದೆ. "ಅದು" ಎಂಬ ಸರ್ವನಾಮ ಸರಿಯಾಗಿ ಅನುವಾದವಾಗಿದೆ ಆದರೆ, ಅದು ಯಾವ ನಾಮಪದವನ್ನು ಉಲ್ಲೇಖಿಸುತ್ತದೆ? "ಅದು" ಎಂಬ ಸರ್ವನಾಮ ಅಬ್ರಹಾಮನ ನಂಬಿಕೆಯನ್ನು ಉಲ್ಲೇಖಿಸುತ್ತದೆಯೆ? ಅಸಾಧ್ಯ, ಎರಡು ದೊಡ್ಡ ಕಾರಣಗಳಿಗೆ. ಮೊದಲನೆಯದು, ಅಬ್ರಹಾಮನ ಸಂಬಿಕೆ ಎಂದೂ ಅವನ ನೀತಿಗೆ ಲೆಕ್ಕಕ್ಕೆ ತೆಗೆದುಕೊಳ್ಳಲಾಗದು.

ಎರಡನೆಯ ದೊಡ್ಡ ಕಾರಣವೆಂದರೆ, ಈ ಸಂದರ್ಭದಲ್ಲಿ, "ಅದು" ಎಂಬ ಸರ್ವನಾಮ ವ್ಯಾಕರಣಾನುಸಾರವಾಗಿ, ಏಕವಚನ ಸ್ತ್ರೀಲಿಂಗ ಶಬ್ದವಾಗಿದೆ. ಅಂದರೆ, ವ್ಯಾಕರಣಾನುಸಾರ, ಸ್ತ್ರೀಲಿಂಗವನ್ನು ಸೂಚಿಸುವ ನಾಮಪದವನ್ನು ಉಲ್ಲೇಖಿಸಬೇಕು. "ನಂಬಿಕೆ" ಎಂಬ ನಾಮಪದ ಪುಲ್ಲಿಂಗ ನಾಮಪದವಾಗಿದೆ. ಆದ್ದರಿಂದ, ವ್ಯಾಕರಣಾನುಸಾರವಾಗಿ, ಆ ಸರ್ವನಾಮ ಅಬ್ರಹಾಮನ ನಂಬಿಕೆಯನ್ನು ಉಲ್ಲೇಖಿಸಲು ಸಾಧ್ಯವಿಲ್ಲ.

ಇನ್ನೊಂದೆಡೆ, "ನೀತಿ" ಎಂಬ ಪದ ಸ್ತ್ರೀಲಿಂಗ ನಾಮಪದವಾಗಿದೆ, ಮತ್ತು ಅದು ಈ ಶ್ಲೋಕಕ್ಕೆ ಪರಿಪೂರ್ಣವಾಗಿ ಸರಿಹೊಂದುತ್ತದೆ. ಆದ್ದರಿಂದ, ನಾವು ಆದಿಕಾಂಡ 15, ಶ್ಲೋಕ 6 ಹೀಗೆ ಹೇಳುತ್ತದೆಂದು ಅರ್ಥ ಮಾಡಿಕೊಳ್ಳಬೇಕು:

**ಅಬ್ರಾಮನು ಯೆಹೋವನನ್ನು ನಂಬಿದನು;** ಏಕೆಂದರೆ **ಯೆಹೋವನು ಅವನ ನಂಬಿಕೆಯನ್ನು,** ಅಂದರೆ ದೇವರ ನೀತಿಯನ್ನು, **ಅವನ,** ಅಂದರೆ ಅಬ್ರಹಾಮನ, **ಲೆಕ್ಕಕ್ಕೆ ನೀತಿಯೆಂದು,** ಅಂದರೆ ಅಬ್ರಹಾಮನ ಮುಕ್ತಿಯೆಂದು, **ಎಣಿಸಿದನು.**

ಹಾಗೆಯೆ, ರೋಮಾಪುರದವರ 4:3, ಗಲಾತ್ಯದವರ 3:6 ಮತ್ತು ಯಾಕೋಬನು 2:23ರಲ್ಲಿ, ಕಿಂಗ್ ಜೇಮ್ಸ್‌ನ ಅನುವಾದ **"ಅಬ್ರಹಾಮನು ದೇವರನ್ನು ನಂಬಿದನು; ಆ ನಂಬಿಕೆ ಅವನ ಲೆಕ್ಕಕ್ಕೆ ನೀತಿ ಎಂದು ಎಣಿಸಲ್ಪಟ್ಟಿತು"** ಎಂಬುದಾಗಿದೆ. ಅನುವಾದದಲ್ಲಿ, ದೇವರು ಅವನನ್ನು ಸಂಚಯಿತನನ್ನಾಗಿ ಮಾಡುವುದಕ್ಕೆ ಅಬ್ರಹಾಮನ ನಂಬಿಕೆ ಒಂದು ಕಾರಣ ಅಥವ ಸಾಧನವಾಗಿತ್ತು ಎಂದು ಈ ಶ್ಲೋಕಗಳು ಬೋಧಿಸುತ್ತಿರುವಂತಿದೆ. ಆದರೆ, ನಾವು ಪದೇ ಪದೇ ಹೇಳಿರುವಂತೆ, ಅದು ಅಸಾಧ್ಯ. ಆದ್ದರಿಂದ, ಈ ಶ್ಲೋಕಗಳು ಸರಿಯಾಗಿ ಅನುವಾದವಾಗಿವೆ ಎಂಬುದನ್ನು ಖಚಿತಪಡಿಸಿಕೊಳ್ಳಬೇಕು.

ಹೀಗೆ, ಸಂಚಯಿತರನ್ನಾಗಿ ಮಾಡಲು ಎಲ್ಲಾ ಕೆಲಸವನ್ನು ದೇವರು ಮಾಡಿದರು ಎಂಬ ಬೈಬಲ್ ನ ತತ್ವಕ್ಕೆ ಸಮರಸವಾಗಿರುವಂತೆ ಈ ಶ್ಲೋಕದಲ್ಲಿರುವ ಎರಡು ಶಬ್ದಗಳ

ಅನುವಾದಕ್ಕೆ ತಿದ್ದುಪಡಿಮಾಡಬೇಕಾಗಿದೆ. ಪುನಃ, ಬದಲಾಯಿಸಬೇಕಾದ ಮೊದಲ ಶಬ್ದ ಸಂಬಂಧಾವ್ಯಯವಾದ "ಮತ್ತು". ಅದನ್ನು "ಏಕೆಂದರೆ" ಎಂಬ ಪದಕ್ಕೆ ಅನುವಾದ ಮಾಡಬೇಕು. ಇಬ್ರಿಯ ಭಾಷೆಯಂತೆಯೆ, ಗ್ರೀಕ್ ಭಾಷೆಯಲ್ಲಿಯೂ "ಮತ್ತು" ಎಂಬ ಪದವನ್ನು ಕೆಲವೊಮ್ಮೆ "ಏಕೆಂದರೆ" ಎಂಬ ಪದಕ್ಕೆ ಅನುವಾದ ಮಾಡಲಾಗುತ್ತದೆ.

ತಿದ್ದುಪಡಿ ಮಾಡಬೇಕಾದ ಎರಡನೆಯ ಪದ "ಅದು" ಎಂದು ಅನುವಾದ ಮಾಡಲಾಗಿರುವ ಸರ್ವನಾಮ. ವ್ಯಾಕರಣಾನುಸಾರ, ಅದು ಪ್ರಥಮ ಪುರುಷ, ಏಕವಚನದಲ್ಲಿದೆ. ಈ ಸಂದರ್ಭದಲ್ಲಿ, "ಅದು" ಎಂಬುದು "ಆತ" ಎಂಬ ಸರ್ವನಾಮಕ್ಕೆ ಅನುವಾದವಾಗಬೇಕಿತ್ತು. ಹೀಗೆ, ಪುನಃ ಹೇಳುವುದಾದರೆ, ರೋಮಾಪುರದವರ 4:3, ಗಲಾತ್ಯದವರ 3:6, ಮತ್ತು ಯಕೋಬನು 2:23 ಹೀಗೆ ಅನುವಾದವಾಗಬೇಕು, "ಅಬ್ರಹಾಮನು ದೇವರನ್ನು ನಂಬಿದನು, ಅಂದರೆ ಅವನು ಸಂಚಯಿತನಾದನು; ಆ ನಂಬಿಕೆ, ಅಂದರೆ ಆತ ಅಥವ ದೇವರು, ಅವನ ಲೆಕ್ಕಕ್ಕೆ ನೀತಿ, ಅಂದರೆ ಅಬ್ರಹಾಮನ ಮುಕ್ತಿ,ಎಂದು ಎಣಿಸಲ್ಪಟ್ಟಿತು"

***ನಾವು ಕ್ರಿಸ್ತರನ್ನು ನಂಬಿದಾಗ, ಆತ ನಮ್ಮನ್ನು ಸಂಚಯಿತರನ್ನಾಗಿ ಮಾಡಬಹುದು***

ನಮ್ಮ ರಕ್ಷಕರಾದ ಯೇಸು ನಮ್ಮನ್ನು ಸಂಚಯಿತರನ್ನಾಗಿ ಮಾಡುವ ಎಲ್ಲಾ ಕೆಲಸವನ್ನು ಮಾಡಿದರು ಎಂದು ನಾವು ಈಗ ಕಲಿತಿದ್ದೇವೆ, ಆದ್ದರಿಂದ, ಯಾವುದೇ ಸಂದರ್ಭದಲ್ಲಿ, ನಾವು ಮಾಡುವ ಯಾವುದೇ ಕೆಲಸ ನಮ್ಮ ಮುಕ್ತಿಗೆ ಸ್ವಲ್ಪವಾದರು ಕೊಡುಗೆ ನೀಡಬಹುದು ಎಂದು ನಾವು ನಂಬಬಾರದು, ಇದಕ್ಕೆ ವಿರುದ್ಧವಾಗಿ ಬೋಧಿಸುವಂತೆ ತೋರುವ ಕೆಲವು ಶ್ಲೋಕಗಳನ್ನು ನಾವು ಹೆಚ್ಚು ಉತ್ತಮವಾಗಿ ಅರ್ಥಮಾಡಿಕೊಳ್ಳಬಹುದು.

ಉದಾಹರಣೆಗೆ, ಗಲಾತ್ಯದವರ 2, ಶ್ಲೋಕ 16ರಲ್ಲಿ ದೇವರು ಹೀಗೆಂದು ಘೋಷಿಸುತ್ತಾರೆ:

**ಆದರೂ ಯಾವನಾದರೂ ಯೇಸು ಕ್ರಿಸ್ತನ ಮೇಲಣ ನಂಬಿಕೆಯಿಂದಲೇ ಹೊರತು ನೇಮನಿಷ್ಠೆಗಳನ್ನನುಸರಿಸಿ ನೀತಿವಂತನೆಂದು ನಿರ್ಣಯಿಸಲ್ಪಡುವದಿಲ್ಲವೆಂಬದು ನಮಗೆ ತಿಳಿದಿರುವದರಿಂದ ನಾವು ಸಹ ನೇಮ ನಿಷ್ಠೆಗಳನ್ನು ಬಿಟ್ಟು ಕ್ರಿಸ್ತನ ಮೇಲಣ ನಂಬಿಕೆಯಿಂದಲೇ ನೀತಿವಂತರೆಂದು ನಿರ್ಣಯಿಸಲ್ಪಡುವದಕ್ಕಾಗಿ ಕ್ರಿಸ್ತ ಯೇಸುವಿನಲ್ಲಿ ನಂಬಿಕೆಯಿಟ್ಟೆವು; ಯಾಕಂದರೆ ಯಾವನಾದರೂ ನೇಮನಿಷ್ಠೆಗಳನ್ನನುಸರಿಸಿ ನೀತಿವಂತನೆಂದು ನಿರ್ಣಯಿಸಲ್ಪಡುವದಿಲ್ಲ.**

ಶ್ಲೋಕದ ಮೊದಲ ಭಾಗ ಸ್ಪಷ್ಟವಾಗಿದೆ. ಬೈಬಲ್ ನ ಯಾವುದೇ ಆಜ್ಞೆಗಳಿಗೆ ವಿಧೇಯರಾಗಿರುವುದರಿಂದ, ಅಂದರೆ ನಿಯಮಗಳನ್ನು ಪಾಲಿಸುವುದರಿಂದ, ನಾವು ಸಂಚಯಿತರಾಗುವುದಿಲ್ಲ, ಆದರೆ ನಂಬಿಕೆಯಿಂದ, ಅಂದರೆ ನಂಬಿಕೆಯ ಕೆಲಸ

ಮಾಡುವುದರಿಂದ, ಆತನಿಂದ ಆಯ್ಕೆಯಾದವರನ್ನು ಸಂಚಯಿತರನ್ನಾಗಿ ಮಾಡಲು ಯೇಸು ಮಾಡಿದ ಕೆಲಸದಿಂದ ನಾವು ಸಂಚಯಿತರಾಗುತ್ತೇವೆ.

ಆದರೆ, ಶ್ಲೋಕದ ಎರಡನೆಯ ಭಾಗವನ್ನು ಸುಲಭವಾಗಿ ಅಪಾರ್ಥಮಾಡಿಕೊಳ್ಳಬಹುದು. ನಾವು ಕ್ರಿಸ್ತರನ್ನು ನಂಬಿದ್ದರೆ ದೇವರು ನಮ್ಮನ್ನು ಸಮರ್ಥಿಸುತ್ತಾರೆ, ಅಂದರೆ ನಮ್ಮನ್ನು ಸಂಚಯಿತರನ್ನಾಗಿ ಮಾಡುತ್ತಾರೆ ಎಂದು ಬೋಧಿಸುವಂತೆ ಕಾಣುತ್ತದೆ. ಶ್ಲೋಕದ ಕೊನೆಯ ಭಾಗದಲ್ಲಿ **"ಯಾಕಂದರೆ ಯಾವನಾದರೂ ನೇಮನಿಷ್ಠೆಗಳನ್ನನುಸರಿಸಿ ನೀತಿವಂತನೆಂದು ನಿರ್ಣಯಿಸಲ್ಪಡುವದಿಲ್ಲ"** ಎಂದು ದೇವರು ಪುನರುಚ್ಚರಿಸಿದರೂ ಅಪಾರ್ಥಮಾಡಿಕೊಳ್ಳುವುದು ಸಾಧ್ಯವಿದೆ. ಮತ್ತು ನಂಬಿಕೆ ನಿಯಮದ ಒಂದು ಕೆಲಸ.

ನಂಬಿಕೆ ನಿಯಮದ ಕೆಲಸವಾದರೆ, **"ಕ್ರಿಸ್ತನ ಮೇಲಣ ನಂಬಿಕೆಯಿಂದಲೇ ನೀತಿವಂತರೆಂದು ನಿರ್ಣಯಿಸಲ್ಪಡುವದಕ್ಕಾಗಿ"** ಎಂಬುದನ್ನು ನಾವು ಹೇಗೆ ಅರ್ಥಮಾಡಿಕೊಳ್ಳಬೇಕು? ಗ್ರೀಕ್ ವ್ಯಾಕರಣದ ಪ್ರಕಾರ, "ನಿರ್ಣಯಿಸಲ್ಪಡುವದಕ್ಕಾಗಿ" ಎಂಬ ಪದ ಸಂಭಾವನಾ ರೂಪ ಕರ್ಮಣಿ ಪ್ರಯೋಗದಲ್ಲಿದೆ. ಗ್ರೀಕ್ ಭಾಷೆಯಲ್ಲಿ, ಸಂಭಾವನಾ ರೂಪದಲ್ಲಿರುವ ಕ್ರಿಯಾಪದವನ್ನು ಆಂಗ್ಲ ಭಾಷೆಯಲ್ಲಿರುವಂತೆಯೆ ಬಳಸಬಹುದು. ಅದು ಬಹುಶಃ ನಡೆಯುತ್ತದೆ ಎಂಬ ಉದ್ದೇಶದ ಹೆಚ್ಚಿನ ಸಾಧ್ಯತೆಗಳನ್ನು ಸೂಚಿಸುತ್ತದೆ. ಬೈಬಲ್ ನ ಗ್ರೀಕ್ ಭಾಷೆಯಲ್ಲಿ ಅನೇಕ ಸಂಭಾವನಾ ರೂಪದ ಕ್ರಿಯಾಪದಗಳು ಈ ರೀತಿಯಲ್ಲಿ ಬಳಸಲ್ಪಟ್ಟಿವೆ.

ಆದರೆ, ಗ್ರೀಕ್ ಭಾಷೆಯಲ್ಲಿ, ಉದ್ದೇಶವನ್ನು ಅಥವ ಆಜ್ಞೆಯನ್ನು ಸೂಚಿಸಲು ಕೂಡ ಅವುಗಳನ್ನು ಬಳಸಲಾಗುತ್ತದೆ. ಉದಾಹರಣೆಗೆ, ಹಳೆ ಒಡಂಬಡಿಕೆಯ ಭವಿಷ್ಯನುಡಿಯನ್ನು ಈಡೇರಿಸಲಾಗಿದೆ ಎಂದು ಸೂಚಿಸುವುದಕ್ಕೆ ಈ ರೀತಿಯ ಕ್ರಿಯಾಪದವನ್ನು ಸಾಮಾನ್ಯವಾಗಿ ಹೊಸ ಒಡಂಬಡಿಕೆಯಲ್ಲಿ ಬಳಸಲಾಗಿದೆ. ಹೀಗೆ, ಧರ್ಮಗ್ರಂಥಗಳು **"ನೆರವೇರಬಹುದು"** ಎಂದು ಮತ್ತಾಯ 4:14, 8:17, 12:17ಗಳಲ್ಲಿ ನಾವು ಓದುತ್ತೇವೆ. **"ನೆರವೇರಬಹುದು"** ಎಂಬುದು ಸಂಭಾವನಾ ರೂಪದಲ್ಲಿರುವ ಕ್ರಿಯಾಪದ. ಇಂತಹ ಸಂದರ್ಭಗಳಲ್ಲಿ, ಸಂಭಾವನಾ ರೂಪದ ಕ್ರಿಯಾಪದದ ಬಳಕೆಯಿಂದ ಯಾವುದೇ ಸಂದೇಹ ಅಥವ ಅನಿಶ್ಚಿತತೆಯ ಸೂಚನೆ ಇಲ್ಲ. ಭವಿಷ್ಯನುಡಿಯನ್ನು ನೆರವೇರಿಸಲಾಗಿದೆ.

ಗಲಾತ್ಯದವರಿಗೆ 2:16ಕ್ಕೆ ನಾವು ಹಿಂದಿರುಗಿದಾಗ, ನಂಬಿಕೆ ನಾವು ಮಾಡುವ ಕೆಲಸವಾದರೂ, ನಮ್ಮ ನಂಬಿಕೆ ನಮ್ಮ ಮುಕ್ತಿಯನ್ನು ಖಚಿತಪಡಿಸುವುದಿಲ್ಲ ಎಂದು ನಮಗೆ ತಿಳಿದಿದೆ. ಸಂಚಯಿತರಾಗಲು, ಪ್ರಾರ್ಥಿಸಲು, ಪಶ್ಚಾತ್ತಾಪ ಪಡಲು, ಇತ್ಯಾದಿಗಳನ್ನು ಮಾಡಲು

ಬೈಬಲ್ ನ ಆಜ್ಞೆಗಳಿಗೆ ವಿಧೇಯರಾಗಿರಲು ಪ್ರಯತ್ನಿಸುವಂತೆ ನಮ್ಮ ನಂಬಿಕೆ ಮಾಡಬಹುದು, ಆದರೆ, ನಮ್ಮ ಮುಕ್ತಿ ಸಂಪೂರ್ಣವಾಗಿ ದೇವರನ್ನು ಮತ್ತು ಆತ ನಮ್ಮನ್ನು ಆಯ್ಕೆ ಮಾಡಿದ್ದಾರೊ ಇಲ್ಲವೊ ಮತ್ತು ನಮ್ಮ ಪಾಪಗಳಿಗೆ ಬೆಲೆ ತೆತ್ತಿದ್ದಾರೊ ಇಲ್ಲವೊ ಎಂಬುದನ್ನು ಅವಲಂಬಿಸಿದೆ.

*ನಮ್ಮ ಮುಕ್ತಿ ಸಂಪೂರ್ಣವಾಗಿ ದೇವರನ್ನು ಮತ್ತು ಆತ ನಮ್ಮನ್ನು ಆಯ್ಕೆ ಮಾಡಿದ್ದಾರೊ ಇಲ್ಲವೊ ಮತ್ತು ನಮ್ಮ ಪಾಪಗಳಿಗೆ ಬೆಲೆ ತೆತ್ತಿದ್ದಾರೊ ಇಲ್ಲವೊ ಎಂಬುದನ್ನು ಅವಲಂಬಿಸಿದೆ.*

ಆದ್ದರಿಂದ, “ನೆರವೇರಿತು” ಎಂಬ ಸಂಭಾವನಾ ರೂಪದ ಕ್ರಿಯಾಪದವನ್ನು, ಮುಕ್ತಿ ಒಂದು ಸಾಧ್ಯತೆ, ಆದರೆ ಆತನನ್ನು ನಂಬುವ ಕೆಲಸವನ್ನು ಮಾಡುವವರಿಗೆ ಅದು ಯಾವುದೇ ರೀತಿಯಲ್ಲಿ ಭರವಸೆ ನೀಡುವುದಿಲ್ಲ ಎಂದು ಅರ್ಥಮಾಡಿಕೊಳ್ಳಬೇಕು. ದೇವರು ತಮ್ಮನ್ನು 40 ದಿನಗಳಲ್ಲಿ ನಾಶಗೊಳಿಸಲಿದ್ದರು ಎಂದು ಯೋನನು 3ರ ನಿನೆವೆಯವರು ನಿಜವಾಗಿಯೂ ನಂಬಿದ್ದರು. ಆದ್ದರಿಂದ, ಯೋನನು 3:8-10ರಲ್ಲಿ ಹೇಳಿರುವ ಪಶ್ಚಾತ್ತಾಪ ಪಡಬೇಕೆಂಬ ದೈವಾಜ್ಞೆಗೆ ಅವರು ವಿಧೇಯರಾಗಿದ್ದರು. ಆದರೆ, ದೇವರು ಅವರ ಮೇಲೆ ಕರುಣೆ ತೋರಿಸುತ್ತಾರೊ ಇಲ್ಲವೊ ಎಂದು ತಮಗೆ ತಿಳಿದಿರಲಿಲ್ಲವೆಂದು ಅವರು ಸಂಪೂರ್ಣವಾಗಿ ಅರಿತುಕೊಂಡರು. ಬಹುಶಃ ದೇವರು ಅವರನ್ನು ಸಂಚಯಿತರನ್ನಾಗಿ ಮಾಡಬಹುದು. ಅವರು ನಾಶವಾಗದೆ ಸಂಚಯಿತರಾಗುವ ಸಾಧ್ಯತೆ ಇತ್ತು. ಹೀಗೆ, ನಾವು, ಸಂಚಯಿತರಾಗದ ವ್ಯಕ್ತಿಗಳಾಗಿ ದೇವರ ನಿಯಮಗಳನ್ನು ನಂಬಿದಾಗ, ದೇವರು ನಮ್ಮಲ್ಲಿ ಕೆಲವರನ್ನು ಸಂಚಯಿತರನ್ನಾಗಿ ಬಹುಶಃ ಮಾಡಬಹುದು ಎಂದು ಗಲಾತ್ಯದವರ 2:16 ನಮಗೆ ಬೋಧಿಸುತ್ತದೆ.

ಒಬ್ಬ ವ್ಯಕ್ತಿ ಸಂಚಯಿತನಾಗುವ ತನಕ ತಾನು ದೇವರಿಂದ ಆಯ್ಕೆಯಾಗಿದ್ದಾನೊ ಇಲ್ಲವೊ ಎಂದು ಯಾರೂ ತಿಳಿಯಲು ಸಾಧ್ಯವಿಲ್ಲ ಎಂಬ ಇದೇ ಸತ್ಯವನ್ನು ಯೋವೇಲನ 2:13-14ರಲ್ಲಿ ಒತ್ತಿ ಹೇಳಲಾಗಿದೆ ಎಂಬುದನ್ನು ನೆನಪಿಸಿಕೊಳ್ಳಿ:

**ನಿಮ್ಮ ಬಟ್ಟೆಗಳನ್ನಲ್ಲ, ನಿಮ್ಮ ಹೃದಯಗಳನ್ನು ಹರಿದುಕೊಂಡು ನಿಮ್ಮ ದೇವರಾದ ಯೆಹೋವನ ಕಡೆಗೆ ತಿರಿಗಿಕೊಳ್ಳಿರಿ; ಆತನು ದಯೆಯೂ ಕನಿಕರವೂ ದೀರ್ಘಶಾಂತಿಯೂ ಮಹಾಕೃಪೆಯೂ ಉಳ್ಳವನಾಗಿ ಮಾಡಬೇಕೆಂದಿದ್ದ ಕೇಡಿಗೆ ಮನಮರುಗುತ್ತಾನೆ. ಆತನು**

**ಒಂದು ವೇಳೆ ಪಶ್ಚಾತ್ತಾಪಪಟ್ಟು ಹಿಂದಿರುಗಿ ನಿಮ್ಮ ದೇವರಾದ ಯೆಹೋವನ ಧ್ಯಾನಪಾನ ನೈವೇದ್ಯಗಳಿಗೆ ಅನುಕೂಲವಾದ ಸುವರವನ್ನು ದಯಪಾಲಿಸಿ ಹೋದಾನು.**

ಮತ್ತು ಚೆಫನ್ಯನ 2:3ರಲ್ಲಿ ಕೂಡ ಇದನ್ನು ಒತ್ತಿ ಹೇಳಲಾಗಿದೆ:

**ಯೆಹೋವನ ನಿಯಮವನ್ನು ಕೈಕೊಂಡ ಲೋಕದ ದೀನರೇ, ನೀವೆಲ್ಲರೂ ಯೆಹೋವನನ್ನು ಆಶ್ರಯಿಸಿರಿ, ಸದ್ಧರ್ಮವನ್ನು ಅಭ್ಯಾಸಿಸಿರಿ, ದೈನ್ಯವನ್ನು ಹೊಂದಿಕೊಳ್ಳಿರಿ; ಯೆಹೋವನ ಸಿಟ್ಟಿನ ದಿನದಲ್ಲಿ ಒಂದು ವೇಳೆ ಮರೆಯಾಗುವಿರಿ.**

ಪ್ರಾಸಂಗಿಕವಾಗಿ, ಎರಡನೆ ಕೊರಿಂಥದವರ 2:4 ಮತ್ತು ಎರಡನೆ ಕೊರಿಂಥದವರ 11:7ಗಳಂತಹ ಭಾಗಗಳಲ್ಲಿ, ಗಲಾತ್ಯದವರ 2:16ರಲ್ಲಿರುವ **"ನೆರವೇರಿತು"** ಎಂಬ ವ್ಯಾಕರಣಾನುಸಾರವಾಗಿ, ಸಂಭಾವನಾ ರೂಪದ ಕ್ರಿಯಾಪದದಂತೆಯೆ ರೂಪಿಸಲ್ಪಟ್ಟಿರುವ ಸಂಭಾವನಾ ರೂಪ ಕ್ರಿಯಾಪದವನ್ನು ದೇವರು ಬಳಸುತ್ತಾರೆ. ಎರಡನೆ ಕೊರಿಂಥದವರ 2:4ರಲ್ಲಿ ಕ್ರಿಯಾಪದವನ್ನು **"ನಿಮಗೆ ದುಃಖವಾಗಬೇಕಂತಲ್ಲ"** ಎಂದು ಅನುವಾದಿಸಲಾಗಿದೆ ಮತ್ತು ಎರಡನೆ ಕೊರಿಂಥದವರ 11:7ರಲ್ಲಿ **"ನೀವು ಅಭಿವೃದ್ಧಿ ಹೊಂದಬೇಕೆಂದು"** ಎಂಬುದಾಗಿ ಕ್ರಿಯಾಪದವನ್ನು ಅನುವಾದಿಸಲಾಗಿದೆ. ಎರಡೂ ಶ್ಲೋಕಗಳಲ್ಲಿ, ಕ್ರಿಯಾಪದವನ್ನು ಒಂದು ಸಾಧ್ಯತೆಯನ್ನು ಸೂಚಿಸಲು ಉಪಯೋಗಿಸಲಾಗಿದೆಯೆ ಹೊರತು ನಿಶ್ಚಿತತೆಯನ್ನಲ್ಲ ಎಂದು ಸಂದರ್ಭ ಸೂಚಿಸುತ್ತದೆ.

***"ನಂಬಿಕೆ" ಎಂಬ ಪದವನ್ನು ಅರ್ಥಮಾಡಿಕೊಳ್ಳುವುದರಲ್ಲಿ ಗೊಂದಲ***

ನಾವು ಕಲಿಯುತ್ತಿರುವ ಒಂದು ದೊಡ್ಡ ಪಾಠವೆಂದರೆ, ಆತನ ಮುಕ್ತಿಯ ಕಾರ್ಯಕ್ರಮವನ್ನು ಸುಲಭವಾಗಿ ಅರ್ಥಮಾಡಿಕೊಳ್ಳುವಂತೆ ದೇವರು ವ್ಯವಸ್ಥೆ ಮಾಡಲೇ ಇಲ್ಲ ಎಂಬುದು. "ನಂಬುವುದು" ಎಂಬ ಕ್ರಿಯಾಪದವನ್ನು ಮತ್ತು "ನಂಬಿಕೆ" ಎಂಬ ನಾಮಪದವನ್ನು ದೇವರು ಅನೇಕ ಶ್ಲೋಕಗಳಲ್ಲಿ ಇಟ್ಟಿದ್ದಾರೆ, ಮತ್ತು ಧರ್ಮಗ್ರಂಥದೊಂದಿಗೆ ಧರ್ಮಗ್ರಂಥವನ್ನು ಹೋಲಿಸುವ ದೇವರ ನಿಯಮಗಳನ್ನು ಜಾಗರೂಕತೆಯಿಂದ ಅನುಸರಿಸುವುದರಿಂದ ಮತ್ತು ದೇವರಿಂದ ಜ್ಞಾನವನ್ನು ಬೇಡುವುದರಿಂದ ಮಾತ್ರ ಈ ಕಠಿಣವಾದ ಶ್ಲೋಕಗಳನ್ನು ಸಮರಸಗೊಳಿಸಲು ನಾವು ಪ್ರಾರಂಭಿಸಬಹುದು.

*ಆತನ ಮುಕ್ತಿಯ ಕಾರ್ಯಕ್ರಮವನ್ನು ಸುಲಭವಾಗಿ ಅರ್ಥಮಾಡಿಕೊಳ್ಳುವಂತೆ ದೇವರು ವ್ಯವಸ್ಥೆ ಮಾಡಲೇ ಇಲ್ಲ*

ನಂಬುವುದರ ಬಗ್ಗೆ ಇರುವ ಅನೇಕ ತತ್ವಗಳಲ್ಲಿ ವಿಶೇಷವಾಗಿ ಗಮನಾರ್ಹವಾಗಿರುವವುಗಳು ಇಂತಿವೆ:

1. "ನಂಬುವುದು" ಎಂಬ ಕ್ರಿಯಾಪದವನ್ನು ಮತ್ತು "ನಂಬಿಕೆ" ಎಂಬ ನಾಮವಾಚಕವನ್ನು ಯಾವಾಗಲು ಮಾಡಲಾಗುತ್ತಿರುವ ಕೆಲಸ ಎಂದು ಗುರುತಿಸಬೇಕು. ಇದು ಹೀಗೇಕೆಂದರೆ, ಆಯ್ಕೆಯಾದವರನ್ನು ಸಂಚಯಿತರನ್ನಾಗಿ ಮಾಡಲು ಎಲ್ಲಾ ಕೆಲಸವನ್ನು ಯೇಸು ಮಾಡಿದರು ಮತ್ತು ಪ್ರಕಟನೆ 19:11ರ ಪ್ರಕಾರ, ಆತನ ಹೆಸರು "ನಂಬಿಗಸ್ತ" ಎಂದು. ಆತ ನಂಬಿಕೆಯ ಕೆಲಸದ ತಿರುಳು.

2. ಒಬ್ಬ ವ್ಯಕ್ತಿ ಯಾವುದೇ ಮಟ್ಟಕ್ಕೆ ನಂಬಿದಾಗ, ಅವನು ನಂಬುವುದು ಅವನು ಮಾಡುತ್ತಿರುವ ಕೆಲಸ ಮತ್ತು ಅದು ಎಂದಿಗೂ ಅವನ ಮುಕ್ತಿಗೆ ಅಗತ್ಯವಿರುವ ಕೆಲಸದ ಭಾಗವಾಗಲು ಸಾಧ್ಯವಿಲ್ಲ. ಅವನು ನಂಬಿದಾಗ, ಅವನ ಆತ್ಮಸಾಕ್ಷಿ ಅವನಿಗೆ ನಂಬುವಂತೆ ಮಾಡುತ್ತಿರಬಹುದು ಅಥವ ದೇವರು ಅವನಲ್ಲಿ ಕೆಲಸ ಮಾಡುತ್ತಿರಬಹುದು. ಆದರೆ, ಯಾವುದು ಸತ್ಯ ಎಂದು ತಿಳಿದುಕೊಳ್ಳಲು ಅವನಿಗೆ ಯಾವುದೇ ಮಾರ್ಗವಿಲ್ಲ ಏಕೆಂದರೆ, ಅವನು ಸಂಚಯಿತನಾಗದೆ, ಅವನ ಹೃದಯ ಅತ್ಯಂತ ದುಷ್ಟವಾಗಿರುತ್ತದೆ ಮತ್ತು ಅವನು ಸಂಪೂರ್ಣ ಹೃದಯದಿಂದ ನಂಬಲು ಸಾಧ್ಯವಿಲ್ಲ.

3. ಒಬ್ಬ ವ್ಯಕ್ತಿ ಸಂಚಯಿತನಾದ ನಂತರ ನಂಬಿದಾಗ, ಅದೂ ಕೂಡ ಅವನು ಮಾಡುತ್ತಿರುವ ಕೆಲಸ. ಆದರೆ ಅವನು ನಂಬುವುದು ತನ್ನ ಸಂಪೂರ್ಣ ಹೃದಯದಿಂದ, ಏಕೆಂದರೆ, ದೇವರು ಅವನನ್ನು ಸಂಚಯಿತನನ್ನಾಗಿ ಮಾಡಿದ ಕ್ಷಣದಲ್ಲಿ, ಅವನಿಗೆ ಹೊಸ ಹೃದಯವನ್ನು ಕೊಟ್ಟರು. ತನ್ನ ಸಂಪೂರ್ಣ ಹೃದಯದಿಂದ ನಂಬುವುದು, ಅಂದರೆ ಸಂಚಯಿತನಾಗುವುದು. ಜಗತ್ತಿನ ಅಂತ್ಯದಲ್ಲಿ ಅವನಿಗೆ ಅವನ ಶಾಶ್ವತವಾದ ಪುನರುಜ್ಜೀವನಗೊಂಡ ಆಧ್ಯಾತ್ಮಿಕ ದೇಹವನ್ನು ಕೊಟ್ಟಾಗ, ಅವನ ಮುಕ್ತಿ ಸಂಪೂರ್ಣವಾಗುತ್ತದೆ. ಇದು ಹೀಗೇಕೆಂದರೆ, ನಮ್ಮನ್ನು ಸಂಚಯಿತರನ್ನಾಗಿ ಮಾಡಲು ಕ್ರಿಸ್ತರು ಮಾಡಿದ ಕೆಲಸ ನಮ್ಮ ಸಂಪೂರ್ಣ ವ್ಯಕ್ತಿತ್ವದ ಮುಕ್ತಿಯನ್ನು ನೆರವೇರಿಸಿತು ಮತ್ತು ಖಚಿತಪಡಿಸಿತು. ಆದ್ದರಿಂದ, ಯಾವುದೇ ವ್ಯಕ್ತಿಯ ಕೃತ್ಯಕ್ಕೆ ಅನ್ವಯಿಸುವಂತೆ "ನಂಬುವುದು" ಮತ್ತು "ನಂಬಿಕೆ" ಎಂಬ ಪದಗಳ ಬೈಬಲ್ ನ ಬಳಕೆಯನ್ನು, ನಾವು ಸಂಚಯಿತರಾಗುವುದನ್ನು ಪ್ರಾರಂಭಿಸುವುದರೊಂದಿಗೆ ಅಥವ ಸಹಾಯಕವಾಗುವುದರೊಂದಿಗೆ ಒಂದು ವಿಧಾನವಾಗಿ ಅಥವ ಮಾರ್ಗವಾಗಿ ಅಥವ ಸಾಧನೆಯಾಗಿ ಸಂಬಂಧಪಡಿಸಲು ಸಾಧ್ಯವಿಲ್ಲ.

4. ಈ ತತ್ವಗಳನ್ನು ಅನುಸರಿಸದ ಯಾವುದೇ ಮುಕ್ತಿಯ ಕಾರ್ಯಕ್ರಮವನ್ನು ಅನುಸರಿಸಲು ಪ್ರಯತ್ನಿಸುವ ವ್ಯಕ್ತಿಯನ್ನು, ಅರಣ್ಯಕಾಂಡ 15ರ ದೃಷ್ಟಾಂತದಲ್ಲಿ ಸಬ್ಬತ್ ದಿನದಂದು ಕಟ್ಟಿಗೆ ಒಟ್ಟು ಮಾಡಿದ ವ್ಯಕ್ತಿಯ ಸ್ಥಾನದಲ್ಲಿಯೆ ಆ ಕಾರ್ಯಕ್ರಮ ಇರಿಸುವುದರಲ್ಲಿ ಪರಿಣಮಿಸುತ್ತದೆ. ಅವನು ಮರಣ ದಂಡನೆಗೆ ಗುರಿಯಾಗುತ್ತಾನೆ. ಅವನ ಬದುಕಿಗೆ ಅಂತಹ ಭೀಕರ ಅಂತ್ಯವನ್ನು ತಪ್ಪಿಸಲು ಏಕೈಕ ಮಾರ್ಗವೆಂದರೆ, ಮಾನವಕೃತ ಆ ಮುಕ್ತಿಯ ಕಾರ್ಯಕ್ರಮದಿಂದ ವಿಮುಖರಾಗಿ, ದೇವರಿಗೆ ನಿಜವಾಗಿಯೂ ಇಚ್ಛೆಯಿದ್ದರೆ, ತನ್ನನ್ನು ಸಂಚಯಿತನನ್ನಾಗಿ ಮಾಡಲು ಎಲ್ಲಾ ಕೆಲಸವನ್ನು ದೇವರು ಮಾಡುವ ತನಕ ಕಾಯುವುದು.

***ಸೈತಾನನು ಬೆಳಕಿನ ದೇವದೂತನಾಗಿ ಬರುತ್ತಾನೆ***

ಬೈಬಲ್ ನಲ್ಲಿ ಕೊಟ್ಟಿರುವ ಮುಕ್ತಿಯ ಯೋಜನೆಯನ್ನು ಹೊರತು ಬೇರೆ ಯಾವುದೇ ಮುಕ್ತಿಯ ಕಾರ್ಯಕ್ರಮವನ್ನು ನಂಬುವುದರ ಭೀಕರ ಪರಿಣಾಮಗಳ ಬಗ್ಗೆ ನಾವು ಬೈಬಲ್ ನಿಂದ ತಿಳಿದಿರುವುದರಿಂದ, ನಮಗೆ ಯಾರು ಬೋಧಿಸುತ್ತಾರೆ ಎಂಬುದರ ಬಗ್ಗೆ ನಾವು ಬಹಳ ಜಾಗರೂಕತೆಯಿಂದ ಇರಬೇಕು. ಈ ಕ್ಷೇತ್ರದಲ್ಲಿ, ಎರಡನೆ ಕೊರಿಂಥದವರ 11:13-15ರಲ್ಲಿ ಹೇಳಿರುವಂತೆ, ಸೈತಾನನು ಬೆಳಕಿನ ದೇವದೂತನಾಗಿ ಮತ್ತು ಅವನ ಸೇವಕರು ನೀತಿಯ ಸೇವಕರಾಗಿ ಬರುವ ಸಾಧ್ಯತೆ ಇದೆ.

ಅನೇಕ ಬೋಧಕರು ಮತ್ತು ಸಂಚಾರಿ ಪ್ರಚಾರಕರು ಬೈಬಲ್ ಗೆ ತಮ್ಮ ನಿಷ್ಠಾವಂತತೆಗೆ ಬಹಳ ಗೌರವ ಪಡೆದಿದ್ದಾರೆ. ಅವರು ಅಧಿಕೃತವಾಗಿ ಬಹಳ ಮನ್ನಣೆ ಪಡೆದಿದ್ದಾರೆ. ದೇವರ ಸೇವಕರೆಂದು ಅವರಿಗೆ ಬಹಳ ಒಳ್ಳೆಯ ಹೆಸರಿದೆ. ಬೈಬಲ್ ದೋಷಾತೀತ ದೇವರ ಪದ ಎಂದು ಅವರು ಬೋಧಿಸುತ್ತಾರೆ. ಅವರು ಪ್ರವಚನಗಳನ್ನು ಬೈಬಲ್ ನಿಂದ ನೇರವಾಗಿ ಬೋಧಿಸುತ್ತಾರೆ. ಮತ್ತೆ, ಮುಕ್ತಿಯ ಪ್ರಾಮುಖ್ಯತೆಯ ಬಗ್ಗೆ ಮತ್ತು ಮುಕ್ತಿಯೊಂದಿಗೆ ಬರುವ ಅನುಗ್ರಹಗಳ ಬಗ್ಗೆ ಅವರು, “ನೀವೂ ಕೂಡ ಇಂದು ಸಂಚಯಿತರಾಗಬಹುದು. ಯೇಸುವನ್ನು ದೇವರ ಮಗನೆಂದು ನಂಬಿರಿ ಮತ್ತು ಆತನನ್ನು ನಿಮ್ಮ ರಕ್ಷಕನೆಂದು ಸ್ವೀಕರಿಸಿ” ಎಂದು ಹೇಳುತ್ತಾರೆ. ಪ್ರೀತಿಯಿಂದ ಮತ್ತು ಕಾಳಜಿಯಿಂದ ಈ ವಿಷಯಗಳನ್ನು ಪ್ರೋತ್ಸಾಹಗಳಂತೆ ಅವರು ಹೇಳುತ್ತಾರೆ. ಅವರು ದೇವರ ನಿಜವಾದ ಸೇವಕರು ಎಂಬುದಕ್ಕೆ ಎಲ್ಲಾ ರೀತಿಯ ಪುರಾವೆಗಳಿರುವಂತೆ ತೋರುತ್ತದೆ. ದೇವರ ಹೆಸರಿನಲ್ಲಿ ನೇರವಾಗಿ ಬೈಬಲ್ ನಿಂದ ಅವರು ಬೋಧಿಸುತ್ತಿಲ್ಲವೆ?

*ಅವರನ್ನು ಖಂಡಿತವಾಗಿ ನಾಶ ಮಾಡುವ ಮುಕ್ತಿಯ ಕಾರ್ಯಕ್ರಮವನ್ನು ಅನುಸರಿಸಿ ಅವರು ಮೋಸಹೋಗಿದ್ದಾರೆ.*

ಮತ್ತು ಅವರು ನೀಡುವ ಮುಕ್ತಿಯ ಕಾಯಕ್ರಮ ಬಹಳ ಸುಂದರವಾಗಿ ತೋರುತ್ತದೆ ಏಕೆಂದರೆ, "ನನ್ನ ಪಾಪಗಳನ್ನು ಕ್ಷಮಿಸಲಾಗಿದೆ ಮತ್ತು ನಾನು ನಿರಂತರವಾಗಿ ಕ್ರಿಸ್ತರಲ್ಲಿ ಸುರಕ್ಷಿತವಾಗಿರುತ್ತೇನೆ ಎಂದು ನಾನೂ ಕೂಡ ಈಗಲೆ ತಿಳಿದುಕೊಳ್ಳಬಹುದು" ಎಂದು ಜನರು ಯೋಚಿಸುತ್ತಾರೆ. ಆದ್ದರಿಂದ, ಅವರು ಕ್ರಿಸ್ತರಲ್ಲಿ ನಿರಂತರವಾಗಿ ಸುರಕ್ಷಿತರಾಗಿದ್ದಾರೆ ಎಂದು ಈ ಬೈಬಲ್ ಬೋಧಕರನ್ನು ನಂಬುವವರಿಗೆ ಮತ್ತು ಅವರ ದಿಕ್ಕಿನಲ್ಲಿ ನಡೆಯುವವರಿಗೆ ಮನವರಿಕೆಯಾಗಿದೆ. ಅವರನ್ನು ಖಂಡಿತವಾಗಿ ನಾಶ ಮಾಡುವ ಮುಕ್ತಿಯ ಕಾರ್ಯಕ್ರಮವನ್ನು ಅನುಸರಿಸಿ ಅವರು ಮೋಸಹೋಗಿದ್ದಾರೆ. ಸುಳ್ಳು ಸುವಾರ್ತೆಯನ್ನು ನಂಬುವಂತೆ ಅವರು ಮೋಸಹೋಗಿದ್ದಾರೆ. ವಿಷಾದನೀಯವಾಗಿ, ಅವರು ಸಬ್ಬತ್ ದಿನದಂದು ಕಟ್ಟಿಗೆ ಒಟ್ಟು ಮಾಡಿದ ವ್ಯಕ್ತಿಯಂತಾಗಿದ್ದಾರೆ.

ಎರಡನೆ ಕೊರಿಂಥದವರ 11:14ರಲ್ಲಿ, ಸೈತಾನನು ಬೆಳಕಿನ ದೇವದೂತನಾಗಿ, ಅಂದರೆ ಸಂದೇಶವಾಹಕನಾಗಿ, ಬರುತ್ತಾನೆ ಎಂದು ದೇವರು ಎಚ್ಚರಿಕೆ ನೀಡುತ್ತಾರೆ. ಕ್ರಿಸ್ತರು ಬೆಳಕಿನ ನಿಜವಾದ ಸಂದೇಶವಾಹಕರು. ಆದರೆ, ಸೈತಾನನು, ತನ್ನ ನೀತಿಯ ಸೇವಕರ ಮೂಲಕ, ಕ್ರಿಸ್ತರಂತೆಯೆ ಕಾಣುತ್ತಾನೆ. ಈ ಸೇವಕರು ಖೋಟಾ ಕ್ರಿಸ್ತರು, ನಕಲಿ ಕ್ರಿಸ್ತರು. ತಾವು ಕ್ರಿಸ್ತರ ಸೇವೆ ಮಾಡುತ್ತಿದ್ದಾರೆ ಎಂದು ಅವರು ನಿಜವಾಗಿಯೂ ನಂಬುತ್ತಾರೆ, ಆದರೆ, ವಾಸ್ತವತೆಯಲ್ಲಿ, ಅವರ ಯಜಮಾನ, ಕ್ರಿಸ್ತಶತ್ರುವಾದ ಸೈತಾನ.

ಅನೇಕ ಬಹುಮಾನ್ಯ ಬೈಬಲ್ ಬೋಧಕರ ವೈಶಿಷ್ಟ್ಯವಾದ ಇಂತಹ ಬೋಧನೆ ಎಲ್ಲೆಲ್ಲಿಯೂ ಕಾಣಸಿಗುತ್ತದೆ. ಆದರೆ, ಪ್ರತಿಯೊಂದು ವಿಚಾರದಲ್ಲಿ, ಒಬ್ಬ ವ್ಯಕ್ತಿಯನ್ನು ಸಂಚಯಿತನನ್ನಾಗಿ ಮಾಡಲು ಬೇಕಾದ ಎಲ್ಲಾ ಕೆಲಸವನ್ನು ಕ್ರಿಸ್ತರು ಮಾಡಿದರು ಮತ್ತು ಆ ವ್ಯಕ್ತಿ ಜನಿಸುವ ಬಹಳ ಮೊದಲೆ ಕ್ರಿಸ್ತರು ಅವನ ಎಲ್ಲಾ ಪಾಪಗಳಿಗೆ ಬೆಲೆ ತೆತ್ತರು ಎಂಬ ಸತ್ಯದ ಉಲ್ಲಂಘನೆ ಮಿತಿಮೀರಿದೆ. ನಿಜವಾಗಿಯೂ, ಬೈಬಲ್ ಇದನ್ನೆ ಬೋಧಿಸುತ್ತದೆ, ಮತ್ತು ನಾವು ಸಂಪೂರ್ಣ ಬೈಬಲ್ ಅನ್ನು ಆಲಿಸುವುದು ಮತ್ತು ನಮ್ಮ ಮುಕ್ತಿಗೆ ಎಲ್ಲಾ ಕೀರ್ತಿ ಕ್ರಿಸ್ತರಿಗೆ ಸಲ್ಲತಕ್ಕದ್ದು, ನಾವು ಯಾವುದೇ ಹೆಸರನ್ನು ತೆಗೆದುಕೊಳ್ಳುವಂತಿಲ್ಲ ಎಂದು ಅರಿಯುವುದು ಅತ್ಯಗತ್ಯವಾಗಿದೆ.

ಈ ಬೋಧಕರು ಮತ್ತು ಸಂಚಾರಿ ಪ್ರಚಾರಕರು ತಾವು ಕ್ರಿಸ್ತರ ಯೋಗ್ಯ ಮತ್ತು ನಿಷ್ಠಾವಂತ ಸೇವಕರು ಎಂದು ನಿಜವಾಗಿಯೂ ನಂಬುತ್ತಾರೆ ಆದರೆ, ಸತ್ಯವೇನೆಂದರೆ, ಎರಡನೆ ಕೊರಿಂಥದವರ 11:15ರಲ್ಲಿ ಹೇಳಿರುವಂತೆ, ಅವರು ಸೈತಾನನ **"ನೀತಿಗೆ ಸೇವಕರು"**. ಅವರು ಯೇಸು ಕ್ರಿಸ್ತರ ಹೆಸರಿನಲ್ಲಿ ಬರುತ್ತಾರೆ ಆದರೆ, ವಾಸ್ತವತೆಯಲ್ಲಿ, ಎರಡನೆ ಕೊರಿಂಥದವರ 11:14ರಲ್ಲಿ ಹೇಳಿರುವಂತೆ, ಅವರು ಬೆಳಕಿನ ದೇವದೂತನಂತೆ ಬರುವ ಸೈತಾನನ ಸೇವಕರು. ಅವರ 'ನೀವೆ ಮಾಡಿ' ಮುಕ್ತಿಯ ಯೋಜನೆಯಲ್ಲಿ, ಅವರು ಒಂದು ದೊಡ್ಡ ಸುಳ್ಳನ್ನು ತರುತ್ತಿದ್ದಾರೆ ಏಕೆಂದರೆ, ಯೋಹಾನ 8:44ರಲ್ಲಿ ಹೇಳಿರುವಂತೆ, ಅವರ ಯಜಮಾನನಾದ ಸೈತಾನನು ಸುಳ್ಳುಗಳ ತಂದೆ. ಎಷ್ಟು ಭಯಂಕರ! ಅವರು ಹೇಳಿದ್ದನ್ನು ಕೇಳಿ ಅವರನ್ನು ನಂಬುವ ಎಲ್ಲಾ ಪ್ರಿಯ ಜನರ ಬಗ್ಗೆ ಆಲೋಚಿಸಿ, ಈ ಸುಳ್ಳುಗಳನ್ನು ಸತ್ಯವೆಂದು ಸ್ವೀಕರಿಸಿದಾಗ, ಯಾವುದೇ ನಿರೀಕ್ಷೆ ಇಲ್ಲದ ದಾರಿಯಲ್ಲಿ ಅವರು ಬಂಧಿತರಾಗುತ್ತಿದ್ದಾರೆ.

ಆದ್ದರಿಂದ, ದಯವಿಟ್ಟು ಕೇಳಿ, ಇದು ಬಹಳ ಮುಖ್ಯ. ನೀವು ಯೇಸುವನ್ನು ನಿಮ್ಮ ರಕ್ಷಕನನ್ನಾಗಿ "ಸ್ವೀಕರಿಸಿದ್ದರೆ" ನೀವು ಸಂಚಯಿತರಾಗಿದ್ದಿರಿ ಎಂದು ನಿಮಗೆ ಹೇಳಿಕೊಡಲಾಗಿದ್ದರಿಂದ ನೀವು ಸಂಚಯಿತರಾಗಿದ್ದೀರಿ ಎಂದು ಅನೇಕ ವರ್ಷಗಳ ತನಕ ಪ್ರಾಯಶಃ ನೀವು ನಂಬಿರಬಹುದು. ಪ್ರಾಯಶಃ ನಿಮ್ಮ ಕ್ರೈಸ್ತದೇವಾಲಯದ ಪಾಪ ನಿವೇದನ ಸದಸ್ಯರಾಗಿ ನೀವು ಸೇವೆ ಸಲ್ಲಿಸಿದ್ದ ಕಾರಣ ನೀವು ಯೇಸುವಿನ ಸುರಕ್ಷಿತ ಬಾಹುಗಳಲ್ಲಿ ಇದ್ದೀರೆಂದು ಅನೇಕ ವರ್ಷಗಳ ತನಕ ನಿಮಗೆ ಮನವರಿಕೆಯಾಗಿರಬಹುದು.

ಮತ್ತು ಈಗ, ಸಬ್ಬತ್ ದಿನದಂದು ಕಟ್ಟಿಗೆ ಒಟ್ಟು ಮಾಡಿದ ವ್ಯಕ್ತಿಯ ಪರಿಸ್ಥಿತಿಯಲ್ಲಿಯೆ ನೀವು ಇದ್ದೀರಿ ಎಂದು ಕಂಡು ನಿಮಗೆ ಸಂಪೂರ್ಣ ನಿರಾಶೆಯಾಗಿದೆ. ನೀವು ಇನ್ನೂ ದೇವರ ಕಡುಕೋಪಕ್ಕೆ ಪಾತ್ರರಾಗಿದ್ದೀರಿ, ನಿಮ್ಮ ವಿನಾಶದ ಸಮಯಕ್ಕೆ ಕಾಯುತ್ತಿದ್ದೀರಿ. ನೀವು ಬೈಬಲ್ ಬೋಧಕರಾಗಿದ್ದು ಅನೇಕ ಜನರಿಗೆ ಬೋಧಿಸಿ, ಅದೇ 'ನೀವೆ ಮಾಡಿ' ಮುಕ್ತಿಯ ಯೋಜನೆಯ ಬಲೆಯಲ್ಲಿ ಅವರನ್ನು ಸಿಕ್ಕಿಸಿ, ಅವರನ್ನು ವಿನಾಶದತ್ತ ಕರೆದೊಯ್ದಿದ್ದರೆ ನಿಮ್ಮ ಪರಿಸ್ಥಿತಿ ಇನ್ನೂ ಚಿಂತಾಜನಕವಾಗಿದೆ.

ಆದ್ದರಿಂದ, "ನನಗೆ ಯಾವುದೇ ಭರವಸೆ ಇರಲು ಸಾಧ್ಯವೆ? ದೇವರು ನನ್ನ ಎಲ್ಲಾ ಪಾಪಗಳನ್ನು ಕ್ಷಮಿಸಿ ನನ್ನನ್ನೂ ಕೂಡ ಸಂಚಯಿತನನ್ನಾಗಿ ಮಾಡಬಹುದೆ?" ಎಂಬಂತಹ ಪ್ರಶ್ನೆಗಳು ನಿಮ್ಮನ್ನು ಬಿಡುವಂತೆ ತೋರುವುದಿಲ್ಲ.

ಬೈಬಲ್ ನ ಉತ್ತರವೇನೆಂದರೆ, ಕ್ರಿಸ್ತರು ಪಾಪಿಷ್ಠರಿಗೋಸ್ಕರ ಬಂದರು. ಬೇರೆ ಯಾವುದೇ ಸಂಚಯಿತನಾಗದ ವ್ಯಕ್ತಿಯಷ್ಟೇ ನಿಮಗೂ ಮುಕ್ತಿಯ ಭರವಸೆ ಇದೆ. ನೀವೂ ಸಹ ತಪ್ಪು

ಸುವಾರ್ತೆಯನ್ನು ಅನುಸರಿಸಿದ ಪಾಪಕ್ಕೆ ಪಶ್ಚಾತ್ತಾಪ ಪಡಬೇಕು, ಮತ್ತು ಪ್ರಾರ್ಥಿಸಬೇಕು, ಮತ್ತು ದೇವರು ತನ್ನ ಮಹಾ ಕರುಣೆಯಲ್ಲಿ ನಿಮ್ಮನ್ನು ಮುಕ್ತಿಗೆ ಆಯ್ಕೆಮಾಡಿದ್ದಾರೆ ಎಂದು ನಿರೀಕ್ಷಿಸಬೇಕು.

ಅದ್ಭುತವಾಗಿ, ಈ 'ನೀವೆ ಮಾಡಿ' ಮುಕ್ತಿಯ ಕಾರ್ಯಕ್ರಮಗಳು ವಾಸ್ತವಿಕವಾಗಿ ಪ್ರತಿಯೊಂದು ಕ್ರೈಸ್ತಸಭೆಯಲ್ಲಿವೆ. ಅದು ಹೇಗೆ ಸಾಧ್ಯ? ಸಮಸ್ಯೆ ಏನೆಂದರೆ, ಈ ಕ್ರೈಸ್ತದೇವಾಲಯಗಳು ಸಂಪೂರ್ಣ ಬೈಬಲ್ ಅನ್ನು ಉಪಯೋಗಿಸುತ್ತಿಲ್ಲ, ಮತ್ತು ಧರ್ಮಗ್ರಂಥದೊಂದಿಗೆ ಧರ್ಮಗ್ರಂಥವನ್ನು ಹೋಲಿಸಿ ಎಂಬ ಬೈಬಲ್ ನ ಆದೇಶವನ್ನು ಅವರು ಜಾಗರೂಕತೆಯಿಂದ ಪಾಲಿಸುತ್ತಿಲ್ಲ. ಮೇಲಾಗಿ, ಬೈಬಲ್ ಅನ್ನು ಲೌಕಿಕ ಭಾಷೆಯಲ್ಲಿ ಬರೆಯಲಾಗಿದೆ ಎಂದು ಅವರಿಗೆ ಅರ್ಥವಾಗುತ್ತಿಲ್ಲ, ಆದರೆ, ಈ ಲೌಕಿಕ ಚಾರಿತ್ರಿಕ ಹೇಳಿಕೆಗಳಲ್ಲಿ ನೀಡಲಾಗಿರುವ ಆಧ್ಯಾತ್ಮಿಕ ಬೋಧನೆಗಳನ್ನು ನಾವು ಕಾಣುವ ತನಕ ಬೈಬಲ್ ನ ದೊಡ್ಡ ಸಂದೇಶ ನಮಗೆ ಅರ್ಥವಾಗುವುದಿಲ್ಲ. ಬೇರೆ ಮಾತಿನಲ್ಲಿ ಹೇಳುವುದಾದರೆ, ಅವರ ಬಳಿ ತಪ್ಪು ಅರ್ಥ ವಿವರಣೆ ಇದೆ, ಮಾರ್ಕ 4:33-34ರಲ್ಲಿ ಹೇಳಿರುವಂತೆ, ಬೈಬಲ್ ನ ವ್ಯಾಖ್ಯಾನದ ತಪ್ಪು ವಿಧಾನವಿದೆ. ಆದರೆ, ಈ ತಪ್ಪು ಸುವಾರ್ತೆಗಳು, ಬೈಬಲ್ ನದ್ದಲ್ಲದ ಮುಕ್ತಿಯ ಕಾರ್ಯಕ್ರಮಗಳು ಕ್ರೈಸ್ತದೇವಾಲಯಗಳಲ್ಲಿ ಇಷ್ಟು ಪಸರಿಸಿರಲು ಇನ್ನೊಂದು ಕಾರ್ಯಸಾಧ್ಯವಾದ ಕಾರಣವಿದೆ.

***ಕ್ರೈಸ್ತದೇವಾಲಯಗಳನ್ನು ಪರಿಶುದ್ಧವಾಗಿಡಲು ಸಾಧ್ಯವಿತ್ತೆ?***

ಪ್ರತಿಯೊಂದು ಕ್ರೈಸ್ತಸಭೆ ಗಾಳಕ್ಕೆ ಬಿದ್ದಿದೆ, ಮತ್ತು ನಡೆದಿರುವುದು ಇದೆ. ಕ್ರೈಸ್ತದೇವಾಲಯವನ್ನು ಸಾಧ್ಯವಾದಷ್ಟು ಪರಿಶುದ್ಧವಾಗಿಡಬೇಕೆಂಬ ಸರಿಯಾದ ಬಯಕೆ ಕ್ರೈಸ್ತಸಭೆಗಳ ಆಧ್ಯಾತ್ಮಿಕ ಗುರುಗಳಿಗೆ ಇದ್ದಿರಬಹುದು, ಮತ್ತು ಹೀಗೆ, ಕೇವಲ ನಿಜವಾಗಿ ಸಂಚಯಿತರಾದ ವ್ಯಕ್ತಿಗಳನ್ನು ಮಾತ್ರ ತಮ್ಮ ಕ್ರೈಸ್ತದೇವಾಲಯದ ಸದಸ್ಯರನ್ನಾಗಿ ಹೊಂದಲು ಅವರು ಬಯಸಿದ್ದಿರಬಹುದು. ಈ ಪ್ರಯತ್ನದಲ್ಲಿ ಅವರಿಗೆ ಸಹಾಯಕವಾಗಲು, ಪ್ರತಿಯೊಂದು ಕ್ರೈಸ್ತದೇವಾಲಯ ಅಥವ ಪಂಥ, ಈ ಗುರಿಯನ್ನು ಮುಟ್ಟಲು, ಒಂದು ಸ್ವರೂಪವನ್ನು, ಒಂದು ವಿಧಾನವನ್ನು, ಅಥವ ಒಂದು ಯೋಜನೆಯನ್ನು ಸ್ಥಾಪಿಸಿತು. ಒಬ್ಬ ಭಾವಿ ಸದಸ್ಯ ನಂಬಿಕೆಯ ಒಂದು ನಿವೇದನೆಯನ್ನು, ಅಥವ ತನ್ನ ರಕ್ಷಕನನ್ನಾಗಿ ಕ್ರಿಸ್ತರನ್ನು ತಾನು ನಂಬಿರುವುದಾಗಿ ನಿವೇದನೆ ಮಾಡಬೇಕೆಂಬತಹ ಅಗತ್ಯತೆಯಷ್ಟೆ ಸರಳವಾದ ಅವರ ಸ್ವರೂಪ ಅಥವ ಯೋಜನೆ ಆಗಿದ್ದಿರಬಹುದು. ಆದರೆ,

ಸಾಮಾನ್ಯವಾಗಿ, ಆ ವ್ಯಕ್ತಿ ನೀರಿನ ದೀಕ್ಷಾಸ್ನಾನವನ್ನು ಪಡೆದು, ಆ ಕ್ರೈಸ್ತಸಭೆಯ ಸದಸ್ಯನಾಗಿ ತಾನು ಆ ಕ್ರೈಸ್ತದೇವಾಲಯದ ಎಲ್ಲಾ ಬೋಧನೆಗಳನ್ನು ನಿಷ್ಠೆಯಿಂದ ಅನುಸರಿಸುವುದಾಗಿ ಅವನು ಆಶ್ವಾಸನೆ ನೀಡಬೇಕೆಂಬುದೂ ಕೂಡ ಕ್ರೈಸ್ತದೇವಾಲಯದ ನಿಯಮಗಳ ಅಗತ್ಯತೆಯಾಗಿದ್ದಿತು.

*ಮುಕ್ತಿಯ ಭರವಸೆ ಪಡೆಯಲು ಅನುಸರಿಸಬೇಕೆಂದು ಅವರು ಹೇಳುವ, ಅವರು ಬೆಳೆಸುವ ಒಂದು ಸ್ವರೂಪ ಅಥವ ವಿಧಾನ ನಿಜವಾಗಿಯೂ ವಿರುದ್ಧ ಪರಿಣಾಮವನ್ನು ಉಂಟುಮಾಡುತ್ತದೆ.*

ದುರದೃಷ್ಟವಶಾತ್, ಕ್ರೈಸ್ತದೇವಾಲಯಗಳು ತಮ್ಮದಾಗಿಸಿಕೊಂಡ ಸ್ವರೂಪ ಅಥವ ವ್ಯವಸ್ಥೆ ಮೂಲಭೂತವಾದ ಬೈಬಲ್ ತತ್ವವನ್ನು ಒಳಗೊಂಡಿಲ್ಲ, ಅದೇನೆಂದರೆ, ದೇವರ ಯಾವುದೇ ಆಜ್ಞೆಗೆ ನಾವು ವಿಧೇಯರಾಗಿದ್ದಾಗ ಮತ್ತು ವಿಧೇಯತೆ ನಮ್ಮ ಮುಕ್ತಿಗೆ ಸಹಾಯಕವಾಗುತ್ತದೆ ಎಂದು ನಂಬಿದಾಗ, ಅರಣ್ಯಕಾಂಡ 15ರಲ್ಲಿ, ಸಬ್ಬತ್ ದಿನದಂದು ಕಟ್ಟಿಗೆ ಒಟ್ಟು ಮಾಡಿದ ವ್ಯಕ್ತಿಯಂತೆ ನಾವು ಎಂಬುದು. ನಾವು ಈಗಲೂ ದೇವರ ಕಡುಕೋಪಕ್ಕೆ ಪಾತ್ರರಾಗಿದ್ದೇವೆ. ಹೀಗೆ, ಮುಕ್ತಿಯ ಭರವಸೆ ಪಡೆಯಲು ಅನುಸರಿಸಬೇಕೆಂದು ಅವರು ಹೇಳುವ, ಅವರು ಬೆಳೆಸುವ ಒಂದು ಸ್ವರೂಪ ಅಥವ ವಿಧಾನ ನಿಜವಾಗಿಯೂ ವಿರುದ್ಧ ಪರಿಣಾಮವನ್ನು ಉಂಟುಮಾಡುತ್ತದೆ. ವ್ಯಕ್ತಿಗಳನ್ನು ಅವರ ಸಂಚಯಿತರಾಗದ ಸ್ಥಿತಿಯಲ್ಲಿ ಇರಿಸಲು ಅದು ಸಹಾಯಕವಾಗುತ್ತದೆ.

ನಮ್ಮ ದಿನದಲ್ಲಿ, ಅತ್ಯಧಿಕ ಸಂಖ್ಯೆಯ ಜನರು ಬಹುತೇಕ ಪ್ರತಿಯೊಂದು ಕ್ರೈಸ್ತದೇವಾಲಯದಲ್ಲಿ, ಸೈತಾನನು ಈಗ ಕ್ರೈಸ್ತದೇವಾಲಯಗಳಲ್ಲಿ ಆಳುತ್ತಿದ್ದಾನೆ ಮತ್ತು ಅಲ್ಲಿ ಅವರು ಆಧ್ಯಾತ್ಮಿಕವಾಗಿ ಸೈತಾನನ ಸೇವೆ ಮಾಡದಂತೆ ಕ್ರೈಸ್ತದೇವಾಲಯಗಳಿಂದ ಪಲಾಯನ ಮಾಡಬೇಕೆಂಬ ಎಚ್ಚರಿಕೆಗೆ ಕಿವಿಗೊಡುತ್ತಿಲ್ಲ ಎಂಬ ಸತ್ಯಕ್ಕೆ ಕಾರಣ ಕೊಡಲು ಈ ದುಃಖಕರ ಪರಿಸ್ಥಿತಿ ಸಹಾಯಕವಾಗುತ್ತದೆ. ಮತ್ತು ಜಗತ್ತಿನ ಅಂತ್ಯ ಬಹುಮಟ್ಟಿಗೆ ಬಂದಿದೆ ಎಂಬ ಗಂಭೀರ ಎಚ್ಚರಿಕೆಗೆ ಅವರು ಕಿವಿಗೊಡುತ್ತಿಲ್ಲ. ಈ ವಿಷಯಗಳ ಬಗ್ಗೆ ಹೆಚ್ಚಿನ ಮಾಹಿತಿಗಾಗಿ, ಫ್ಯಾಮಿಲಿ ರೇಡಿಯೊವನ್ನು ದಯವಿಟ್ಟು ಸಂಪರ್ಕಿಸಿರಿ, ಮತ್ತು ಉಚಿತ ಪುಸ್ತಕಗಳಾದ *ವ್ಹೀ ಆರ್ ಆಲ್ಮೋಸ್ಟ್ ದೇರ್, ಟೈಮ್ ಹ್ಯಾಸ್ ಆನ್ ಎಂಡ್, ದಿ ಎಂಡ್ ಆಫ್ ದಿ ಚರ್ಚ್ ಏಜ್ ಅಂಡ್ ಆಫ್ಟರ್* ಮತ್ತು *ವ್ಹೀಟ್ ಅಂಡ್ ಟೇರ್ಸ್*‌ಗಳನ್ನು ಕೇಳಿ ಪಡೆಯಿರಿ.

ಕ್ರೈಸ್ತದೇವಾಲಯಗಳಲ್ಲಿ ಸಾಮಾನ್ಯವಾಗಿರುವ ಬೈಬಲ್ ಗೆ ವಿರುದ್ಧವಾದ ಮುಕ್ತಿಯ ಸ್ವರೂಪದ ಅಥವ ಮುಕ್ತಿಯ ಯೋಜನೆಯ ಹೊರತಾಗಿ ಕ್ರೈಸ್ತದೇವಾಲಯದ ಯುಗದಾದ್ಯಂತ ಒಂದು ಚಿಕ್ಕ ಸಂಖ್ಯೆಯ ಜನರು ಸಂಚಯಿತರಾದರು. ಅವರಿಗೆ ಆ ಕ್ರೈಸ್ತದೇವಾಲಯದ ಬೋಧನೆಗಳ ಬಹಳ ಕಡಿಮೆ ಅಥವ ಗಮನಾರ್ಹ ತಿಳುವಳಿಕೆ ಇದ್ದಿರಬಹುದು ಆದರೆ ದೇವರು ಅವರನ್ನು ಸಂಚಯಿತರನ್ನಾಗಿ ಮಾಡಿದರು ಏಕೆಂದರೆ, ಅವರು ಮುಕ್ತಿಗೆ ಆಯ್ಕೆಯಾಗಿದ್ದರು. ಅವರು ಬೈಬಲ್ ಅನ್ನು ಆಲಿಸುತ್ತಿದ್ದರು, ಹಾಗಾಗಿ ದೇವರು ಅವರನ್ನು ಸಂಚಯಿತರನ್ನಾಗಿ ಮಾಡಿದರು. ಹೀಗೆ, ಬೈಬಲ್ ನ ಯಾವುದೇ ಮತ್ತು ಎಲ್ಲಾ ಆಜ್ಞೆಗಳಿಗೆ ವಿಧೇಯರಾಗಿರಬೇಕೆಂಬ ಒಂದು ತೀವ್ರ ಮತ್ತು ಸತತ ಬಯಕೆ ಅವರಲ್ಲಿತ್ತು. ಬೈಬಲ್ ನ ಬಗ್ಗೆ ಅವರ ಜ್ಞಾನ ಕನಿಷ್ಠವಾಗಿದ್ದರೂ ಅವರಿಗೆ ಈ ಬಯಕೆ ಇದ್ದಿತು.

*ಸಂಚಯಿತರಾಗದ ಮನುಷ್ಯರು, ಅವರೂ ಕೂಡ ದೇವರ ಮುಕ್ತಿಯ ಯೋಜನೆಯಲ್ಲಿ ಸೇರ್ಪಡೆಯಾಗುವಂತೆ ನಿರೀಕ್ಷಿಸುತ್ತ ಮತ್ತು ಪ್ರಾರ್ಥಿಸುತ್ತ, ದೇವರ ನಿಯಮಗಳಿಗೆ ವಿಧೇಯರಾಗಿರಲು ಪ್ರಯತ್ನಿಸಬೇಕೆಂದು ನಾವು ಬೋಧಿಸಬೇಕಾಗಿದೆ.*

ಮನುಷ್ಯನಿಂದ ಸೃಷ್ಟಿಯಾದ ಯಾವುದೇ ಸ್ವರೂಪ ಅಥವ ಯೋಜನೆ, ಅದನ್ನು ಎಷ್ಟೇ ಶ್ರದ್ಧೆಯಿಂದ ಅನುಸರಿಸಿದರೂ, ಒಬ್ಬ ವ್ಯಕ್ತಿಗೆ ಮುಕ್ತಿಯ ಭರವಸೆಯನ್ನು ನೀಡಲಾರದು ಎಂಬುದನ್ನು ಕ್ರೈಸ್ತದೇವಾಲಯಗಳು ಅರ್ಥಮಾಡಿಕೊಳ್ಳುವುದರಲ್ಲಿ ವಿಫಲವಾಗಿವೆ, ಮತ್ತು ಅವರ ವಿಫಲತೆ ನಮಗೆ ಒಂದು ದೊಡ್ಡ ಎಚ್ಚರಿಕೆಯಾಗಬೇಕು. ಜಗತ್ತಿನೊಳಗೆ ನಾವು ಸುವಾರ್ತೆಯನ್ನು ಕಳುಹಿಸಿದಾಗ, ಒಂದು ಮಾನವಕೃತ ಯೋಜನೆಯನ್ನು ಅಥವ ಸ್ವರೂಪವನ್ನು ಮುಂದಿಟ್ಟು, ಈ ಯೋಜನೆಯನ್ನು ಜಾಗರೂಕತೆಯಿಂದ ಅನುಸರಿಸಿದರೆ, ಅದು ಮುಕ್ತಿಯ ಭರವಸೆಯನ್ನು ನೀಡುತ್ತದೆ ಎಂದು ನಾವು ಎಂದೂ ಹೇಳಬಾರದು. ಸಂಚಯಿತರಾಗದ ಮನುಷ್ಯರು, ಅವರೂ ಕೂಡ ದೇವರ ಮುಕ್ತಿಯ ಯೋಜನೆಯಲ್ಲಿ ಸೇರ್ಪಡೆಯಾಗುವಂತೆ ನಿರೀಕ್ಷಿಸುತ್ತ ಮತ್ತು ಪ್ರಾರ್ಥಿಸುತ್ತ, ದೇವರ ನಿಯಮಗಳಿಗೆ ವಿಧೇಯರಾಗಿರಲು ಪ್ರಯತ್ನಿಸಬೇಕೆಂದು ನಾವು ಬೋಧಿಸಬೇಕಾಗಿದೆ.

***ಒಂದು ಬಲವಾದ ಪರಿವರ್ತನೆ***

ಈಗ ಒಂದು ಪ್ರಶ್ನೆಯನ್ನು ಕೇಳಬೇಕು: ಮುಕ್ತಿ ಒಬ್ಬ ವ್ಯಕ್ತಿಯ ಬದುಕಿನ ಮೇಲೆ ಯಾವ ಪರಿಣಾಮವನ್ನುಂಟುಮಾಡುತ್ತದೆ? ಮತ್ತು ಹೊಸದಾಗಿ ಹುಟ್ಟುವುದು ಎಂಬುದರ ಅರ್ಥವೇನು?

ಒಬ್ಬ ವ್ಯಕ್ತಿ ಸಂಚಯಿತನಾಗುವ ಮುನ್ನ, ಅವನ ಸಂಪೂರ್ಣ ವ್ಯಕ್ತಿತ್ವದಲ್ಲಿ, ಅವನೂ ಕೂಡ, ಎಂದೂ ಸಂಚಯಿತರಾಗದ, ಎಲ್ಲಾ ಆಯ್ಕೆಯಾಗದ ಜನರಂತೆಯೆ ಇದ್ದನು ಎಂಬುದನ್ನು ನಾವು ನೆನಪಿನಲ್ಲಿಟ್ಟುಕೊಳ್ಳಬೇಕು. ದೇಹದಲ್ಲಿ ಮತ್ತು ಆತ್ಮದಲ್ಲಿ ಅವನು ಪಾಪಕ್ಕೆ ಅತಿಯಾಸೆ ಪಟ್ಟನು ಮತ್ತು ದೇವರ ವಿರುದ್ಧ ದಂಗೆ ಎದ್ದಿದ್ದನು.

ಆದರೆ ಈಗ, ಅವನು ಸಂಚಯಿತನಾಗಿರುವಾಗ, ಅವನಿಗೆ ಒಂದು ಹೊಸ ಪುನರುಜ್ಜೀವನಗೊಂಡ ಆತ್ಮವನ್ನು ನೀಡಲಾಗಿದೆ. ಅವನ ವ್ಯಕ್ತಿತ್ವದ ಆ ಭಾಗದಲ್ಲಿ, ಅವನು ಈಗ ಕ್ರಿಸ್ತರಲ್ಲಿ ಒಂದು ಹೊಸ ಜೀವಿ. ಅವನು ದೈಹಿಕವಾಗಿ ಜನಿಸಿದಾಗ, ಅವನು ಒಂದು ದೇಹ ಮತ್ತು ಒಂದು ಆತ್ಮವನ್ನು ಹೊಂದಿದ್ದ ಮಗುವಾಗಿದ್ದನು. ಮುಕ್ತಿಯ ಗಳಿಗೆಯಲ್ಲಿ, ಅವನು ಮತ್ತೆ ಹುಟ್ಟಿದ್ದಾನೆ, ಅಂದರೆ, ಅವನಿಗೆ ಒಂದು ಹೊಸ ಆತ್ಮವನ್ನು ಕೊಡಲಾಗಿದೆ. ಇದು ನಮ್ಮ ಮಾನವ ಮನಸ್ಸು ಅರ್ಥಮಾಡಿಕೊಳ್ಳಲಾಗದ ಒಂದು ಪವಾಡ, ಮತ್ತು ಈ ಬದಲಾವಣೆಗೆ ಪ್ರತ್ಯಕ್ಷ ಪುರಾವೆ ಇಲ್ಲ.

ಆದರೆ, ಅವನ ಆತ್ಮದ ಪವಾಡಸದೃಶ ಬದಲಾವಣೆಯನ್ನು ಕಾಣಬಹುದು, ಅಂದರೆ, ಒಬ್ಬ ವ್ಯಕ್ತಿಯ ಬದಲಾಗದ ದೇಹದಲ್ಲಿ ಒಂದು ಹೊಚ್ಚಹೊಸ ಆತ್ಮ ಅವನ ಬದುಕಿನ ಮೇಲೆ ಗಂಭೀರ ಪರಿಣಾಮ ಬೀರುತ್ತದೆ ಮತ್ತು ಅವನ ವರ್ತನೆಯನ್ನು ಬದಲಾಯಿಸುತ್ತದೆ.

ಇದು ಒಂದನೆ ಯೋಹಾನನ 3:9ರಲ್ಲಿ ದೇವರ ಹೇಳಿಕೆಯಿಂದ ರುಜುವಾತಾಗಿದೆ. ಅಲ್ಲಿ ಆತ ಹೇಳುವುದೇನೆಂದರೆ:

**ದೇವರಿಂದ ಹುಟ್ಟಿದವನು ಪಾಪಮಾಡನು; ದೇವರ ಜೀವವು ಅವನಲ್ಲಿ ನೆಲೆಗೊಂಡಿದೆ. ಅವನು ದೇವರಿಂದ ಹುಟ್ಟಿದ ಕಾರಣ ಪಾಪಮಾಡುವವನಾಗಿರಲಾರನು.**

*ಮುಕ್ತಿಯ ಗಳಿಗೆಯಲ್ಲಿ, ಸಂಚಯಿತನಾದ ವ್ಯಕ್ತಿಯ ವ್ಯಕ್ತಿತ್ವದಲ್ಲಿ ಒಂದು ದೊಡ್ಡ ಬದಲಾವಣೆಯಾಗುತ್ತದೆ ಎಂದು ದೇವರು ನಮಗೆ ಬೋಧಿಸುತ್ತಾರೆ.*

ಈ ಶ್ಲೋಕದಲ್ಲಿ, ಮುಕ್ತಿಯ ಗಳಿಗೆಯಲ್ಲಿ, ಸಂಚಯಿತನಾದ ವ್ಯಕ್ತಿಯ ವ್ಯಕ್ತಿತ್ವದಲ್ಲಿ ಒಂದು ದೊಡ್ಡ ಬದಲಾವಣೆಯಾಗುತ್ತದೆ ಎಂದು ದೇವರು ನಮಗೆ ಬೋಧಿಸುತ್ತಾರೆ. ಅವನ ಹೊಸ ಪುನರುಜ್ಜೀವನಗೊಂಡ ಆತ್ಮದಲ್ಲಿ, ಅವನು ಪಾಪ ಮಾಡಲಾರನು. ಪಾಪ ದೇವರ

ನಿಯಮದ ಉಲ್ಲಂಘನೆಯಾಗಿರುವುದರಿಂದ, ಅವನ ವ್ಯಕ್ತಿತ್ವದ ಆತ್ಮದ ಭಾಗದಲ್ಲಿ, ಅವನು ಪಾಪವನ್ನು ಆರಂಭಿಸಲಾರನು ಎಂದು ಇದರ ಅರ್ಥ. ಅವನ ವ್ಯಕ್ತಿತ್ವದ ಆತ್ಮದ ಭಾಗದಲ್ಲಿ, ಅವನು ದೇವರನ್ನು ಮತ್ತು ದೇವರ ನಿಯಮಗಳನ್ನು ಪ್ರೀತಿಸುತ್ತಾನೆ ಎಂದು ಇದರ ಅರ್ಥ. ಬೈಬಲ್ ನ ಎಲ್ಲಾ ದೈವಾಜ್ಞೆಗಳಿಗೆ ವಿಧೇಯನಾಗಿರಬೇಕೆಂದು ಅವನಲ್ಲಿ ಸತತವಾದ ಮತ್ತು ದೊಡ್ಡ ಬಯಕೆ ಇದೆಯೆಂದು ಇದರ ಅರ್ಥ. ಅವನ ಹೊಸ ಆತ್ಮದಲ್ಲಿ ಅವನು ಆಧ್ಯಾತ್ಮಿಕವಾಗಿ ಬದುಕಿದ್ದಾನೆ ಎಂದು ಇದರ ಅರ್ಥ.

ಅವನ ಮುಕ್ತಿಯನ್ನು ನೆರವೇರಿಸಲು ದೇವರು ಎಲ್ಲವನ್ನೂ ಮಾಡಿರುವುದರಿಂದ, ಅಂದರೆ, ಅವನನ್ನು ಆಯ್ಕೆ ಮಾಡಿ, ಅವನ ಪಾಪಗಳಿಗೆ ಬೆಲೆ ತೆತ್ತು, ಎಲ್ಲಾ ಆಯ್ಕೆಯಾದವರಿಗೆ ಅಗತ್ಯವಿರುವ ಹೊಸ ಪುನರುಜ್ಜೀವನಗೊಂಡ ಆತ್ಮವನ್ನು ಅವನಿಗೆ ನೀಡಿರುವುದರಿಂದ, ತನ್ನ ಮುಕ್ತಿಯನ್ನು ತಾನು ಎಂದೂ ಕಳೆದುಕೊಳ್ಳುವುದಿಲ್ಲವೆಂದು ಅವನಿಗೆ ಮನದಟ್ಟಾಗಿರುತ್ತದೆ. ಗಲಾತ್ಯದವರ 3:16ರಲ್ಲಿ ಹೇಳಿರುವಂತೆ, ಅವನಲ್ಲಿ ಉಳಿಯುವ ತಿರುಳು ಕ್ರಿಸ್ತರು. ಒಮ್ಮೆ ಅವನು ಸಂಚಯಿತನಾದ ಮೇಲೆ, ಅವನಿಗೆ ನಿರಂತರ ಸುರಕ್ಷತೆ ಇರುತ್ತದೆ. ಅವನಿಗೆ ನಿರಂತರ ಬದುಕನ್ನು ಕೊಡಲು ದೇವರು ಆಗಲೆ ಎಲ್ಲವನ್ನು ನೆರವೇರಿಸಿದ್ದಾರೆ. ಆದ್ದರಿಂದ, ಒಬ್ಬ ನಿಜವಾದ ನಂಬಿಕೆಯುಳ್ಳವನು ಎಂದೂ ತನ್ನ ಮುಕ್ತಿಯನ್ನು ಕಳೆದುಕೊಳ್ಳಲು ಸಾಧ್ಯವಿಲ್ಲ. ರೋಮಾಪುರದವರ 8:35-39ರಲ್ಲಿ ಹೇಳಿರುವಂತೆ, ನಿಜವಾದ ನಂಬಿಕೆಯುಳ್ಳವನನ್ನು ದೇವರ ಪ್ರೀತಿಯಿಂದ ಅಗಲಿಸುವ ಪಾಪವಾಗಲಿ, ಬೇರೇನಾದರು ಆಗಲಿ ಇಲ್ಲವೆಂದು ಬೈಬಲ್ ಹೇಳುತ್ತದೆ.

***ಸಂಚಯಿತನಾದ ವ್ಯಕ್ತಿ ಸಂಚಯಿತವಾಗದ ದೇಹದಲ್ಲಿ ಬದುಕುತ್ತಾನೆ***

ತನ್ನ ಹೊಸ ಆತ್ಮದಲ್ಲಿ, ನಂಬಿಕೆಯುಳ್ಳವನು ಈಗಲೂ, ತನ್ನ ಮುಕ್ತಿಯ ಗಳಿಗೆಯಲ್ಲಿ ಬದಲಾಯಿಸದ, ತನ್ನ ಹಳೆಯ ದೇಹದಲ್ಲಿ ಬದುಕಬೇಕು. ಆದ್ದರಿಂದ, ಎರಡು ಪರಸ್ಪರವಾಗಿ ವಿಭಿನ್ನವಾಗಿರುವ ಬಯಕೆಗಳೊಂದಿಗೆ ಬದುಕುವ ವ್ಯಕ್ತಿತ್ವವುಳ್ಳವನಾಗಿದ್ದಾನೆ. ಒಂದೆಡೆ, ಅವನು ಯಾವಾಗಲು ದೇವರ ಆಜ್ಞೆಗಳಿಗೆ ವಿಧೇಯನಾಗಿರಲು ಬಯಸುತ್ತಾನೆ, ಇನ್ನೊಂದೆಡೆ, ಅವನು ಪಾಪಕ್ಕೆ ಅತಿಯಾಸೆ ಪಡುತ್ತಾನೆ. ಪವಿತ್ರಾತ್ಮನ ಪ್ರೇರಣೆಯಲ್ಲಿ ಅಪೋಸ್ತಲ ಪೌಲನು ರೋಮಾಪುರದವರ 7:21-24ರಲ್ಲಿ ಘೋಷಿಸುವಂತೆ, ದೇವರು ಈ ಸಂದಿಗ್ಧ ಪರಿಸ್ಥಿತಿಯನ್ನು ವರ್ಣಿಸುತ್ತಾರೆ:

**ಹೀಗಿರಲಾಗಿ ಒಳ್ಳೇದನ್ನು ಮಾಡಬೇಕೆಂದಿರುವ ನನಗೆ ಕೆಟ್ಟದ್ದೇ ಸಿದ್ಧವಾಗಿದೆಯೆಂಬ ನಿಯಮ ನನಗೆ ಕಾಣಬರುತ್ತದೆ. ಅಂತರಾತ್ಮದೊಳಗೆ ದೇವರ ನಿಯಮದಲ್ಲಿ ಆನಂದ ಪಡುವವನಾಗಿದ್ದೇನೆ. ಆದರೆ ನನ್ನ ಅಂಗಗಳಲ್ಲಿ ಬೇರೊಂದು ನಿಯಮ ಉಂಟೆಂದು ನೋಡುತ್ತೇನೆ. ಅದು ನನ್ನ ಮನಸ್ಸಿನಲ್ಲಿರುವ ನಿಯಮಕ್ಕೆ ವಿರುದ್ಧವಾಗಿ ಕಾದಾಡಿ ನನ್ನನ್ನು ಸೆರೆಹಿಡಿದು ನನ್ನ ಅಂಗಗಳಲ್ಲಿರುವ ಪಾಪದ ನಿಯಮಕ್ಕೆ ವಶಮಾಡುವಂಥದಾಗಿದೆ. ಅಯ್ಯೋ, ನಾನು ಎಂಥ ದುರವಸ್ಥೆಯಲ್ಲಿ ಬಿದ್ದ ಮನುಷ್ಯನು! ಇಂಥ ಮರಣಕ್ಕೆ ಒಳಗಾದ ಈ ದೇಹದಿಂದ ನನ್ನನ್ನು ಬಿಡಿಸುವವನು ಯಾರು?**

ನಮ್ಮ ಪಾಪಿಷ್ಠ ದೇಹದಿಂದ ಬಿಡುಗಡೆ ಪಡೆಯುವುದು ಪ್ರತಿಯೊಬ್ಬ ನಿಜವಾದ ನಂಬಿಕೆಯುಳ್ಳವನ ಸತತ ಬಯಕೆ. ಆದರೆ ಸಂಚಯಿತವಾದ ವ್ಯಕ್ತಿತ್ವದೊಳಗೆ ನಡೆಯುವ ಜಗ್ಗಾಟ ಸ್ಥಿರವಾಗಿಲ್ಲ. ಎರಡನೆ ಪೇತ್ರನ 3:18ರಲ್ಲಿ ಹೇಳಿರುವಂತೆ, ಹೊಸ ಪುನರುಜ್ಜೀವನಗೊಂಡ ಆತ್ಮವನ್ನು ಹೊಂದಿರುವ ವ್ಯಕ್ತಿಗೆ ಹೆಚ್ಚಿನ ಜಯಶಾಲಿ ಬದುಕಿನತ್ತ ಬೆಳವಣಿಗೆ ಇರುತ್ತದೆ. ಇದು ಸತ್ಯ ಏಕೆಂದರೆ, ಅವನಿಗೆ ಹೊಸ ಪುನರುಜ್ಜೀವನಗೊಂಡ ಆತ್ಮವನ್ನು ನೀಡಲಾಗಿದೆ ಎಂಬ ಸತ್ಯದ ಜೊತೆಗೆ, ಮುಕ್ತಿಯ ಗಳಿಗೆಯಲ್ಲಿ ಆ ವ್ಯಕ್ತಿಯ ವ್ಯಕ್ತಿತ್ವದಲ್ಲಿ ಇನ್ನೊಂದು ಅದ್ಭುತ ಘಟನೆ ನಡೆದಿದೆ, ಅಂದರೆ, ಪವಿತ್ರಾತ್ಮನಾದ ದೇವರು ಆ ವ್ಯಕ್ತಿಯ ಬದುಕಿನಲ್ಲಿ ವಾಸಿಸಲು ಪ್ರಾರಂಭಿಸಿದ್ದಾರೆ. ನಾವು ದೇವರ ಆತ್ಮವನ್ನು ಹೊಂದಿರದಿದ್ದರೆ, ನಾವು "ಕ್ರಿಸ್ತನವರಲ್ಲ" ಎಂದು ರೋಮಾಪುರದವರ 8:9ರಲ್ಲಿ ಹೇಳಲಾಗಿದೆ.

ಸರ್ವಶಕ್ತನಾದ ದೇವರು ಸಂಚಯಿತನಾದ ವ್ಯಕ್ತಿಯ ಬದುಕಿನಲ್ಲಿ ಹೇಗೆ ವಾಸವಾಗಿರಲು ಸಾಧ್ಯ ಎಂಬುದು ನಮಗೆ ಅರ್ಥವಾಗುವುದಿಲ್ಲ. ಅದು ನಮಗೆ ಸಂಪೂರ್ಣವಾಗಿ ಒಂದು ರಹಸ್ಯವೆಂದು ನಾವು ಒಪ್ಪಿಕೊಳ್ಳಬೇಕು. ಆದರೆ, ನಾವು ಬೈಬಲ್ ಅನ್ನು ಸಂಪೂರ್ಣವಾಗಿ ವಿಶ್ವಾಸ ಮಾಡುವುದರಿಂದ, ಅದು ಸತ್ಯವೆಂದು, ಅದು ರಹಸ್ಯಮಯವಾದುದು ಮತ್ತು ನಿಜವಾದುದು ಎಂದು ನಮಗೆ ತಿಳಿದಿದೆ. ಸಂಚಯಿತನಾದ ವ್ಯಕ್ತಿಯ ಬದುಕಿನ ಮತ್ತು ವ್ಯಕ್ತಿತ್ವದೊಳಗೆ ಸ್ವಯಂ ದೇವರ ವಾಸ ಅವನನ್ನು ದೇವರಿಗೆ ವಿಧೇಯನಾಗಿರಲು ಇನ್ನೂ ಹೆಚ್ಚು ಉತ್ತೇಜಿಸುತ್ತದೆ, ಮತ್ತು ದೇವರಿಗೆ ಪ್ರಿಯವಾದುದನ್ನು ಮಾತ್ರ ಅವನು ಬಯಸುತ್ತಾನೆ.

*ಸಂಚಯಿತನಾದ ವ್ಯಕ್ತಿಯನ್ನು ಸೈತಾನನ ರಾಜ್ಯದಿಂದ ಹೊರತೆಗೆಯಲಾಗಿದೆ ಮತ್ತು ಅವನು ಕ್ರಿಸ್ತರ ರಾಜ್ಯದ ಶಾಶ್ವತ ಪ್ರಜೆಯಾಗಿದ್ದಾನೆ.*

ಮೇಲಾಗಿ, ಸಂಚಯಿತನಾದ ವ್ಯಕ್ತಿಯನ್ನು ಸೈತಾನನ ರಾಜ್ಯದಿಂದ ಹೊರತೆಗೆಯಲಾಗಿದೆ ಮತ್ತು ಅವನು ದೇವರ ರಾಜ್ಯದ ಶಾಶ್ವತ ಪ್ರಜೆಯಾಗಿದ್ದಾನೆ. ಇದರ ಬಗ್ಗೆ ದೇವರು ಕೊಲೊಸ್ಸೆಯವರ 1:12-13ರಲ್ಲಿ ನಮಗೆ ಹೀಗೆಂದು ಹೇಳುತ್ತಾರೆ:

**ಬೆಳಕಿನ ರಾಜ್ಯದೊಳಗೆ ದೇವಜನರ ಬಾಧ್ಯತೆಯಲ್ಲಿ ಪಾಲುಗಾರರಾಗುವದಕ್ಕೆ ನಿಮ್ಮನ್ನು ಯೋಗ್ಯರನ್ನಾಗಿ ಮಾಡಿದ ತಂದೆಗೆ ಕೃತಜ್ಞತಾಸ್ತುತಿ ಮಾಡುವವರಾಗಿರಬೇಕೆಂತಲೂ ದೇವರನ್ನು ಬೇಡಿಕೊಳ್ಳುತ್ತೇವೆ. ದೇವರು ನಮ್ಮನ್ನು ಅಂಧಕಾರದ ದೊರೆತನದಿಂದ ಬಿಡಿಸಿ ತನ್ನ ಪ್ರಿಯ ಕುಮಾರನ ರಾಜ್ಯದೊಳಗೆ ಸೇರಿಸಿದನು.**

ಫಿಲಿಪ್ಪಿಯವರ 3:20ರಲ್ಲಿ, "ನಾವಾದರೂ ಪರಲೋಕಸಂಸ್ಥಾನದವರು" ಎಂಬುವುದನ್ನು"ಪೌರತ್ವ" ಎಂದು ಭಾಷಾಂತರ ಮಾಡಬಹುದು. ಅಂದರೆ ನಮ್ಮ ಪೌರತ್ವ ಸ್ವರ್ಗದಲ್ಲಿದೆ. ಸಂಚಯಿತನಾಗುವ ಪ್ರತಿಯೊಬ್ಬ ವ್ಯಕ್ತಿಗೆ ಇದು ಸತ್ಯ.

***ಸಂಚಯಿತನಾದ ವ್ಯಕ್ತಿಯ ಆಸೆಗಳು***

ಮುಕ್ತಿಯ ಗಳಿಗೆಯಲ್ಲಿ, ನಂಬಿಕೆಯುಳ್ಳವನ ಬದುಕಿನಲ್ಲಿ ಅನೇಕ ಅಂಶಗಳು ಕೆಲಸ ಮಾಡುತ್ತಿರುತ್ತವೆ ಮತ್ತು ಅವನ ನಡವಳಿಕೆಯಲ್ಲಿ ಮತ್ತು ಆಸೆಗಳಲ್ಲಿ ಒಂದು ನಿಶ್ಚಿತವಾದ ಮತ್ತು ಮುಖ್ಯವಾದ ಬದಲಾವಣೆಯನ್ನು ತರುವುದಕ್ಕೆ ಕಾರಣವಾಗುತ್ತವೆ. ಕೀರ್ತನೆಗಳು 119 ಮತ್ತು ಬೈಬಲ್ ನ ಬೇರೆಡೆ ಕಾಣಸಿಗುವ ಹೇಳಿಕೆಗಳನ್ನು ಅವನು ಅರ್ಥಮಾಡಿಕೊಳ್ಳುತ್ತಾನೆ ಮತ್ತು ಅವುಗಳೊಂದಿಗೆ ಅವನು ತನ್ನನ್ನು ತಾನು ಗುರುತಿಸಿಕೊಳ್ಳುತ್ತಾನೆ.

ಬೈಬಲ್ ನ ಪ್ರತಿ ನಿಜವಾದ ನಂಬಿಕೆಯುಳ್ಳವನ ಪ್ರೀತಿ ಮತ್ತು ಗೌರವವನ್ನು ಪ್ರದರ್ಶಿಸುವ ಕೀರ್ತನೆಗಳು 119ರಲ್ಲಿ ಕಾಣಸಿಗುವ ಸುಂದರ ಭಾಷೆಯ ಕೆಲವು ನಿದರ್ಶನಗಳು ಕೆಳಗಿವೆ:

ಶ್ಲೋಕ 10: **ನಾನು ಪೂರ್ಣ ಮನಸ್ಸಿನಿಂದ ನಿನ್ನನ್ನು ಹುಡುಕುತ್ತೇನೆ; ನಿನ್ನ ಆಜ್ಞೆಗಳಿಗೆ ತಪ್ಪಿಹೋಗದಂತೆ ನನ್ನನ್ನು ಕಾಯಿ.**

ಶ್ಲೋಕ 11: **ನಿನಗೆ ವಿರೋಧವಾಗಿ ಪಾಪಮಾಡದಂತೆ ನಿನ್ನ ನುಡಿಗಳನ್ನು ನನ್ನ ಹೃದಯದಲ್ಲಿಟ್ಟುಕೊಂಡಿದ್ದೇನೆ.**

ಶ್ಲೋಕ 16: ನಿನ್ನ ನಿಬಂಧನೆಗಳಲ್ಲಿ ಉಲ್ಲಾಸಪಡುವೆನು; ನಿನ್ನ ವಾಕ್ಯವನ್ನು ಮರೆಯುವುದಿಲ್ಲ.

ಶ್ಲೋಕ 24: ನಿನ್ನ ಕಟ್ಟಳೆಗಳು ನನ್ನ ಆನಂದವು, ಅವೇ ನನ್ನ ಮಂತ್ರಾಲೋಚಕರು.

ಶ್ಲೋಕ 47: ನಿನ್ನ ಆಜ್ಞೆಗಳಲ್ಲಿ ಆನಂದಪಡುತ್ತೇನೆ; ಅವು ನನಗೆ ಇಷ್ಟವಾಗಿವೆ.

ಶ್ಲೋಕ 77: ನಾನು ಬದುಕುವಂತೆ ನಿನ್ನ ಕರುಣೆಯು ನನಗೆ ದೊರೆಯಲಿ; ನಿನ್ನ ಧರ್ಮಶಾಸ್ತ್ರವೇ ನನ್ನ ಆನಂದವಾಗಿದೆ.

ಶ್ಲೋಕ 97: ನಿನ್ನ ಧರ್ಮಶಾಸ್ತ್ರವು ನನಗೆ ಎಷ್ಟೋ ಪ್ರಿಯವಾಗಿದೆ; ದಿನವೆಲ್ಲಾ ಅದೇ ನನ್ನ ಧ್ಯಾನ.

ಇಂತಹ ಹೇಳಿಕೆಗಳು ಬೈಬಲ್ ನಾದ್ಯಂತ ಕಾಣಸಿಗುತ್ತವೆ. ನಿಜವಾಗಿಯೂ ಸಂಚಯಿತನಾದ ಯಾರೇ ಆಗಲಿ, ಇಂತಹ ಬಯಕೆಗಳನ್ನು ಮತ್ತು ಪ್ರೇರಣೆಗಳನ್ನು ಅವನ ಬದುಕಿನಲ್ಲಿ ಹೆಚ್ಚು ಹೆಚ್ಚಾಗಿ ಅನುಭವಿಸುತ್ತಾನೆ. ಹೀಗೆ, ಒಂದನೆ ಯೋಹಾನನ 2:3-5ರಲ್ಲಿ ಹೇಳಲಾಗಿರುವ ಸತ್ಯವನ್ನು ಅವನು ಅರಿತುಕೊಂಡು ಅದರೊಂದಿಗೆ ಅವನು ಗುರುತಿಸಿಕೊಳ್ಳುತ್ತಾನೆ. ಅಲ್ಲಿ ನಾವು ಓದುವುದೇನೆಂದರೆ:

**ನಾವು ಆತನ ಆಜ್ಞೆಗಳನ್ನು ಕೈಕೊಂಡು ನಡೆದರೆ ಅದರಿಂದಲೇ ಆತನನ್ನು ಬಲ್ಲವರಾಗಿದ್ದೇವೆಂದು ತಿಳಿಕೊಳ್ಳುತ್ತೇವೆ. ಆತನನ್ನು ಬಲ್ಲೆನೆಂದು ಹೇಳಿ ಆತನ ಆಜ್ಞೆಗಳನ್ನು ಕೈಕೊಳ್ಳದೆ ನಡೆಯುವವನು ಸುಳ್ಳುಗಾರನಾಗಿದ್ದಾನೆ; ಸತ್ಯವೆಂಬದು ಅವನಲ್ಲಿ ಇಲ್ಲ. ಯಾವನಾದರೂ ಆತನ ವಾಕ್ಯವನ್ನು ಕೈಕೊಂಡು ನಡೆದರೆ ಅವನಲ್ಲಿ ನಿಜವಾಗಿ ದೇವರ ಮೇಲಣ ಪ್ರೀತಿಯು ಪರಿಪೂರ್ಣವಾಗಿದೆ. ಇದರಿಂದಲೇ ಆತನಲ್ಲಿದ್ದೇವೆಂಬದನ್ನು ತಿಳುಕೊಳ್ಳುತ್ತೇವೆ.**

ದೇವರ ಆಜ್ಞೆಗಳು ಸಂಪೂರ್ಣ ಬೈಬಲ್ ಅನ್ನು ಒಳಗೊಂಡಿವೆ ಎಂಬುದು ನಿಜವಾದ ನಂಬಿಕೆಯುಳ್ಳವನಿಗೆ ತಿಳಿದಿದೆ. ತನ್ನ ದೇಹದ ಕಾಮಾಸಕ್ತಿಯುಳ್ಳ ಬಯಕೆಗಳು ತಾನು ಪಾಪ ಮಾಡಲು ಕಾರಣವಾಗಲು ಈಡುಮಾಡಿದಾಗ, ತನಗಾಗುವ ಅತಿ ಅಸಹ್ಯವಾದ ಭಾವನೆ ಕೂಡ ಅವನಿಗೆ ತಿಳಿದಿದೆ. ಘೋರ ಪಾಪಕ್ಕೆ ತುತ್ತಾದ ನಿಜವಾದ ದೇವಜನನಾದ ದಾವೀದನೊಂದಿಗೆ ಅವನು ತಾದಾತ್ಮ್ಯತೆಯ ಅನುಭವವನ್ನು ಪಡೆಯುತ್ತಾನೆ. ಮತ್ತೆ ದಾವೀದನು, ಪವಿತ್ರಾತ್ಮನ ಪ್ರೇರಣೆಯಲ್ಲಿ, ತನ್ನ ಹೃತ್ಪೂರ್ವಕವಾದ ಪರಿತಾಪವನ್ನು ದಾಖಲಿಸುತ್ತಾನೆ, ಅದರ ಬಗ್ಗೆ ನಾವು ಕೀರ್ತನೆಗಳು 51ರಲ್ಲಿ ಓದುತ್ತೇವೆ.

***ಭಯ ಮತ್ತು ನಡುಕ***

ನಿಜವಾಗಿಯೂ ಸಂಚಯಿತನಾದ ವ್ಯಕ್ತಿಯ ಗುಣದ ಒಂದು ಮುಖವೆಂದರೆ ದೇವರ ಪವಿತ್ರತೆಯನ್ನು ಮತ್ತು ನೈತಿಕತೆಯನ್ನು ಮತ್ತು ದೇವರು ಸಂಪೂರ್ಣ ಜಗತ್ತಿನ ನ್ಯಾಯನಿಷ್ಠ ನ್ಯಾಯಾಧೀಶ ಎಂದು ಅವನು ಗುರುತಿಸುವುದು. ಫಿಲಿಪ್ಪಿಯವರ 2:12ರಲ್ಲಿ ದೇವರು ಹೀಗೆಂದು ಘೋಷಿಸುತ್ತಾರೆ:

**. . . ಮನೋಭೀತಿಯಿಂದ ನಡುಗುವವರಾಗಿ ನಿಮ್ಮ ನಿಮ್ಮ ರಕ್ಷಣೆಯನ್ನು ಸಾಧಿಸಿಕೊಳ್ಳಿರಿ.**

ನಂಬಿಕೆಯುಳ್ಳವನು ತನ್ನ ಬದುಕಿನಲ್ಲಿ "ಸಾಧಿಸ"ಬೇಕಾದ ಮುಕ್ತಿ ಯಾವುದೆಂದರೆ, ದೇವರು ಅವನಿಗೆ ನೀಡಿರುವ ಮುಕ್ತಿ. ಆದರೆ, ಎರಡನೆ ಪೇತ್ರನು 3:18ರಲ್ಲಿ ಹೇಳಿರುವಂತೆ, ಅವನು ಕೃಪೆಯಲ್ಲಿ ಮುಂದುವರಿದಂತೆ, ಅಂದರೆ, ಅವನು ಹೆಚ್ಚು ಹೆಚ್ಚಾಗಿ ದೇವರ ಭವ್ಯತೆಗೆ ತಕ್ಕಂತೆ ಬದುಕಿದಾಗ ಮತ್ತು ತನ್ನ ಸಂಚಯಿತವಾಗದ ದೇಹದ ಪಾಪಿಷ್ಠ ಬಯಕೆಗಳನ್ನು ಅನುಸರಿಸುವುದರಿಂದ ದೂರಸರಿದು ಬದುಕಿದಾಗ, ಅವನು ಭಯ ಮತ್ತು ನಡುಕದಿಂದ ಬದುಕುತ್ತಾನೆ.

*ಆದರೂ ಇನ್ನೂ ದೇವರ ಎದುರು ಭಯದಿಂದ ನಡುಗಿದರೆ, ಅದು ಸಂಚಯಿತನಾದ ವ್ಯಕ್ತಿಗೆ ನೀಡಲಾಗಿರುವ ಅದ್ಭುತವಾದ ಸುರಕ್ಷೆಗೆ ಸಂಪೂರ್ಣವಾಗಿ ವಿರುದ್ಧವಾಗಿ ಕಾಣಬಹುದು.*

ಇದೊಂದು ಆಶ್ಚರ್ಯಕರ ಹೇಳಿಕೆ, ಏಕೆಂದರೆ, ನಮ್ಮ ಮುಕ್ತಿಯ ಪರಿಣಾಮವಾಗಿ ದೇವರ ಬಗ್ಗೆ ಇರುವ ಎಲ್ಲ ಭಯವನ್ನು ತೆಗೆಯಲಾಗುವುದು ಎಂದು ನಾವು ನಿರೀಕ್ಷಿಸುತ್ತೇವೆ. ಆದರೆ, ಇನ್ನೂ ದೇವರ ಎದುರು ಭಯದಿಂದ ನಡುಗಿದರೆ, ಅದು ಸಂಚಯಿತನಾದ ಮನುಷ್ಯನಿಗೆ ನೀಡಲಾಗಿರುವ ಅದ್ಭುತ ಸುರಕ್ಷೆಗೆ ಸಂಪೂರ್ಣವಾಗಿ ವಿರುದ್ಧವಾಗಿ ಕಾಣಬಹುದು, ಉದಾಹರಣೆಗೆ, ಕ್ರಿಸ್ತರು ತನ್ನ ಎಲ್ಲಾ ಪಾಪಗಳಿಗೆ ಬೆಲೆ ತೆತ್ತಿದ್ದಾರೆ ಎಂದು ಅವನಿಗೆ ತಿಳಿದಿದೆ ಮತ್ತು ಸಂಪೂರ್ಣ ವಿನಾಶದ ಸಾಧ್ಯತೆಯೊಂದಿಗೆ ತನ್ನನ್ನು ಎಂದೂ ಬೆದರಿಸಲು ಸಾಧ್ಯವಿಲ್ಲ ಎಂದು ಅವನಿಗೆ ತಿಳಿದಿದೆ.

ಆದರೆ, ಪವಿತ್ರಾತ್ಮ ಸಂಚಯಿತನಾದ ವ್ಯಕ್ತಿಯಲ್ಲಿ ವಾಸವಾಗಿದೆ ಎಂಬುದನ್ನು ನಾವು ನೆನಪಿನಲ್ಲಿಟ್ಟುಕೊಳ್ಳಬೇಕು. ಮತ್ತು ನಿಜವಾದ ನಂಬಿಕೆಯುಳ್ಳವನು ಬೈಬಲ್ ಬೋಧಿಸುವುದನ್ನೆಲ್ಲಾ ಹೆಚ್ಚು ಹೆಚ್ಚಾಗಿ ಪ್ರೀತಿಸಲು ಮತ್ತು ಗೌರವಿಸಲು ಪ್ರಾರಂಭಿಸಿದ್ದಾನೆ. ಆದ್ದರಿಂದ, ಅವನು ಕಲಿತು ದೇವರ ಮಹಾತ್ಮೆಯ ಬಗ್ಗೆ ಹೆಚ್ಚು ಅರಿವು ಉಳ್ಳವನಾಗುತ್ತಾನೆ. ಮಾತನಾಡಿ ಈ ಪ್ರಚಂಡ ವಿಶ್ವವನ್ನು ಅಸ್ತಿತ್ವಕ್ಕೆ ತಂದ ಸರ್ವಶಕ್ತ ದೇವರೇ ಆ ದೇವರು ಎಂದು ಅವನಿಗೆ ತಿಳಿದಿದೆ. ಪ್ರತಿಯೊಬ್ಬ ಮನುಷ್ಯನಲ್ಲಿರುವ ಅತಿ ಚಿಕ್ಕ

ಪಾಪದ ಬಗ್ಗೆಯೂ ಅರಿವಿರುವ ಸರ್ವಶಕ್ತ ನ್ಯಾಯಾಧೀಶರೆ ದೇವರು ಎಂದು ಅವನಿಗೆ ತಿಳಿದಿದೆ. ದೇವರು ಎಷ್ಟು ನ್ಯಾಯನಿಷ್ಠರೆಂದರೆ, ಒಂದು ಅತಿ ಚಿಕ್ಕ ಪಾಪವೂ ಒಬ್ಬ ವ್ಯಕ್ತಿಯನ್ನು ನಿರಂತರ ನರಕಯಾತನೆಗೆ ಗುರಿಯಾಗುವಂತೆ ಮಾಡಲು ಸಾಕಾಗುತ್ತದೆ ಎಂದು ಅವನಿಗೆ ತಿಳಿದಿದೆ. ಅವನು ಸಂಚಯಿತನಾಗುವುದಕ್ಕೆ ಮುಂಚೆ ಇದ್ದದ್ದಕ್ಕಿಂತ ಹೆಚ್ಚು ಪರಿಣಾಮಕಾರಿಯಾಗಿ ದೇವರ ನಿಯಮಗಳಿಗೆ ಈಗ ಹೆಚ್ಚು ವಿಧೇಯನಾಗಿದ್ದರೂ, ತನ್ನಲ್ಲಿ ಇನ್ನೂ ಪಾಪಗಳಿವೆ ಎಂದು ನಿಜವಾದ ನಂಬಿಕೆಯುಳ್ಳವನಿಗೆ ಅರಿವುಂಟು. ದೇವರ ಕರುಣೆ ಮತ್ತು ಕೃಪೆಯ ಹೊರತು ಅವನು ವಿನಾಶಕ್ಕೆ ಅರ್ಹನು ಎಂಬ ಸತ್ಯದ ಬಗ್ಗೆ ಅವನಿಗೆ ಸಂಪೂರ್ಣ ಅರಿವಿದೆ.

ಒಂದೆಡೆ, ಬೈಬಲ್ ನಲ್ಲಿ ತನ್ನ ಗಾಢವಾದ ಪ್ರೀತಿ ಮತ್ತು ವಿಶ್ವಾಸದ ಕಾರಣ, ತಾನು ಕ್ರಿಸ್ತರಲ್ಲಿ ನಿರಂತರವಾಗಿ ಸುರಕ್ಷಿತವಾಗಿರುವುದಾಗಿ ನಿಜವಾದ ನಂಬಿಕೆಯುಳ್ಳವನಿಗೆ ಹೆಚ್ಚು ಹೆಚ್ಚಾಗಿ ತಿಳಿದಿದೆ, ಮತ್ತು ತನಗೆ ಎಂದೂ ವಿನಾಶದ ಬೆದರಿಕೆ ನೀಡಲು ಸಾಧ್ಯವಿಲ್ಲ ಎಂದು ಅವನಿಗೆ ತಿಳಿದಿದೆ. ತನ್ನ ಎಲ್ಲಾ ಪಾಪಗಳಿಗೆ ಕ್ರಿಸ್ತರು ಬೆಲೆ ತೆತ್ತಿದ್ದಾರೆ ಎಂದು ಅವನಿಗೆ ತಿಳಿದಿದೆ. ಇನ್ನೊಂದೆಡೆ, ಬೈಬಲ್ ನ ಬೋಧನೆಗಳೊಂದಿಗೆ ಅವನು ಹೆಚ್ಚು ಹೆಚ್ಚಾಗಿ ಪರಿಚಿತನಾದಂತೆ, ತನ್ನ ಪಾಪಗಳ ದಂಡವಾಗಿ ದೇವರ ಭೀಕರ ಕಡುಕೋಪಕ್ಕೆ ತಾನು ಅರ್ಹನು ಎಂದು ಅವನಿಗೆ ಹೆಚ್ಚು ಹೆಚ್ಚಾಗಿ ಅರಿವಾಗುತ್ತದೆ. ದೇವರ ಕರುಣೆ ಮತ್ತು ಕೃಪೆಯ ಕಾರಣ ಮಾತ್ರ ತನ್ನ ಮುಕ್ತಿ ಸಾಧ್ಯವಾಯಿತು ಎಂದು ಅವನಿಗೆ ತಿಳಿದಿದೆ. ಆದ್ದರಿಂದ, ಅವನು ದೇವರ ಎದುರು ಭಯದಿಂದ ಮತ್ತು ಭಯಭಕ್ತಿಯಿಂದ ನಡುಗುತ್ತಾನೆ. ತನ್ನ ಮುಕ್ತಿಗೆ ತಾನು ಸಂಪೂರ್ಣವಾಗಿ ಅನರ್ಹ ಎಂಬ ಸತ್ಯವನ್ನು ಅವನು ಗುರುತಿಸುತ್ತಾನೆ.

ಆದುದರಿಂದಲೆ, ನಿಜವಾಗಿಯೂ ಸಂಚಯಿತನಾದ ವ್ಯಕ್ತಿ ದೇವರಿಗೆ ಭಯಪಡುತ್ತಾನೆ, ಉದಾಹರಣೆಗೆ, ಈ ಕೆಳಗಿನ ಶ್ಲೋಕಗಳಲ್ಲಿ ನಾವು ಅದನ್ನೆ ಓದುತ್ತೇವೆ:

ಕೀರ್ತನೆಗಳು 34:9: **ಯೆಹೋವನ ಜನರೇ, ಆತನಲ್ಲಿ ಭಯಭಕ್ತಿಯುಳ್ಳವರಾಗಿ; ಆತನಲ್ಲಿ ಭಯಭಕ್ತಿಯುಳ್ಳವರಿಗೆ ಯಾವ ಕೊರತೆಯೂ ಇರುವದಿಲ್ಲ.**

ಕೀರ್ತನೆಗಳು 112:1: **ಯಾಹುವಿಗೆ ಸ್ತೋತ್ರ! ಯಾವನು ಯೆಹೋವನಲ್ಲಿ ಭಯಭಕ್ತಿಯುಳ್ಳವನಾಗಿ ಆತನ ಆಜ್ಞೆಗಳಲ್ಲಿ ಅತ್ಯಾನಂದಪಡುವನೋ ಅವನೇ ಧನ್ಯನು.**

ಜ್ಞಾನೋಕ್ತಿಗಳು 3:7: **ನೀನೇ ಬುದ್ಧಿವಂತನು ಎಂದೆಣಿಸದೆ ಯೆಹೋವನಿಗೆ ಭಯಪಟ್ಟು ಕೆಟ್ಟದ್ದನ್ನು ತೊರೆದುಬಿಡಿ.**

ದೇವರ ಪದವನ್ನು ಆಲಿಸುತ್ತಿಲ್ಲದವರು ದೇವರಿಗೆ ಭಯಪಡುವುದಿಲ್ಲ ಎಂಬ ಸತ್ಯವನ್ನು ಕೂಡ ಈ ತತ್ವ ಒತ್ತಿ ಹೇಳುತ್ತದೆ. ಈ ಕೆಳಗಿನ ಭಾಗಗಳಲ್ಲಿ ಬೈಬಲ್ ಇದನ್ನು ಘೋಷಿಸುತ್ತದೆ:

ಯೆರೆಮೀಯ 44:9-10: **ನಿಮ್ಮ ಪಿತೃಗಳು, ಯೆಹೂದದ ಅರಸರು, ಅವರ ಹೆಂಡಿರು, ನೀವು, ನಿಮ್ಮ ಹೆಂಡಿರು, ಇವರೆಲ್ಲರೂ ಯೆಹೂದದೇಶದಲ್ಲಿಯೂ ಯೆರೂಸಲೇಮಿನ ಬೀದಿಗಳಲ್ಲಿಯೂ ನಡಿಸಿದ ದುರಾಚಾರಗಳನ್ನು ಮರೆತುಬಿಟ್ಟಿರೋ? ಅವರು ಇಂದಿನವರೆಗೂ ತಗ್ಗಲಿಲ್ಲ, ನನಗೆ ಭಯಪಡಲಿಲ್ಲ; ನಾನು ನಿಮಗೂ ನಿಮ್ಮ ಪಿತೃಗಳಿಗೂ ನೇಮಿಸಿದ ನಿಯಮನಿಷ್ಠೆಗಳನ್ನು ಅನುಸರಿಸಿ ನಡೆಯಲೂ ಇಲ್ಲ.**

ಯೆರೆಮೀಯ 5:24-25: **ಮುಂಗಾರು, ಹಿಂಗಾರು ಅಂತು ಸಕಾಲದ ಮಳೆಯನ್ನು ದಯಪಾಲಿಸಿ ಸುಗ್ಗಿಯ ಕ್ಲುಪ್ತವಾರಗಳನ್ನು ನಮಗಾಗಿ ಪ್ರತ್ಯೇಕ ಪಡಿಸುವ ನಮ್ಮ ದೇವರಾದ ಯೆಹೋವನಲ್ಲಿ ಭಯಭಕ್ತಿಯಿಡೋಣ ಎಂದು ಮನದಲ್ಲಿ ಅಂದುಕೊಳ್ಳುವುದಿಲ್ಲ. ನಿಮ್ಮ ಅಪರಾಧಗಳು ಇವುಗಳನ್ನು ತಪ್ಪಿಸಿಬಿಟ್ಟಿವೆ, ನಿಮ್ಮ ಪಾಪಗಳು ನಿಮಗೆ ಮೇಲನ್ನು ತಡೆದಿವೆ.**

ಯೆಶಾಯ 57:11-12: **ನೀನು ಯಾರಿಗೆ ಬೆದರಿ ಹೆದರಿದ್ದರಿಂದ ನನ್ನನ್ನು ಮರೆತು ನನಗೆ ಮೋಸಮಾಡಿದಿ? ಈ ದ್ರೋಹಕ್ಕೂ ಹಿಂದೆಗೆಯಲಿಲ್ಲವಲ್ಲಾ! ನೀನು ನನಗೆ ಅಂಜದೆ ಇರುವದಕ್ಕೆ ನಾನು ಬಹುಕಾಲದಿಂದ ಸುಮ್ಮನೆ ಇದ್ದದ್ದೇ ಕಾರಣವಲ್ಲವೆ. ನಾನು ನಿನ್ನ ಧರ್ಮವನ್ನು ಬೈಲಿಗೆ ತರುವೆನು, ನಿನ್ನ ಕಾರ್ಯಗಳೇನೋ ನಿನಗೆ ನಿಷ್ಪ್ರಯೋಜನ.**

ಪ್ರಸಂಗಿ 8:13: **ಆದರೆ ದುಷ್ಟನಿಗೆ ಮೇಲಾಗದು, ನೆರಳಿನಂತಿರುವ ಅವನ ದಿನಗಳು ಹೆಚ್ಚುವದಿಲ್ಲ; ಅವನು ದೇವರಿಗೆ ಹೆದರುವವನಲ್ಲವಷ್ಟೆ.**

***ಆದರೆ ಪರಿಪೂರ್ಣ ಪ್ರೀತಿ ಭಯವನ್ನು ಹೊರಹಾಕುತ್ತದೆ***

ಪರಿಪೂರ್ಣ ಪ್ರೀತಿ ಭಯವನ್ನು ಹೊರಹಾಕುತ್ತದೆ ಎಂದು ಬೈಬಲ್ ಬೋಧಿಸುತ್ತದೆ ಎಂಬುದು ಸತ್ಯ. ಒಂದನೆ ಯೋಹಾನನ 4:18ರಲ್ಲಿ ನಾವು ಹೀಗೆಂದು ಓದುತ್ತೇವೆ:

**ಪ್ರೀತಿಯು ಇರುವಲ್ಲಿ ಹೆದರಿಕೆಯಿಲ್ಲ. ಹೆದರಿಕೆಯು ಯಾತನೆಯನ್ನು ಹೊಂದುತ್ತಾ ಇರುವದು; ಪೂರ್ಣಪ್ರೀತಿಯು ಹೆದರಿಕೆಯನ್ನು ಹೊರಡಿಸಿಬಿಡುತ್ತದೆ. ಹೆದರುವವನು ಪ್ರೀತಿಯಲ್ಲಿ ಸಿದ್ಧಿಗೆ ಬಂದವನಲ್ಲ.**

ನಿಜವಾದ ನಂಬಿಕೆಯುಳ್ಳವನು ಕ್ರಿಸ್ತರ ಪರಿಪೂರ್ಣ ಪ್ರೀತಿಯನ್ನು ಅನುಭವಿಸಿರುವುದರಿಂದ, ಅವನು ಇನ್ನು ಹೆದರಬಾರದು ಎಂದು ನಾವು ತೀರ್ಮಾನಿಸಬಹುದು. ನಿಜ, ಒಂದು

ಅರ್ಥದಲ್ಲಿ, ಈ ಶ್ಲೋಕದಲ್ಲಿ "ಹೆದರಿಕೆ" ಎಂಬ ಪದ ಶಾಶ್ವತ ವಿನಾಶದ ಹೆದರಿಕೆಯ ಬಗ್ಗೆ ಪ್ರಸ್ತಾಪಿಸುತ್ತಿದೆ ಎಂದು ನಾವು ಅರ್ಥಮಾಡಿಕೊಳ್ಳಬಹುದು. ನಿಜವಾದ ನಂಬಿಕೆಯುಳ್ಳವನಿಗೆ ದೇವರ ಪರಿಪೂರ್ಣ ಪ್ರೀತಿ ಈ ಹೆದರಿಕೆಯನ್ನು ದೂರಮಾಡುತ್ತದೆ. ಮುಕ್ತಿಯ ದೊಡ್ಡ ಆಶ್ವಾಸನೆ ಎಂದರೆ, ಕ್ರಿಸ್ತರಲ್ಲಿ ನಿರಂತರ ಸುರಕ್ಷೆ.

ಆದರೆ, ನಂಬಿಕೆಯುಳ್ಳವನ ಒಂದು ಗುಣವೆಂದರೆ ಅವನು ದೇವರಿಗೆ ಹೆದರುತ್ತಾನೆ ಎಂದು ಅಪೋಸ್ತಲರ ಕೃತ್ಯಗಳು 9:31, ಫಿಲಿಪ್ಪಿಯವರಿಗೆ 2:12, ಒಂದನೆ ಪೇತ್ರನ 2:17, ಜ್ಞಾನೋಕ್ತಿಗಳು 1:7, ಪ್ರಸಂಗಿ 8:12-13 ಶ್ಲೋಕಗಳಲ್ಲಿ ಹೇಳಿರುವುದನ್ನು ನಾವು ಗಣನೆಗೆ ತೆಗೆದುಕೊಳ್ಳಬೇಕು. ಪರಿಪೂರ್ಣ ಪ್ರೀತಿ ಭಯವನ್ನು ತೆಗೆದುಹಾಕುತ್ತದೆ ಎಂದು ಬೋಧಿಸುವ ಒಂದನೆ ಯೋಹಾನನ 4:18ನ್ನು ನಾವು ಹೇಗೆ ಅರ್ಥಮಾಡಿಕೊಳ್ಳಬೇಕು? ಬೈಬಲ್ ನ ಪ್ರಕಾರ ಪ್ರೀತಿಯ ಅರ್ಥನಿರೂಪಣೆಯನ್ನು ನಾವು ತಿಳಿದಾಗ ಪರಿಹಾರ ಸಿಗುತ್ತದೆ. ಯೋಹಾನ 14:21ರಲ್ಲಿ ನಾವು ಓದುವುದೇನೆಂದರೆ:

**ನನ್ನ ಆಜ್ಞೆಗಳನ್ನು ಹೊಂದಿ ಅವುಗಳನ್ನು ಕೈಕೊಂಡು ನಡೆಯುವವನೇ ನನ್ನನ್ನು ಪ್ರೀತಿಸುವವನು. ನನ್ನನ್ನು ಪ್ರೀತಿಸುವವನು ನನ್ನ ತಂದೆಗೆ ಪ್ರಿಯನಾಗಿರುವನು; ನಾನೂ ಅವನನ್ನು ಪ್ರೀತಿಸಿ ಅವನಿಗೆ ಕಾಣಿಸಿಕೊಳ್ಳುವೆನು ಎಂದು ಹೇಳಿದನು.**

ದೇವರ ಈ ನಿಯಮವನ್ನು ಯೋಹಾನ 14:23ರಲ್ಲಿ ಪುನರುಚ್ಚರಿಸಲಾಗಿದೆ, ಅಲ್ಲಿ ನಾವು ಓದುವುದೇನೆಂದರೆ:

**ಯೇಸು ಅವನಿಗೆ - ಯಾರಾದರೂ ನನ್ನನ್ನು ಪ್ರೀತಿಸುವವನಾದರೆ ನನ್ನ ಮಾತನ್ನು ಕೈಕೊಂಡು ನಡೆಯುವನು; ಅವನನ್ನು ನನ್ನ ತಂದೆಯು ಪ್ರೀತಿಸುವನು, ಮತ್ತು ನಾವಿಬ್ಬರೂ ಅವನ ಬಳಿಗೆ ಬಂದು ಅವನ ಬಳಿಯಲ್ಲಿ ಬಿಡಾರವನ್ನು ಮಾಡಿಕೊಳ್ಳುವೆವು.**

ಬೇರೆ ಮಾತಿನಲ್ಲಿ ಹೇಳುವುದಾದರೆ, ದೇವರ ಆಜ್ಞೆಗಳಾದ ಬೈಬಲ್ ಗೆ ಸಂಪೂರ್ಣ ವಿಧೇಯತೆಯೊಂದಿಗೆ ಪ್ರೀತಿಯನ್ನು ಗುರುತಿಸಲಾಗಿದೆ. ಒಬ್ಬ ವ್ಯಕ್ತಿ ಕ್ರಿಸ್ತರ ಮೇಲೆ ತನ್ನ ಪ್ರೀತಿಯನ್ನು ಮನಗಾಣಿಸುವಂತೆ ಪ್ರಕಟಪಡಿಸಲು ಎಷ್ಟೇ ಪ್ರಯತ್ನಿಸಿದರೂ, ಅದನ್ನು ಲೆಕ್ಕಿಸದೆ, ಅವನ ಪ್ರೀತಿಗೆ ಅಗ್ನಿಪರೀಕ್ಷೆ ಅಥವ ನಿಜವಾದ ಪರೀಕ್ಷೆ ಎಂದರೆ ದೇವರ ನಿಯಮದ ಪುಸ್ತಕವಾದ ಬೈಬಲ್ ಗೆ ಅವನ ವಿಧೇಯತೆ, ಅವನ ನಿಷ್ಠೆ.

| |
|---|
| *ಪರಿಪೂರ್ಣ ಪ್ರೀತಿಗೆ ಪರಿಪೂರ್ಣ ವಿಧೇಯತೆಯ ಅಗತ್ಯವಿರುತ್ತದೆ.* |

ಆದರೆ ಪರಿಪೂರ್ಣ ಪ್ರೀತಿಗೆ ಪರಿಪೂರ್ಣ ವಿಧೇಯತೆಯ ಅಗತ್ಯವಿರುತ್ತದೆ ಎಂದು ಅದರ ಅರ್ಥವಾಗುತ್ತದೆ. ಆದರೆ, ನಮ್ಮ ಹೊಸ ಪುನರುಜ್ಜೀವನಗೊಂಡ ದೇಹಗಳನ್ನು ಪಡೆಯುವ ತನಕ ಪರಿಪೂರ್ಣ ವಿಧೇಯತೆ ಅಸಾಧ್ಯ, ಮತ್ತು ಕ್ರಿಸ್ತರು ಹಿಂದಿರುಗುವ ಕೊನೆಯ ದಿನದ ವರೆಗೆ ನಮಗೆ ಅವು ದೊರಕುವುದಿಲ್ಲ. ಈ ನಡುವೆ, ನಮ್ಮ ಮುಕ್ತಿಯ ಗಳಿಗೆಯಲ್ಲಿ ನಾವು ಪಡೆದ, ನಮ್ಮ ಹೊಸ ಪುನರುಜ್ಜೀವನಗೊಂಡ ಆತ್ಮಗಳಲ್ಲಿ, ಇನ್ನೂ ಪಾಪಕ್ಕೆ ಅತಿಯಾಸೆ ಪಡುವ ದೇಹದಲ್ಲಿ ನಾವು ಬದುಕುತ್ತಿದ್ದೇವೆ. ಆದ್ದರಿಂದ, ಪ್ರಸ್ತುತ ಕಾಲದಲ್ಲಿ, ನಾವು ಪರಿಪೂರ್ಣ ಪ್ರೀತಿಯನ್ನು ಹೊಂದಿಲ್ಲವಾದ್ದರಿಂದ, ನಾವು ಹೆದರದೆ ಬದುಕಲು ಸಾಧ್ಯವಿಲ್ಲ.

ಹಿಂದೆ, ನಮ್ಮ ಅಧ್ಯಯನದಲ್ಲಿ, ನಾವು ದೇವರ ಎದುರು ಏಕೆ ಹೆದರುತ್ತೇವೆ ಮತ್ತು ನಡುಗುತ್ತೇವೆ ಎಂಬುದಕ್ಕೆ ಒಂದು ಕಾರಣವನ್ನು ತಿಳಿದುಕೊಂಡೆವು, ಆದರೆ, ಅದರ ಬಗ್ಗೆ ಇನ್ನೂ ಹೆಚ್ಚು ಹೇಳಬೇಕು. ದೇವರ ಮೆಚ್ಚುಗೆಗೆ ಪಾತ್ರನಾದ, ದೇವರಿಂದ ಬಹಳ ಪ್ರೀತಿಸಲ್ಪಟ್ಟಿದ್ದ ದಾವೀದನೆಂಬುವವನು ಪಾಪ ಮಾಡಿದಾಗ, ಈ ಮನುಷ್ಯನ ಹೃದಯದಲ್ಲಿ ಪ್ರತಿಕ್ರಿಯೆಯ ಬಗ್ಗೆ ದೇವರು ನಮಗೆ ಕೀರ್ತನೆಗಳು 51:11ರಲ್ಲಿ ಹೇಳುತ್ತಾರೆ, ಅಲ್ಲಿ ನಾವು ಓದುವುದೇನೆಂದರೆ:

**ನಿನ್ನ ಸನ್ನಿಧಿಯಿಂದ ನನ್ನನ್ನು ತಳ್ಳಬೇಡ; ನಿನ್ನ ಪರಿಶುದ್ಧಾತ್ಮವನ್ನು ನನ್ನಿಂದ ತೆಗೆಯಬೇಡ.**

ದಾವೀದನು ನಿರಂತರ ಬದುಕನ್ನು ಪಡೆದಿದ್ದನು. ದೇವರ ರಾಜ್ಯದಲ್ಲಿ ಅವನು ಸಂಪೂರ್ಣ ಸುರಕ್ಷತೆಯಿಂದ ಇದ್ದನು. ಪವಿತ್ರಾತ್ಮನಾದ ದೇವರು ಅವನು ಹೇಳಬೇಕೆಂದು ಕೊಟ್ಟ ಈ ಕೀರ್ತನೆಯ ಪದಗಳನ್ನು ಅವನು ಹೇಳಲು ಹೇಗೆ ಸಾಧ್ಯ? ಪಾಪಕ್ಕೆ ಭೀಕರ ಶಿಕ್ಷೆಯನ್ನು ನಾವು ಅರಿತಾಗ ಈ ಪ್ರಶ್ನೆಗೆ ಉತ್ತರ ಸಿಗುತ್ತದೆ. ಪ್ರತಿಯೊಂದು ಪಾಪಕ್ಕೆ ದಂಡ ತೆರಬೇಕು. ಆದ್ದರಿಂದ, ನಿಜವಾದ ನಂಬಿಕೆಯುಳ್ಳವನು ಪಾಪ ಮಾಡಿದಾಗ, ಅವನ ಸಂಪೂರ್ಣ ವ್ಯಕ್ತಿತ್ವದೊಳಗೆ ಎರಡು ಸತ್ಯಗಳು ವ್ಯಾಪಿಸಬೇಕು.

*ನಂಬಿಕೆಯುಳ್ಳವನು ಸಂಚಯಿತನಾದ ಮೇಲೆ ಮಾಡುವ ಪಾಪಗಳು ಸೇರಿದಂತೆ, ಪ್ರಭು ಯೇಸು ಕ್ರಿಸ್ತರು ಎಲ್ಲಾ ಪಾಪಗಳಿಗೆ ಬೆಲೆ ತೆರಬೇಕಾಯಿತು.*

ಮೊದಲನೆ ಸತ್ಯವೇನೆಂದರೆ, ನಂಬಿಕೆಯುಳ್ಳವನು ಸಂಚಯಿತನಾದ ಮೇಲೆ ಮಾಡುವ ಪಾಪಗಳು ಸೇರಿದಂತೆ, ಪ್ರಭು ಯೇಸು ಕ್ರಿಸ್ತರು ನಮ್ಮ ಎಲ್ಲಾ ಪಾಪಗಳಿಗೆ ಬೆಲೆ

ತೆರಬೇಕಾಯಿತು. ಸಹಜವಾಗಿ, ನಿಜವಾದ ನಂಬಿಕೆಯುಳ್ಳವನು ಈ ಪಾಪಗಳನ್ನು ಮಾಡುತ್ತಾನೆ ಎಂದು ದೇವರಿಗೆ ಪ್ರಾರಂಭದಿಂದ ತಿಳಿದಿತ್ತು ಎಂಬುದು ಸತ್ಯ, ಆದ್ದರಿಂದ, ದೇವರು ಆಗಲೆ ಅವನ್ನು ಯೇಸುವಿನ ಮೇಲೆ ಹಾಕಿದ್ದರು ಮತ್ತು ಬಹಳ ಹಿಂದೆಯೆ ಯೇಸು ಅವುಗಳಿಗೆ ಬೆಲೆ ತೆತ್ತರು. ಆದರೆ, ಪಾಪ ಎಷ್ಟು ಭೀಕರವಾಗಿದೆ ಮತ್ತು ದೇವರ ಪರಿಪೂರ್ಣ ನ್ಯಾಯಕ್ಕೆ ಅಗತ್ಯವಿರುವ ಪಾಪದ ದೊಡ್ಡ ದಂಡ ಏನೆಂದು ತಿಳಿದಿರುವ ಒಬ್ಬ ವ್ಯಕ್ತಿಯಿಂದ ಈ ಪಾಪಗಳು ನಡೆಯುತ್ತಿವೆ ಎಂಬ ಸತ್ಯವನ್ನು ಅದು ಬದಲಾಯಿಸುವುದಿಲ್ಲ. ಹೀಗೆ, ನಿಜವಾದ ನಂಬಿಕೆಯುಳ್ಳವನು, ತಾನು ಪಾಪ ಮಾಡಿದ ಪ್ರತಿ ಬಾರಿ, ಈ ಪಾಪವೂ ಸ್ತುತಿಸಲ್ಪಡುವ ನಮ್ಮ ರಕ್ಷಕನ ಮೇಲೆ ಹಾಕಲಾಗುವುದು ಎಂದು ಅರಿತಾಗ ಅವನು ಹೆದರುತ್ತಾನೆ ಮತ್ತು ನಡುಗುತ್ತಾನೆ.

ಎರಡನೆಯ ಸತ್ಯವೆಂದರೆ, ಪಾಪದ ಗಂಭೀರತೆಯೊಂದಿಗೆ ಮತ್ತು ಪಾಪದ ಬೆಲೆಯಾಗಿ ದೇವರ ಪರಿಪೂರ್ಣ ನ್ಯಾಯ ಕೇಳುವ ಭೀಕರ ದಂಡದೊಂದಿಗೆ ನಿಜವಾದ ನಂಬಿಕೆಯುಳ್ಳವನು ಹೆಚ್ಚು ಪರಿಚಿತನಾಗುತ್ತಾನೆ. ತಾನು ಪಾಪ ಮಾಡಿದ ಪ್ರತಿ ಸಲ, ತನ್ನ ಪ್ರೀತಿಯ ರಕ್ಷಕನ ವಿರುದ್ಧ ದಂಗೆಕೋರತನದಲ್ಲಿ ತೊಡಗುತ್ತಿದ್ದಾನೆ ಎಂದೂ ಕೂಡ ಅವನಿಗೆ ತಿಳಿದಿದೆ. ಒಂದೆಡೆ, ಯೇಸುವಿನ ಚೆಲ್ಲಿದ ರಕ್ತ ಅವನ ಪಾಪಕ್ಕೆ ಬೆಲೆ ತೆತ್ತಿದೆ ಮತ್ತು ಆ ಪಾಪಗಳು ಅವನ ವಿರುದ್ಧ ಲೆಕ್ಕಕ್ಕೆ ಬರುವುದಿಲ್ಲ ಎಂದು ಅವನಿಗೆ ತಿಳಿದಿದೆ. ಇನ್ನೊಂದೆಡೆ, ತನ್ನ ಪಾಪದ ಕ್ಷಮೆಗೆ ಸಂಪೂರ್ಣವಾಗಿ ತನಗೆ ಅರ್ಹತೆ ಇಲ್ಲದ, ದೇವರ ಕರುಣೆ ಮತ್ತು ಕೃಪೆ ಮಾತ್ರ ಕಾರಣವೆಂದು ಅವನಿಗೆ ತಿಳಿದಿದೆ. ಆದ್ದರಿಂದ, ಅವನು ಧೈರ್ಯದಿಂದ ಪಾಪ ಮಾಡಿದನು ಎಂಬ ಸತ್ಯದಿಂದಾಗಿ, ದೇವರ ಎದುರು ಹೆದರುತ್ತ ಮತ್ತು ನಡುಗುತ್ತ ಅವನು ತನ್ನ ಬದುಕನ್ನು ಬದುಕಲು ಕಾರಣವಾಯಿತು, ಮತ್ತು ಅದು ನಿಜವಾಗಿಯೂ, ದೇವರ ಎಲ್ಲಾ ನಿಯಮಗಳಿಗೆ ಹೆಚ್ಚು ಹೆಚ್ಚು ವಿಧೇಯನಾಗಿ ಬದುಕಬೇಕೆಂಬ ಅವನ ಬಯಕೆಯನ್ನು ಉತ್ತೇಜಿಸುತ್ತದೆಯೆ ಹೊರತು ಪಾಪ ಮಾಡಲು ಅಲ್ಲ.

ಹೀಗೆ, ಸಂಚಯಿತನಾದ ವ್ಯಕ್ತಿ ಸಂಪೂರ್ಣವಾಗಿ ಭಿನ್ನವಾದ ಜೀವನಶೈಲಿಯನ್ನು ಹೊಂದಿರುತ್ತಾನೆ. ಪಾಪದತ್ತ, ಮತ್ತು ದೇವರತ್ತ, ಮತ್ತು ಬೈಬಲ್ ನತ್ತ ಸಂಚಯಿತನಾಗದವನ ಬದುಕಿನಲ್ಲಿ ಕಾಣಸಿಗುವುದಕ್ಕಿಂತ ಸಂಪೂರ್ಣವಾಗಿ ಭಿನ್ನವಾದ ಮನೋಭಾವವನ್ನು ಅವನು ಹೊಂದಿರುತ್ತಾನೆ ಎಂದು ನಮಗೆ ಅರ್ಥವಾಗುತ್ತದೆ.

***ನನಗೆ ಭರವಸೆ ಇದೆಯೆ?***

ಸಂಚಯಿತರಾಗುವ ಸಾಧ್ಯತೆ ನಿರಾಶಾದಾಯಕ ಎಂಬುದು ನಾವು ಇದುವರೆಗು ಕಲಿತಿರುವುದರ ಅರ್ಥವೆ? ಹೌದು, ನಮ್ಮ ಮುಕ್ತಿಗೆ ಆತಿ ಚಿಕ್ಕದಾದ ಕೊಡುಗೆಯನ್ನೂ ನೀಡಲು ಯಾವುದೇ ರೀತಿಯಲ್ಲಿ ನಮ್ಮ ಪ್ರಯತ್ನಗಳ ಮೇಲೆ, ನಮ್ಮ ನಂಬಿಕೆಯ ಮೇಲೆ, ನಮ್ಮ ಆಸೆಗಳ ಮೇಲೆ, ನಮ್ಮ ವಿಧೇಯತೆಯ ಮೇಲೆ ನಾವು ಅವಲಂಬಿಸಿದ್ದರೆ ಅದು ನಿಜವಾಗಿಯೂ ನಿರಾಶಾದಾಯಕ. ಹೀಗೇಕೆಂದರೆ, ನಮ್ಮ ಮುಕ್ತಿಗೆ ನಾವು ಯಾವುದಾದರು ರೀತಿಯಲ್ಲಿ ಕೊಡುಗೆ ನೀಡಬಹುದೆಂದು ಆಲೋಚಿಸುವುದು ದೇವರ ಅತ್ಯದ್ಭುತವಾದ, ಮಹೋನ್ನತ ವ್ಯವಸ್ಥೆಯ ಬಗ್ಗೆ ಬೈಬಲ್ ಬೋಧಿಸುವುದನ್ನೆಲ್ಲ ದುರಹಂಕಾರದಿಂದ ಉಪೇಕ್ಷೆ ಮಾಡುವುದರ ಪುರಾವೆಯಾಗುತ್ತದೆ. ಯಾರನ್ನೂ ಸಂಚಯಿತರನ್ನಾಗಿ ಮಾಡಲಾಗದ ಮುಕ್ತಿಯ ಯೋಜನೆಯನ್ನು ನಾವು ವಿಶ್ವಾಸ ಮಾಡುತ್ತಿದ್ದೇವೆ ಎಂಬುದು ಅದರ ಅರ್ಥವಾಗುತ್ತದೆ, ಮತ್ತು ಅದು ನಿಜವಾಗಿಯೂ ದೇವರ ಪರಿಪೂರ್ಣ ಮುಕ್ತಿಯ ಯೋಜನೆಯ ಅಪಹಾಸ್ಯ ಮಾಡುತ್ತದೆ.

*ಯಾವ ಮನುಷ್ಯನೂ ಲೆಕ್ಕಿಸಲಾಗದ ಅಸಂಖ್ಯಾತ ಜನರನ್ನು ದೇವರು ಸಂಚಯಿತರನ್ನಾಗಿ ಮಾಡುತ್ತಿರುವ ದಿನದಲ್ಲಿ ನಾವು ಬದುಕುತ್ತಿದ್ದೇವೆ.*

ಆದರೆ, ನಾವು ದೇವರ ಮುಕ್ತಿಯ ಯೋಜನೆಯನ್ನು ಅರ್ಥಮಾಡಿಕೊಂಡಾಗ, ನಮ್ಮ ಮುಕ್ತಿಗೆ ಅಗತ್ಯವಿರುವ ಎಲ್ಲಾ ಕೆಲಸವನ್ನು ಆತ ಮಾತ್ರ ಮಾಡಬಲ್ಲನು ಎಂದು ನಾವು ಅರ್ಥಮಾಡಿಕೊಂಡಾಗ, ನಾವು ಭರವಸೆಯಿಂದಿರಬಹುದು, ತುಂಬ ಭರವಸೆಯಿಂದಿರಬಹುದು. ಪ್ರಕಟನೆ 7:9ರಲ್ಲಿ ಹೇಳಿರುವಂತೆ, ಯಾವ ಮನುಷ್ಯನೂ ಲೆಕ್ಕಿಸಲಾಗದ ಅಸಂಖ್ಯಾತ ಜನರನ್ನು ದೇವರು ಸಂಚಯಿತರನ್ನಾಗಿ ಮಾಡುತ್ತಿರುವ ದಿನದಲ್ಲಿ ನಾವು ಬದುಕುತ್ತಿದ್ದೇವೆ. ಮೇಲಾಗಿ, ದೇವರು ಕೆಲವು ವ್ಯಕ್ತಿಗಳನ್ನು ಆಯ್ಕೆ ಮಾಡಿ ಕ್ರಿಸ್ತರಿಗೆ ಕೊಟ್ಟಿದ್ದಾರೆ, ಮತ್ತು ಕ್ರಿಸ್ತರು ಅವರ ಎಲ್ಲಾ ಪಾಪಗಳಿಗೆ ಬೆಲೆ ತೆತ್ತಿದ್ದಾರೆ ಎಂದು ಬೈಬಲ್ ಘೋಷಿಸುತ್ತದೆ, ಮತ್ತು ಅದು ಸಂಚಯಿತರಾಗದ ವ್ಯಕ್ತಿಗಳಿಗೆ ಅಗಾಧ ಭರವಸೆಯನ್ನು ನೀಡುತ್ತದೆ.

ಸಂಚಯಿತನಾಗಲು ತೀವ್ರ ಬಯಕೆಯುಳ್ಳ ಮತ್ತು ದೇವರ ಶರತ್ತುಗಳ ಮೇಲೆ ಮಾತ್ರ ತಾನು ಸಂಚಯಿತನಾಗಬಲ್ಲನು ಎಂದು ಅರಿಯುವ ಯಾವುದೇ ಸಂಚಯಿತನಾಗದ ವ್ಯಕ್ತಿ ಪ್ರಾಯಶಃ ದೇವರಿಂದ ಆಯ್ಕೆಯಾದವರಲ್ಲಿ ಒಬ್ಬನಾಗಿರಬಹುದು. ನಮ್ಮ ವೈಯಕ್ತಿಕ ಯೋಗ್ಯತೆಯೊಂದಿಗೆ, ದೇವರ ಆಯ್ಕೆಯ ಯೋಜನೆಗೆ ಯಾವುದೇ ಸಂಬಂಧವಿಲ್ಲದಿರುವ

ಕಾರಣ, ಮತ್ತು ಒಬ್ಬ ವ್ಯಕ್ತಿಯ ಪಾಪಗಳು ಎಷ್ಟೇ ದೊಡ್ಡದಾಗಿ ಮತ್ತು ಭಯಂಕರವಾಗಿದ್ದರೂ, ಅದನ್ನು ಲೆಕ್ಕಿಸದೆ ಅವನು ಅಥವ ಅವಳು ಯಾವುದೇ ಸಂಚಯಿತನಾದ ವ್ಯಕ್ತಿಯಷ್ಟೇ ಸುಲಭವಾಗಿ ದೇವರಿಂದ ಆಯ್ಕೆಯಾದವರಲ್ಲಿ ಒಬ್ಬರಾಗಿರಬಹುದು. ನಿಜವಾಗಿಯೂ, ತಾನೂ ಸಂಚಯಿತನಾಗಬಹುದು ಎಂದು ಮನಃಪೂರ್ವಕವಾಗಿ ಬಯಸಲು ಪ್ರಾರಂಭಿಸುವ ಸಂಚಯಿತನಾಗದ ವ್ಯಕ್ತಿಗೆ ದೇವರ ಆಯ್ಕೆಯ ಯೋಜನೆ ಬಹಳ ಪ್ರೋತ್ಸಾಹ ನೀಡುತ್ತದೆ.

ಯೇಸುವಿನ ರಕ್ತದಿಂದ ತನ್ನ ಪಾಪಗಳ ಬೆಲೆ ತೆರಲ್ಪಡಲಿ ಎಂದು ನಿಜವಾಗಿಯೂ ಬಯಸುವ ವ್ಯಕ್ತಿಗೆ ಬಹಳ ಪ್ರೋತ್ಸಾಹದಾಯಕವಾಗಬಲ್ಲ ಕನಿಷ್ಠಪಕ್ಷ ಏಳು ಸತ್ಯಗಳು ಬೈಬಲ್ ನಲ್ಲಿ ಪ್ರಕಟವಾಗಿವೆ. ಇವುಗಳಲ್ಲಿ ಕೆಲವು ಸತ್ಯಗಳನ್ನು ನಾವು ಈಗಾಗಲೆ ಉಲ್ಲೇಖಿಸಿದ್ದೇವೆ. ಆದರೆ, ಅವು ಎಷ್ಟು ಮುಖ್ಯವೆಂದರೆ, ಪುನಃ ನಾವು ಅವುಗಳ ಸ್ಥೂಲವಿವರಣೆಯನ್ನು ಸಂಕ್ಷಿಪ್ತವಾಗಿ ನೀಡುತ್ತೇವೆ. ಅವು ಈ ಕೆಳಗಿನಂತಿವೆ:

1. <u>ಪ್ರಸ್ತುತ, ಇದು ಮುಕ್ತಿಯ ದಿನ.</u> ಸ್ಥಳೀಯ ಕ್ರೈಸ್ತ ಸಭೆಗಳ ಪ್ರಯತ್ನಗಳನ್ನು, ಅವುಗಳ ನಾಯಕರನ್ನು, ಅಥವ ಅವುಗಳ ಜನರನ್ನು ಬಳಸಿ ದೇವರು ಈಗ ಜನರನ್ನು ಸಂಚಯಿತರನ್ನಾಗಿ ಮಾಡುತ್ತಿಲ್ಲವೆಂದು ನಾವು ತಿಳಿದುಕೊಂಡಿದ್ದೇವೆ. ಆದರೆ, ಬೈಬಲ್ ನ ಒಂದು ಗಮನಾರ್ಹ ಮತ್ತು ಪ್ರಬಲವಾದ ಬೋಧನೆ ಏನೆಂದರೆ, <u>ಇಂದು</u> ದೇವರ ರಾಜ್ಯದೊಳಗೆ ದೇವರು ಜನರ ಒಂದು ದೊಡ್ಡ ಕೊಯಿಲಯನ್ನು ಮಾಡುತ್ತಿದ್ದಾರೆ ಎಂಬ ಸತ್ಯ. ಈ ಸತ್ಯವನ್ನು ಬೆಳೆಸುವುದು ಈ ಕಿರುಪುಸ್ತಕದ ವ್ಯಾಪ್ತಿಯ ಹೊರಗಿದ್ದರೂ, ಕನಿಷ್ಠಪಕ್ಷ ಇದು ಹೀಗೆಂದು ನಮಗೆ ಭರವಸೆ ನೀಡುವ ಕೆಲವು ಶ್ಲೋಕಗಳನ್ನು ನಾವು ಉಲ್ಲೇಖಿಸಬಹುದು.

ಯೋವೇಲನ 2:24ರಲ್ಲಿ ನಾವು ಹೀಗೆಂದು ಓದುತ್ತೇವೆ:

**ಕಣಗಳಲ್ಲಿ ಗೋದಿಯು ರಾಶಿರಾಶಿಯಾಗಿರುವದು, ತೊಟ್ಟಿಗಳಲ್ಲಿ ದ್ರಾಕ್ಷಾರಸವೂ ಎಣ್ಣೆಯೂ ತುಂಬಿ ತುಳುಕುವವು.**

ಮತ್ತು ಪ್ರಕಟನೆ 7:9ರಲ್ಲಿ ಬೈಬಲ್ ಹೀಗೆಂದು ಹೇಳುತ್ತದೆ:

**ಇವುಗಳಾದ ಮೇಲೆ ಇಗೋ, ಯಾರಿಂದಲೂ ಎಣಿಸಲಾಗದಂಥ ಮಹಾ ಸಮೂಹವು ಸಿಂಹಾಸನದ ಮುಂದೆಯೂ ಯಜ್ಞದ ಕುರಿಯಾದಾತನ ಮುಂದೆಯೂ ನಿಂತಿರುವದನ್ನು ಕಂಡೆನು. ಅವರು ಸಕಲ ಜನಾಂಗಕುಲ ಪ್ರಜೆಗಳವರೂ ಸಕಲಭಾಷೆಗಳನ್ನಾಡುವವರೂ**

**ಆಗಿದ್ದರು. ಅವರು ಬಿಳೀ ನಿಲುವಂಗಿಗಳನ್ನು ತೊಟ್ಟುಕೊಂಡು ತಮ್ಮ ಕೈಗಳಲ್ಲಿ ಖರ್ಜೂರದ ಗರಿಗಳನ್ನು ಹಿಡಿದುಕೊಂಡಿದ್ದರು.**

ಮತ್ತು ಪ್ರಕಟನೆ 7:13-14 ನಮಗೆ ಹೀಗೆಂದು ಹೇಳುತ್ತದೆ:

**ಇದನ್ನು ನೋಡಿ ಹಿರಿಯರಲ್ಲಿ ಒಬ್ಬನು - ಬಿಳೀ ನಿಲುವಂಗಿಗಳನ್ನು ತೊಟ್ಟುಕೊಂಡಿರುವವರಾದ ಇವರು ಯಾರು? ಎಲ್ಲಿಂದ ಬಂದರು ಎಂದು ನನ್ನನ್ನು ಕೇಳಲು - ಅಯ್ಯಾ, ನೀನೇ ಬಲ್ಲೆ ಅಂದೆನು. ಅವನು ನನಗೆ - ಇವರು ಆ ಮಹಾ ಹಿಂಸೆಯನ್ನು ಅನುಭವಿಸಿ ಬಂದವರು; ಯಜ್ಞದ ಕುರಿಯಾದಾತನ ರಕ್ತದಲ್ಲಿ ತಮ್ಮ ನಿಲುವಂಗಿಗಳನ್ನು ತೊಳೆದು ಶುಭ್ರಮಾಡಿದ್ದಾರೆ.**

ಹಬಕ್ಕೂಕನ 2:14ರಲ್ಲಿ ನಾವು ಹೀಗೆಂದು ಓದುತ್ತೇವೆ:

**ಸಮುದ್ರದಲ್ಲಿ ನೀರು ಹೇಗೋ ಹಾಗೆಯೇ ಭೂಮಿಯಲ್ಲಿ ಯೆಹೋವನ ಮಹಿಮೆಯು ಜ್ಞಾನವು ತುಂಬಿಕೊಂಡಿರುವದು.**

ಯೆರೆಮೀಯ 33:22ರಲ್ಲಿ ನಾವು ಹೀಗೆಂದು ಓದುತ್ತೇವೆ:

**ನಾನು ನನ್ನ ದಾಸನಾದ ದಾವೀದನ ಸಂತಾನವನ್ನು ಅಸಂಖ್ಯಾತವಾದ ನಕ್ಷತ್ರಗಣದಷ್ಟು ಹೆಚ್ಚಿಸುವೆನು; ನನ್ನ ಸೇವೆ ನಡಿಸುವ ಲೇವಿಯರ ಸಂಖ್ಯೆಯನ್ನು ಅಳೆಯಲಾಗದ ಸಮುದ್ರತೀರದ ಉಸುಬಿನಷ್ಟು ವೃದ್ಧಿಪಡಿಸುವೆನು.**

ದೇವರ ಬಳಿ ದೀನನಾಗಿ ಹೋಗಿ, ಆತನಲ್ಲಿ ಕರುಣೆಗಾಗಿ ಮೊರೆಯಿಡುವ ಯಾವುದೇ ಸಂಚಯಿತನಾಗದ ವ್ಯಕ್ತಿಗೆ ಈ ಶ್ಲೋಕಗಳು ಮತ್ತು ಬೇರೆ ಅನೇಕ ಶ್ಲೋಕಗಳು ಬಹಳ ಭರವಸೆಯನ್ನು ನೀಡುತ್ತವೆ.

ಹೀಗೆ, ಇಂದು ಅಸಂಖ್ಯಾತ ಜನರು ಸಂಚಯಿತರಾಗುತ್ತಿದ್ದಾರೆ ಎಂದು ನಾವು ಭರವಸೆಯಿಂದಿರಬಹುದು. ಆ ಅಸಂಖ್ಯಾತ ಜನರಲ್ಲಿ ಅವನೂ ಒಬ್ಬನಾಗುವ ಶಕ್ತಿಯನ್ನು ಯಾವುದೇ ಸಂಚಯಿತನಾಗದ ವ್ಯಕ್ತಿ ಹೊಂದಿದ್ದಾನೆ. ಜಗತ್ತಿನೆಲ್ಲೆಡೆ ಇಷ್ಟು ವ್ಯಕ್ತಿಗಳು ಸಂಚಯಿತರಾಗುತ್ತಿರುವ ಕಾಲದಲ್ಲಿ ನಾವು ಬದುಕುತ್ತಿದ್ದೇವೆ ಎಂದು ತಿಳಿಯುವುದು ಎಷ್ಟು ಸಂತೋಷಕರ ಸಂಗತಿ!

2. <u>ದೇವರು ಸಂಚಯಿತರನ್ನಾಗಿ ಮಾಡುವ ಪರಿಸರ ದೇವರ ಪದವಾದ ಬೈಬಲ್ ಅನ್ನು ಆಲಿಸುವುದು.</u> ರೋಮಾಪುರದವರ 10:17ರಲ್ಲಿ ಬೈಬಲ್ ಹೀಗೆಂದು ಘೋಷಿಸುತ್ತದೆ:

**ಆದಕಾರಣ ಸಾರಿದ ವಾರ್ತೆಯು ನಂಬಿಕೆಗೆ ಆಧಾರ, ಆ ವಾರ್ತೆಗೆ ಕ್ರಿಸ್ತನ ವಾಕ್ಯವೇ ಆಧಾರ.**

ಜಗತ್ತಿನ ಚರಿತ್ರೆಯಲ್ಲಿ ಹಿಂದೆಂದಿಗಿಂತಲೂ ಹೆಚ್ಚಾಗಿ ಇಂದು ಹೆಚ್ಚಿನ ಸಂಖ್ಯೆಯ ಜನರು ಸಾಕ್ಷರರು ಮತ್ತು ಅವರ ಸ್ಥಳೀಯ ಭಾಷೆಯಲ್ಲಿ ಬೈಬಲ್ ಅವರಿಗೆ ಲಭ್ಯವಿದೆ. ಯಾರೇ ಆಗಲಿ, ತನ್ನನ್ನು ಮತ್ತು ಸಂಚಯಿತರಾದ ಮತ್ತು ಸಂಚಯಿತರಾಗದ ತನ್ನ ಪರಿವಾರದ ಸದಸ್ಯರನ್ನು ಬೈಬಲ್ ಆಲಿಸುವಂತೆ ಮಾಡಲು ಸಾಧ್ಯವಾದುದು ಎಷ್ಟು ಅಗಾಧವಾದ ಪ್ರೋತ್ಸಾಹ! ತಾನೇ ಬೈಬಲ್ ಅನ್ನು ಓದಿ ಅವನು ಹೀಗೆ ಮಾಡಬಹುದು. ಅನೇಕ ಸಂದರ್ಭಗಳಲ್ಲಿ, ಫ್ಯಾಮಿಲಿ ರೇಡಿಯೊದಂತಹ ರೇಡಿಯೊ ಪ್ರಸಾರಗಳ ಮೂಲಕ ಅವನು ಬೈಬಲ್ ಅನ್ನು ಓದುವುದನ್ನು ಮತ್ತು ನಿಷ್ಠೆಯಿಂದ ಬೋಧಿಸುವುದನ್ನು ಕೇಳಬಹುದು. ದೇವರು ಜನರನ್ನು ಸಂಚಯಿತರನ್ನಾಗಿ ಮಾಡಲು ಪರಿಸರ ಚರಿತ್ರೆಯಲ್ಲಿ ಹಿಂದೆಂದಿಗಿಂತಲೂ ಹೆಚ್ಚು ದೊಡ್ಡದಾಗಿಯೂ, ಹೆಚ್ಚು ಆಶಾದಾಯಕವಾಗಿಯೂ ಇದೆ. ಆದ್ದರಿಂದ, ತಂದೆ-ತಾಯಿಯರಾದ ನಾವು, ನಮ್ಮ ಶಿಶುಗಳು ಮತ್ತು ನಮ್ಮ ಎಲ್ಲಾ ಮಕ್ಕಳು ದೇವರ ಪದದ ಆಲಿಸಬೇಕೆಂದು ಬಯಸುತ್ತೇವೆ. ನಮ್ಮ ಸಮಾಜದಲ್ಲಿ ಮತ್ತು ಜಗತ್ತಿನೆಲ್ಲೆಡೆ ಅಸಂಖ್ಯಾತ ಜನರಿಗೆ ಸುವಾರ್ತೆಯನ್ನು ಲಭ್ಯಗೊಳಿಸಲು ರೇಡಿಯೊದ ಉಪಯೋಗ ಒಂದು ವಿಶೇಷವಾಗಿ ಅಮೂಲ್ಯವಾದ ಮತ್ತು ಮುಖ್ಯವಾದ ಸಾಧನವಾಗಲು ಒಂದು ಕಾರಣ.

3. ಕ್ರಿಸ್ತರು ಪಾಪಿಷ್ಠರನ್ನು ಸಂಚಯಿತರನ್ನಾಗಿ ಮಾಡಲು ಬಂದರು. ತಾನೊಬ್ಬನೇ ಧರ್ಮಪರನೆಂದು ಹೆಮ್ಮೆಪಡುವವನನ್ನು, ತಾವು ನೀತಿವಂತ, ಸಂಭಾವಿತ ಜನರು ಎಂದು ತಮ್ಮ ಬಗ್ಗೆ ತಾವು ಯೋಚಿಸುವ, ಮತ್ತು ತಮ್ಮ ಧರ್ಮನಿಷ್ಠ ನಡತೆ ದೇವರು ತಮ್ಮತ್ತ ಕೃಪೆಯಿಂದ ನೋಡಲು ಒಂದು ಕಾರಣ ಎಂದು ನಂಬುವ ಜನರನ್ನು ಸಂಚಯಿತರನ್ನಾಗಿ ಮಾಡಲು ಕ್ರಿಸ್ತರು ಬರಲಿಲ್ಲ. ಕ್ರಿಸ್ತರು ಪಾಪಿಷ್ಠರನ್ನು ಸಂಚಯಿತರನ್ನಾಗಿ ಮಾಡಲು ಬಂದರು!

*ಯೇಸುವಿನ ಜೊತೆಯಲ್ಲಿ ಶಿಲುಬೆಗೇರಿಸಲ್ಪಟ್ಟ ಅಪರಾಧಿಯ ಬಗ್ಗೆ ಓದುವುದು ಎಂತಹ ಪ್ರೋತ್ಸಾಹ!*

ಯೇಸುವಿನ ಜೊತೆಯಲ್ಲಿ ಶಿಲುಬೆಗೇರಿಸಲ್ಪಟ್ಟ ಅಪರಾಧಿಯ ಬಗ್ಗೆ ಓದುವುದು ಎಂತಹ ಪ್ರೋತ್ಸಾಹ!. ಮೊದಲಿಗೆ, ಈ ಅಪರಾಧಿ ಯೇಸುವಿನ ಬಗ್ಗೆ ತನ್ನ ಸಂಪೂರ್ಣ ತಿರಸ್ಕಾರವನ್ನು ತೋರಿಸಿದನು. ಮತ್ತಾಯ 27:41-44ರಲ್ಲಿ ನಾವು ಹೀಗೆಂದು ಓದುತ್ತೇವೆ:

**ಅದೇ ಮೇರೆಗೆ ಮಹಾಯಾಜಕರೂ ಶಾಸ್ತ್ರಿಗಳೂ ಹಿರಿಯರೂ - ಅವನು ಮತ್ತೊಬ್ಬರನ್ನು ರಕ್ಷಿಸಿದನು, ತನ್ನನ್ನು ರಕ್ಷಿಸಿಕೊಳ್ಳಲಾರನು. ಅವನು ಇಸ್ರಾಯೇಲಿನ ಅರಸನಲ್ಲವೇ. ಈಗ ಶಿಲುಬೆಯಿಂದ ಇಳಿದು ಬರಲಿ, ಇಳಿದು ಬಂದರೆ ಅವನಲ್ಲಿ ನಂಬಿಕೆಯಿಟ್ಟೇವು. ದೇವರಲ್ಲಿ ಭರವಸವಿಟ್ಟಿದ್ದಾನೆ, ದೇವರು ಅವನಲ್ಲಿ ಇಷ್ಟಪಟ್ಟರೆ ಈಗ ಅವನನ್ನು ಬಿಡಿಸಲಿ; ತಾನು ದೇವರ ಮಗನಾಗಿದ್ದೇನೆಂದು ಹೇಳಿದನಲ್ಲಾ ಎಂದು ಹಾಸ್ಯದಿಂದ ಮಾತಾಡುತ್ತಿದ್ದರು. ಆತನ ಸಂಗಡ ಶಿಲುಬೆಗೆ ಹಾಕಲ್ಪಟ್ಟ ಕಳ್ಳರು ಸಹ ಆತನನ್ನು ಅದೇ ಪ್ರಕಾರ ನಿಂದಿಸುತ್ತಿದ್ದರು.**

ಆದರೂ, ಅದ್ಭುತವಾಗಿ, ಶಿಲುಬೆಗೇರಿದ ಈ ಅಪರಾಧಿ ಸಾಯುವುದಕ್ಕೆ ಕೆಲವೇ ನಿಮಿಷಗಳ ಅಥವ ಗಂಟೆಗಳ ಮೊದಲು, ಯೇಸುವಿನಲ್ಲಿ ಕರುಣೆಗಾಗಿ ಬೇಡಿದನು, ಮತ್ತು ಅತ್ಯಂತ ಅಸಂಭವವೆನಿಸುವ ಸಮಯದಲ್ಲಿ ಮತ್ತು ಸ್ಥಳದಲ್ಲಿ ಅವನು ಸಂಚಯಿತನಾಗಿದ್ದನು ಎಂದು ಅವನಿಗೆ ಮತ್ತು ನಮಗೆ ಭರವಸೆ ನೀಡುವ ಉತ್ತರವನ್ನು ಅವನು ಪಡೆದನು. ಲೂಕ 23:39-43ರಲ್ಲಿ ನಾವು ಹೀಗೆಂದು ಓದುತ್ತೇವೆ:

**ತೂಗಹಾಕಿದ್ದ ಆ ದುಷ್ಕರ್ಮಿಗಳಲ್ಲಿ ಒಬ್ಬನು ಆತನನ್ನು ದೂಷಿಸಿ - ನೀನು ಬರಬೇಕಾದ ಕ್ರಿಸ್ತನಲ್ಲವೇ, ನಿನ್ನನ್ನು ರಕ್ಷಿಸಿಕೋ, ನಮ್ಮನ್ನೂ ರಕ್ಷಿಸು ಎಂದು ಹೇಳಿದ್ದಕ್ಕೆ ಎರಡನೆಯವನು ಅವನನ್ನು ಗದರಿಸಿ - ನೀನು ಇದೇ ದಂಡನೆಯಲ್ಲಿರುವಾಗಲೂ ದೇವರಿಗೆ ಹೆದರುವುದಿಲ್ಲವೋ? ನಾವಂತೂ ನ್ಯಾಯವಾಗಿ ದಂಡನೆಯಲ್ಲಿದ್ದೇವೆ, ನಾವು ಮಾಡಿದ್ದಕ್ಕೆ ತಕ್ಕ ಪ್ರತಿಫಲವನ್ನು ಹೊಂದುತ್ತಾ ಇದ್ದೇವೆ; ಈತನಾದರೋ ಅಲ್ಲದ್ದೇನೂ ಮಾಡಲಿಲ್ಲ ಎಂದು ಹೇಳಿ - ಯೇಸುವೇ, ನೀನು ನಿನ್ನ ರಾಜ್ಯವನ್ನು ಪಡೆದವನಾಗಿ ಬರುವಾಗ ನನ್ನನ್ನು ನೆನಸಿಕೋ ಅಂದನು. ಅದಕ್ಕೆ ಯೇಸು - ಈ ಹೊತ್ತೇ ನನ್ನ ಸಂಗಡ ಪರದೈಸಿನಲ್ಲಿರುವಿ ಎಂದು ನಿನಗೆ ಸತ್ಯವಾಗಿ ಹೇಳುತ್ತೇನೆ ಎಂದು ಉತ್ತರಕೊಟ್ಟನು.**

ಈ ಘೋರ ಪಾಪಿಷ್ಠ ಪದವನ್ನು ಆಲಿಸುತ್ತಿದ್ದನು ಏಕೆಂದರೆ ಅವನು ಯೇಸು ಮರಿಯಾಳೊಡನೆ, ಅಪೋಸ್ತಲ ಯೋಹಾನನೊಡನೆ ಮತ್ತು ಸ್ವತಃ ದೇವರೊಡನೆ ಮಾತನಾಡುವುದನ್ನು ಕೇಳಿಸಿಕೊಂಡಿದ್ದನು. ಮತ್ತು ಆ ಹೊತ್ತಿನಲ್ಲಿಯೆ, ಆ ಸ್ಥಳದಲ್ಲಿಯೇ, ಈ ನೀಚ ಪಾಪಿಷ್ಠನಿಗೆ ನಿರಂತರ ಬದುಕನ್ನು ನೀಡಲಾಯಿತು. ಹೀಗೆ, ಇನ್ನೂ ಸಂಚಯಿತನಾಗದ ಯಾರೇ ಆಗಲಿ, ಅವನ ಪಾಪ ಎಷ್ಟೇ ದೊಡ್ಡದಾಗಿರಲಿ, ಅದರ ಲೆಕ್ಕವಿಲ್ಲದೆ, ಯೇಸು ಪಾಪಿಷ್ಠರಿಗೋಸ್ಕರ ಬಂದರು ಎಂದು ತಿಳಿಯಬಹುದು. ಎಂತಹ ಅದ್ಭುತ ಪ್ರೋತ್ಸಾಹ!

4. <u>ಯೇಸು ಜನರನ್ನು ಗೌರವಿಸುವವರಲ್ಲ.</u> ಇದರ ಅರ್ಥವೇನೆಂದರೆ, ಜನರ ಯಾವುದೇ ಒಂದು ವರ್ಗ ಅಥವ ಗುಂಪಿಗೆ ಸಂಚಯಿತರಾಗಲು ಇನ್ನೊಂದು ವರ್ಗ ಅಥವ ಗುಂಪಿಗಿಂತ ಹೆಚ್ಚು ಸಂಭಾವ್ಯತೆ ಇರುವುದಿಲ್ಲ. ಒಬ್ಬ ವ್ಯಕ್ತಿ ಸಮಾಜದಿಂದ ತಿರಸ್ಕೃತನಾಗಿರಬಹುದು, ಮತ್ತು ತನ್ನ ಸಹಮಾನವರಿಂದ ಅವನು "ಅಸ್ಪೃಷ್ಯ"ನೆಂದು ಪರಿಗಣಿಸಲ್ಪಡಬಹುದು, ಆದರೆ, ಬೈಬಲ್ ನಲ್ಲಿ, ಯೇಸುವಿನ ದಿನದ ಕ್ರೈಸ್ತಸಭೆಗಳಿಂದ ಕಡೆಗಣಿಸಲ್ಪಟ್ಟು ಮತ್ತು ಉಪೇಕ್ಷಿಸಲ್ಪಟ್ಟು ಸಂಚಯಿತರಾದ ವ್ಯಕ್ತಿಗಳ ಬಗ್ಗೆ ದೇವರು ನಮಗೆ ಹೇಳುತ್ತಾರೆ. ಯೋಹಾನ 4:4-42ರಲ್ಲಿ ಹೇಳಲಾಗಿರುವ ಸಮಾರ್ಯದ ಹೆಂಗಸು ಸಂಚಯಿತಳಾಗುವುದು, ಲೂಕ 19:2-8ರಲ್ಲಿ ಪ್ರಸ್ತಾಪವಾಗಿರುವ ಸುಂಕದವನಾದ ಜಕ್ಕಾಯನ ಸಂಚಯಿತನಾಗುವುದು, ಲೂಕ 17:12-19ರ ಕುಷ್ಠರೋಗಿಯು ಸಂಚಯಿತನಾಗುವುದು , ಲೂಕ 23:39-43ರಲ್ಲಿ, ತನ್ನ ಅಪರಾಧಗಳಿಗೆ ಮರಣದಂಡನೆ ಅನುಭವಿಸಿದ ಅಪರಾಧಿಯು ಸಂಚಯಿತನಾಗುವುದು  ಮತ್ತು ಯೋಹಾನ 8:1-11ರ ವ್ಯಭಿಚಾರಿಣಿಯಾದ ಹೆಂಗಸಿನ ಸಂಚಯಿತಳಾಗುವುದು ಇದಕ್ಕೆ ಉದಾಹರಣೆಗಳು. ಈ ಎಲ್ಲಾ ಜನರು ಸಮಾಜದ ಅಪ್ರಯೋಜಕರು ಎಂದು ಪರಿಗಣಿಸಲ್ಪಟ್ಟಿದ್ದರು, ಆದರೆ ಪ್ರತಿಯೊಬ್ಬರನ್ನು ಯೇಸು ಸಂಚಯಿತನನ್ನಾಗಿ ಮಾಡಿದರು. ಹೀಗೆ, ಆತ ಜನರನ್ನು ಗೌರವಿಸುವವರಲ್ಲ ಎಂದು ನಾವು ಸ್ಪಷ್ಟವಾಗಿ ಕಾಣುತ್ತೇವೆ. ಯಾವುದೇ ಸಂಚಯಿತನಾಗದ ವ್ಯಕ್ತಿಗೆ ಈ ಸತ್ಯ ಎಷ್ಟು ಅದ್ಭುತವಾಗಿರಬಹುದು!

.

5. <u>ದೇವರು ಕರುಣಾಮಯಿ.</u> ಬೋಧಕರು, ಹಿರಿಯರು, ಧರ್ಮಾಧಿಕಾರಿಗಳು ಮತ್ತು ಬೈಬಲ್ ಬೋಧಕರು ಆ ಬಡ ಜನರಿಗೆ ಬೋಧಿಸುವ ಸ್ಥಳೀಯ ಕ್ರೈಸ್ತಸಭೆಗಳಲ್ಲಿ ಕರುಣೆಯನ್ನು ಈಗ ಕಾಣಲು ಸಾಧ್ಯವಿಲ್ಲ ಎಂಬುದು ಸತ್ಯ. ಅದೆಂತಹ ಭಯಂಕರ ಸತ್ಯ! ಆದರೆ ಸ್ಥಳೀಯ ಕ್ರೈಸ್ತಸಭೆಗಳ ಹೊರಗೆ, ಜಗತ್ತಿನಾದ್ಯಂತ, ದೇವರು ತನ್ನ ಅಳೆಯಲಾರದ ಕರುಣೆಯನ್ನು ಪ್ರದರ್ಶಿಸುವುದನ್ನು ಮುಂದುವರಿಸಿದ್ದಾರೆ. ದೇವರು ಕರುಣಾಮಯಿ ದೇವರು.

ಕೀರ್ತನೆಗಳು 103:8ರಲ್ಲಿ ನಾವು ಹೀಗೆಂದು ಓದುತ್ತೇವೆ:

**ಯೆಹೋವನು ಕನಿಕರವೂ ದಯೆಯೂ ದೀರ್ಘಶಾಂತಿಯೂ ಪೂರ್ಣಪ್ರೀತಿಯೂ ಉಳ್ಳವನು.**

ಮತ್ತು ಪ್ರಲಾಪಗಳು 3:31-32ರಲ್ಲಿ ನಾವು ಓದುವುದೇನೆಂದರೆ:

**ಕರ್ತನು ಸದಾಕಾಲಕ್ಕೂ ಬಿಟ್ಟುಬಿಡುವವನಲ್ಲ; ಆತನು ವ್ಯಥೆಗೊಳಿಸಿದರೇನು, ತನ್ನ ಕೃಪಾತಿಶಯದಿಂದ ಕನಿಕರಿಸುವನು.**

ಮತ್ತು ಯೋವೇಲ 2:13ರಲ್ಲಿ ದೇವರು ಸುಂದರವಾಗಿ ಮತ್ತು ಕೃಪೆಯಿಂದ ಹೀಗೆಂದು ಘೋಷಿಸುತ್ತಾರೆ:

**ನಿಮ್ಮ ಬಟ್ಟೆಗಳನ್ನಲ್ಲ, ನಿಮ್ಮ ಹೃದಯಗಳನ್ನು ಹರಿದುಕೊಂಡು ನಿಮ್ಮ ದೇವರಾದ ಯೆಹೋವನ ಕಡೆಗೆ ತಿರಿಗಿಕೊಳ್ಳಿರಿ; ಆತನು ದಯೆಯೂ ಕನಿಕರವೂ ದೀರ್ಘಶಾಂತಿಯೂ ಮಹಾಕೃಪೆಯೂ ಉಳ್ಳವನಾಗಿ ಮಾಡಬೇಕೆಂದಿದ್ದ ಕೇಡಿಗೆ ಮನಮರುಗುತ್ತಾನೆ.**

6.<u>ಸಂಚಯಿತರಾಗಬೇಕೆಂಬ ನಮ್ಮ ತೀವ್ರ ಬಯಕೆಯನ್ನು ನಾವು ವೈಯಕ್ತಿಕವಾಗಿ ದೇವರಿಗೆ ತಿಳಿಸಬಹುದು.</u> ಮುಕ್ತಿಗಾಗಿ ನಾವು ದೇವರನ್ನು ಬೇಡಿಕೊಳ್ಳಬಹುದು, ಯಾಚಿಸಬಹುದು, ಮತ್ತು ಪ್ರಾರ್ಥಿಸಬಹುದು. ದೇವರಿಗೆ ಪ್ರಾರ್ಥಿಸುವುದು ನಾವು ಮಾಡುವ ಕೆಲಸ, ಆದ್ದರಿಂದ ದೇವರಿಗೆ ಪ್ರಾರ್ಥಿಸುವುದು ನಮ್ಮ ಮುಕ್ತಿಗೆ ಯಾವುದೇ ಕೊಡುಗೆ ನೀಡುವುದಿಲ್ಲ ಮತ್ತು ನಮ್ಮ ಮುಕ್ತಿಯನ್ನು ಖಚಿತಪಡಿಸುವುದಿಲ್ಲ ಎಂದು ನಮಗೆ ತಿಳಿದಿದೆ. ಆದರೆ, ನಾವು ದೇವರಲ್ಲಿ ಮೊರೆಯಿಡುವಾಗ, ಸಂಚಯಿತರಾಗಬೇಕೆಂಬ ನಮ್ಮ ಬಯಕೆಯ ಬಗ್ಗೆ ಅವರು ತಿಳಿದುಕೊಳ್ಳುತ್ತಾರೆ ಎಂದು ನಾವು ತಿಳಿದುಕೊಳ್ಳಬಹುದು.

ದೇವರ ಕರುಣೆಗಾಗಿ ಪ್ರಾರ್ಥಿಸಿದ ಸುಂಕದವನ ಉದಾಹರಣೆಯನ್ನು ಯೇಸು ಲೂಕ 18:13-14ರಲ್ಲಿ ನಮಗೆ ನೀಡುತ್ತಾರೆ:

**ಆದರೆ ಆ ಸುಂಕದವನು ದೂರದಲ್ಲಿ ನಿಂತು ಆಕಾಶದ ಕಡೆಗೆ ಕಣ್ಣೆತ್ತಿ ನೋಡುವದಕ್ಕೂ ಮನಸ್ಸಿಲ್ಲದೆ ಎದೆಯನ್ನು ಬಡುಕೊಳ್ಳುತ್ತಾ - ದೇವರೇ, ಪಾಪಿಯಾದ ನನ್ನನ್ನು ಕರುಣಿಸು ಅಂದನು. ಇವನು ನೀತಿವಂತನೆಂದು ನಿರ್ಣಯಿಸಲ್ಪಟ್ಟವನಾಗಿ ತನ್ನ ಮನೆಗೆ ಹೋದನು, ಆ ಫರಿಸಾಯನು ಅಂಥವನಾಗಿ ಹೋಗಲಿಲ್ಲ ಎಂದು ನಿಮಗೆ ಹೇಳುತ್ತೇನೆ. ತನ್ನನ್ನು ಹೆಚ್ಚಿಸಿಕೊಳ್ಳುವ ಪ್ರತಿಯೊಬ್ಬನು ತಗ್ಗಿಸಲ್ಪಡುವನು; ತನ್ನನ್ನು ತಗ್ಗಿಸಿಕೊಳ್ಳುವವನು ಹೆಚ್ಚಿಸಲ್ಪಡುವನು ಅಂದನು.**

7. <u>ಮುಕ್ತಿಯ ಭರವಸೆಯನ್ನು ನಾವು ಎಂದೂ ಕಳೆದುಕೊಳ್ಳುವ ಅಗತ್ಯವಿಲ್ಲ.</u> ದೇವರು ನಮ್ಮನ್ನು ಸಂಚಯಿತರನ್ನಾಗಿ ಮಾಡಲು ಯೋಜಿಸಿದರೆ, ಆತ ತನ್ನದೇ ಸಮಯದಲ್ಲಿ ಹಾಗೆ ಮಾಡುತ್ತಾರೆ. ಆತ ನಮ್ಮ ಬದುಕಿನಲ್ಲಿ ಬಹುಬೇಗನೆ ನಮ್ಮನ್ನು ಸಂಚಯಿತನನ್ನಾಗಿ ಮಾಡಬಹುದು ಅಥವ ನಮ್ಮ ಸಾವಿನ ಕೆಲವು ಗಂಟೆಗಳ ಮುಂಚೆ ಮುಕ್ತಿ ಬರಬಹುದು. ನಮ್ಮನ್ನು ಸಂಚಯಿತರನ್ನಾಗಿ ಮಾಡುವುದು ನಿಜವಾಗಿಯೂ ದೇವರ ಉದ್ದೇಶವಾಗಿದ್ದರೆ,

ನಮ್ಮ ಮುಕ್ತಿಗೆ ಸಮಯದ ಚೌಕಟ್ಟನ್ನು ದೇವರಿಗೆ ಎಂದೂ ಆದೇಶಿಸಲು ಪ್ರಯತ್ನಿಸಬಾರದು.

*ನಮ್ಮನ್ನು ಸಂಚಯಿತರನ್ನಾಗಿ ಮಾಡಬೇಕೆಂದು ದೇವರು ಯೋಜಿಸಿದರೆ, ತನ್ನದೇ ಸಮಯದಲ್ಲಿ ಆತ ಹಾಗೆ ಮಾಡುತ್ತಾರೆ.*

ಪ್ರಲಾಪಗಳು 3:26ರಲ್ಲಿ ನಾವು ಹೀಗೆಂದು ಓದುತ್ತೇವೆ:

**ಯೆಹೋವನ ರಕ್ಷಣಕಾರ್ಯವನ್ನು ಎದುರು ನೋಡುತ್ತಾ ಶಾಂತವಾಗಿ ಕಾದುಕೊಂಡಿರುವದು ಒಳ್ಳೇದು.**

ಮತ್ತು ಕೀರ್ತನೆಗಳು 62:5-8ರಲ್ಲಿ ದೇವರು ನಮಗೆ ಬಹಳ ಸಮಾಧಾನವನ್ನು ನೀಡುತ್ತಾರೆ, ಅಲ್ಲಿ ನಾವು ಓದುವುದೇನೆಂದರೆ:

**ನನ್ನ ಮನವೇ, ದೇವರನ್ನೇ ನಂಬಿ ಶಾಂತವಾಗಿರು. ನನ್ನ ನಿರೀಕ್ಷೆಯು ನೆರವೇರುವದು ಆತನಿಂದಲೇ. ಆತನೇ ನನಗೆ ಶರಣನೂ ರಕ್ಷಕನೂ ದುರ್ಗವೂ; ನಾನು ಕದಲುವದಿಲ್ಲ. ನನ್ನ ರಕ್ಷಣೆಗೂ, ಮಾನಕ್ಕೂ ದೇವರೇ ಆಧಾರ; ನನಗೆ ಬಲವಾದ ದುರ್ಗವೂ ಆಶ್ರಯವೂ ದೇವರಲ್ಲಿಯೇ. ಜನರೇ, ಯಾವಾಗಲೂ ಆತನನ್ನೇ ನಂಬಿ ನಿಮ್ಮ ಹೃದಯವನ್ನು ಆತನ ಮುಂದೆ ಬಿಚ್ಚಿರಿ; ದೇವರು ನಮ್ಮ ಆಶ್ರಯವು.**

ಒಬ್ಬ ವ್ಯಕ್ತಿ ಸಮಾಧಾನದಿಂದ ದೇವರಿಗಾಗಿ ಕಾಯುವಾಗ, ಅವನಲ್ಲಿ ಬಹಳ ಆತಂಕ ತುಂಬಿಕೊಳ್ಳಬಹುದು. ಸಂಚಯಿತನಾಗುವುದು ಒಂದು ಗಂಭೀರ ಮತ್ತು ಮುಖ್ಯವಾದ ವಿಷಯ. ಸಂಚಯಿತರಾಗದೆ ಉಳಿಯುವುದು ಭಯಂಕರವಾದದ್ದು.

ಅದ್ಭುತವಾಗಿ, ಫಿಲಿಪ್ಪಿಯವರ 4:6ರ ಆಶ್ವಾಸನೆಯಲ್ಲಿ ದೇವರು ನಮಗೆ ಬಹಳ ಸಮಾಧಾನವನ್ನು ನೀಡುತ್ತಾರೆ:

**ಯಾವ ಸಂಬಂಧವಾಗಿಯೂ ಚಿಂತೆಮಾಡದೆ ಸರ್ವವಿಷಯದಲ್ಲಿ ದೇವರ ಮುಂದೆ ಕೃತಜ್ಞತಾಸ್ತುತಿಯನ್ನೂ ಪ್ರಾರ್ಥನೆ ವಿಜ್ಞಾಪನೆಗಳನ್ನೂ ಮಾಡುತ್ತಾ ನಿಮಗೆ ಬೇಕಾದದ್ದನ್ನು ತಿಳಿಯಪಡಿಸಿರಿ.**

ನಂತರ, ಫಿಲಿಪ್ಪಿಯವರ 4:7ರ ಭರವಸೆಯನ್ನು ದೇವರು ನಮಗೆ ನೀಡುತ್ತಾರೆ:

**ಆಗ ಎಲ್ಲಾ ಗ್ರಹಿಕೆಯನ್ನು ಮೀರುವ ದೇವಶಾಂತಿಯು ನಿಮ್ಮ ಹೃದಯಗಳನ್ನೂ ಯೋಚನೆಗಳನ್ನೂ ಕ್ರಿಸ್ತ ಯೇಸುವಿನಲ್ಲಿ ಕಾಯುವುದು.**

ಹೀಗೆ, ಆತನಲ್ಲಿ ಸಂಪೂರ್ಣವಾಗಿ ನಾವು ವಿಶ್ರಾಂತಿ ಪಡೆಯಬೇಕೆಂದು ನಮಗೆ ಪ್ರೋತ್ಸಾಹ ನೀಡಿ ನಮ್ಮನ್ನು ದೇವರು ಸಮಾಧಾನಪಡಿಸುತ್ತಿದ್ದಾರೆ. ಅದ್ಭುತವಾಗಿ, ಆತನ ಪರಿಪೂರ್ಣವಾದ ಇಚ್ಛೆಯನ್ನು ನೆರವೇರಿಸಲು ಆತ ಸಂಪೂರ್ಣವಾಗಿ ನಿಷ್ಠಾವಂತರೂ, ವಿಶ್ವಾಸಾರ್ಹರೂ ಆಗಿದ್ದಾರೆ. ಆತನ ಸರ್ವಶಕ್ತ ಬಾಹುಗಳಲ್ಲಿ ನಾವು ವಿಶ್ರಾಂತಿ ಪಡೆಯಬೇಕಾಗಿದೆ.

ಈ ನಡುವೆ, ನಾವು ಪ್ರಾರ್ಥಿಸುತ್ತಾ ಮತ್ತು ಜಾಗರೂಕತೆಯಿಂದ ಬೈಬಲ್ ಅನ್ನು ಓದುವುದನ್ನು ಮುಂದುವರಿಸಿದಾಗ, ನಾವು ದೇವರ ಧ್ವನಿಯನ್ನು ಕೇಳಬಹುದು. ಮತ್ತು ನಮಗೆ ಪದೇ ಪದೇ ಆತಂಕವಾದಾಗಲೆಲ್ಲ, ನಾವು ದೇವರ ಕೃಪೆಯ ಸಿಂಹಾಸನದ ಬಳಿ ಧೈರ್ಯದಿಂದ ಹೋಗಿ ದೇವರಲ್ಲಿ ಎಲ್ಲವನ್ನೂ ಹೇಳಬಹುದು. ದೇವರು ಎಷ್ಟು ಕರುಣಾಮಯಿ!

ಸಂಚಯಿತರಾಗದವರಿಗೆ ದೇವರು ಚೆಫನ್ಯನ 2:3ರಲ್ಲಿ ಬಹಳ ಪ್ರೋತ್ಸಾಹ ನೀಡುತ್ತಾರೆ:

**ಯೆಹೋವನ ನಿಯಮವನ್ನು ಕೈಕೊಂಡ ಲೋಕದ ದೀನರೇ, ನೀವೆಲ್ಲರೂ ಯೆಹೋವನನ್ನು ಆಶ್ರಯಿಸಿರಿ, ಸದ್ಧರ್ಮವನ್ನು ಅಭ್ಯಾಸಿಸಿರಿ, ದೈನ್ಯವನ್ನು ಹೊಂದಿಕೊಳ್ಳಿರಿ; ಯೆಹೋವನ ಸಿಟ್ಟಿನ ದಿನದಲ್ಲಿ ಒಂದು ವೇಳೆ ಮರೆಯಾಗುವಿರಿ.**

ಹೀಗೆ, ಪ್ರಾಯಶಃ, ದೇವರು ನಿಮ್ಮನ್ನು ಸಂಚಯಿತರನ್ನಾಗಿ ಮಾಡಬಹುದು.

# ಧರ್ಮಗ್ರಂಥ ಸೂಚಿ


ಆದಿಕಾಂಡ 9:6, 19
ಆದಿಕಾಂಡ 15:6, 39, 41,42
ಆದಿಕಾಂಡ 22, 21
ವಿಮೋಚನಕಾಂಡ 31:13-14, 22
ಅರಣ್ಯಕಾಂಡ 15, 40, 46, 49
ಅರಣ್ಯಕಾಂಡ 15:32-36, 22
ಅರಣ್ಯಕಾಂಡ 22:12-13, 18, 25
ಅರಣ್ಯಕಾಂಡ 22 ಮತ್ತು 23, 19 ಅಧ್ಯಾಯಗಳು
ಧರ್ಮೋಪದೇಶಕಾಂಡ 4:29, 29
ಧರ್ಮೋಪದೇಶಕಾಂಡ 28:1, 28:15, 30:6-16, 25
ಧರ್ಮೋಪದೇಶಕಾಂಡ 30:6, 38
I ಸಮುವೇಲನು 10:9-12, 18, 25
I ಪೂರ್ವಕಾಲವೃತ್ತಾಂತ 10:13, 25
ಕೀರ್ತನೆಗಳು 34:9, 55
ಕೀರ್ತನೆಗಳು 51, 54, 58
ಕೀರ್ತನೆಗಳು 51:11, 58
ಕೀರ್ತನೆಗಳು 62:5-8, 65
ಕೀರ್ತನೆಗಳು 103:8, 63
ಕೀರ್ತನೆಗಳು 112:1, 55
ಕೀರ್ತನೆಗಳು 119, 53
ಕೀರ್ತನೆಗಳು 119:10, 53
ಕೀರ್ತನೆಗಳು 119:11, 53
ಕೀರ್ತನೆಗಳು 119:16, 53
ಕೀರ್ತನೆಗಳು 119:24, 53
ಕೀರ್ತನೆಗಳು 119:47, 53
ಕೀರ್ತನೆಗಳು 119:77, 53
ಕೀರ್ತನೆಗಳು 119:97, 53
ಕೀರ್ತನೆಗಳು 138:2, 3
ಕೀರ್ತನೆಗಳು 139:23-24, 24
ಜ್ಞಾನೋಕ್ತಿಗಳು 1:7, 57
ಜ್ಞಾನೋಕ್ತಿಗಳು 3:7, 55
ಪ್ರಸಂಗಿ 8:12-13, 57
ಪ್ರಸಂಗಿ 8:13, 56
ಯೆಶಾಯ 53:6, 6
ಯೆಶಾಯ 57:11-12, 56
ಯೆಶಾಯ 63:5, 6
ಯೆಶಾಯ 66:24, 19
ಯೆರೆಮೀಯ 5:24-25, 56
ಯೆರೆಮೀಯ 17:9, 30, 34
ಯೆರೆಮೀಯ 23:39-40, 24:10, 19
ಯೆರೆಮೀಯ 29:11-13, 29
ಯೆರೆಮೀಯ 29:17-19, 27
ಯೆರೆಮೀಯ 29:18-19, 28
ಯೆರೆಮೀಯ 31:8-9, 27
ಯೆರೆಮೀಯ 33:22, 61
ಯೆರೆಮೀಯ 36:1-4, 3
ಯೆರೆಮೀಯ 44:9-10, 56
ಪ್ರಲಾಪಗಳು 3:26, 65
ಪ್ರಲಾಪಗಳು 3:31-32, 63
ಯೆಹೆಜ್ಕೇಲನು 22:30, 6
ಯೆಹೆಜ್ಕೇಲನು 33:11, 19
ಯೆಹೆಜ್ಕೇಲನು 36:24-27, 34
ಯೆಹೆಜ್ಕೇಲನು 36:25-27, 30
ಯೆಹೆಜ್ಕೇಲನು 36:26, 11, 35
ಯೆಹೆಜ್ಕೇಲನು 37, 11, 35
ಯೆಹೆಜ್ಕೇಲನು 37:1-2, 10
ಯೆಹೆಜ್ಕೇಲನು 37:1-14, 17
ಯೋವೇಲನು 2:12-14, 26
ಯೋವೇಲನು 2:13, 64
ಯೋವೇಲನು। 2:13-14, 44
ಯೋವೇಲನು 2:24, 60
ಯೋನನು 3, 44
ಯೋನನು 3:5, 38
ಯೋನನು 3:8-10, 44

ಯೋನನು 3:9, 26, 29
ಯೋನನು 3:10, 15
ಹಬಕ್ಕೂಕನು 2:14, 61
ಜೆಫನ್ಯನು 2:3, 44, 66
ಮತ್ತಾಯ 4:14, 8:17, 12:17, 43
ಮತ್ತಾಯ 5:22, 19
ಮತ್ತಾಯ 7:22, 15
ಮತ್ತಾಯ 9:16, 11
ಮತ್ತಾಯ9:17, 11
ಮತ್ತಾಯ 15:19, 9, 34
ಮತ್ತಾಯ23, 28
ಮತ್ತಾಯ 27:41-44, 62
ಮತ್ತಾಯ 27:46, 7
ಮಾರ್ಕ 4:33-34, 48
ಮಾರ್ಕ 7:21, 30
ಮಾರ್ಕ 13:13, 32
ಲೂಕ 13:24, 20
ಲೂಕ 17:12-19, 63
ಲೂಕ 18:13, 26
ಲೂಕ 18:13-14, 64
ಲೂಕ 19:2-8, 63
ಲೂಕ 19:41, 18
ಲೂಕ 23:9-4-3, 5
ಲೂಕ 23:39-43, 62, 63
ಯೋಹಾನ 3:3, 14
ಯೋಹಾನ 3:3 ಮತ್ತು 7, 11
ಯೋಹಾನ 3:5, 13
ಯೋಹಾನ 3:16, 35
ಯೋಹಾನ 4:4-42, 63
ಯೋಹಾನ 4:10-15, 14
ಯೋಹಾನ 6:37, 5
ಯೋಹಾನ 6:44, 18, 19
ಯೋಹಾನ 7:38, 14
ಯೋಹಾನ 8, 5
ಯೋಹಾನ 8:1-11, 63
ಯೋಹಾನ 8:9, 18, 24
ಯೋಹಾನ 8:44, 47
ಯೋಹಾನ 11, 12
ಯೋಹಾನ 11:39, 10, 17, 35
ಯೋಹಾನ 14:21, 57
ಯೋಹಾನ 14:23, 11, 57
ಅಪೋಸ್ತಲರ ಕೃತ್ಯಗಳು 8:13-23, 34
ಅಪೋಸ್ತಲರ ಕೃತ್ಯಗಳು 9:31, 10:35, 57
ಅಪೋಸ್ತಲರ ಕೃತ್ಯಗಳು 16:31, 35
ರೋಮಾಪುರದವರಿಗೆ 2:11, 5
ರೋಮಾಪುರದವರಿಗೆ 2:13-15, 1
ರೋಮಾಪುರದವರಿಗೆ 2:14-15, 18, 24
ರೋಮಾಪುರದವರಿಗೆ 2:15, 19
ರೋಮಾಪುರದವರಿಗೆ 3, 35
ರೋಮಾಪುರದವರಿಗೆ 3:10-12, 4, 17
ರೋಮಾಪುರದವರಿಗೆ 4:3, 39, 42
ರೋಮಾಪುರದವರಿಗೆ 4:9, 39
ರೋಮಾಪುರದವರಿಗೆ 4:11, 37, 38
ರೋಮಾಪುರದವರಿಗೆ 7:21-24, 51
ರೋಮಾಪುರದವರಿಗೆ 8:9, 52
ರೋಮಾಪುರದವರಿಗೆ 8:35-39, 51
ರೋಮಾಪುರದವರಿಗೆ 9:15, 5
ರೋಮಾಪುರದವರಿಗೆ 9:31-32, 25
ರೋಮಾಪುರದವರಿಗೆ 10:9-10, 33
ರೋಮಾಪುರದವರಿಗೆ 10:13, 29, 31
ರೋಮಾಪುರದವರಿಗೆ 10:17, 14, 28, 61
I ಕೊರಿಂಥದವರಿಗೆ 2:13, 29
I ಕೊರಿಂಥದವರಿಗೆ 15, 32
I ಕೊರಿಂಥದವರಿಗೆ 15:52, 11
II ಕೊರಿಂಥದವರಿಗೆ 2:4, 44
II ಕೊರಿಂಥದವರಿಗೆ 5:8, 13
II ಕೊರಿಂಥದವರಿಗೆ 5:17, 11
II ಕೊರಿಂಥದವರಿಗೆ 11:7, 44
II ಕೊರಿಂಥದವರಿಗೆ 11:13-15, 46
II ಕೊರಿಂಥದವರಿಗೆ11:14, 47

II ಕೊರಿಂಥದವರಿಗೆ 11:15, 47
II ಕೊರಿಂಥದವರಿಗೆ 13:5, 23
ಗಲಾತ್ಯದವರಿಗೆ 2, 36
ಗಲಾತ್ಯದವರಿಗೆ 2:16, 15, 37, 42, 44
ಗಲಾತ್ಯದವರಿಗೆ 3, 36
ಗಲಾತ್ಯದವರಿಗೆ 3:2, 36, 37
ಗಲಾತ್ಯದವರಿಗೆ 3:6, 39, 42
ಗಲಾತ್ಯದವರಿಗೆ 3:11, 37
ಗಲಾತ್ಯದವರಿಗೆ 3:13, 7
ಗಲಾತ್ಯದವರಿಗೆ 3:16, 5 1
ಎಫೆಸದವರಿಗೆ 1:3-5, 4
ಎಫೆಸದವರಿಗೆ 1:4, 5
ಎಫೆಸದವರಿಗೆ 1:13, 3 7-38
ಎಫೆಸದವರಿಗೆ 2:1-3, 1 3
ಎಫೆಸದವರಿಗೆ 2:3, 9
ಎಫೆಸದವರಿಗೆ 2:8, 37
ಎಫೆಸದವರಿಗೆ 2:8-9, 15
ಎಫೆಸದವರಿಗೆ 6:9, 5
ಫಿಲಿಪ್ಪಿಯವರಿಗೆ 2:12, 54, 57
ಫಿಲಿಪ್ಪಿಯವರಿಗೆ 3:20, 52
ಫಿಲಿಪ್ಪಿಯವರಿಗೆ 4:6, 65
ಫಿಲಿಪ್ಪಿಯವರಿಗೆ 4:7, 65
ಕೊಲೊಸ್ಸದವರಿಗೆ 1:12-13, 52
ಕೊಲೊಸ್ಸದವರಿಗೆ 3:25, 5
I ಥೆಸಲೋನಿಕದವರಿಗೆ 1:3, 16, 40
I ಥೆಸಲೋನಿಕದವರಿಗೆ 4, 13
II ಥೆಸಲೋನಿಕದವರಿಗೆ 1:11, 16, 40
ಇಬ್ರಿಯರಿಗೆ 4:11, 20
ಯಾಕೋಬನು 2:23, 42
I ಪೇತ್ರನು 1:5, 32
I ಪೇತ್ರನು 1:23, 11
I ಪೇತ್ರನು 2:17, 57
II ಪೇತ್ರನು 1:21, 3
II ಪೇತ್ರನು 2:15-16, 25
II ಪೇತ್ರನು 3:18, 52, 54
I ಯೋಹಾನನು 2:3-5, 54
I ಯೋಹಾನನು 2:3-6, 24
I ಯೋಹಾನನು 3:9, 50
I ಯೋಹಾನನು 4:18, 56, 57
ಪ್ರಕಟನೆ 7:9, 59, 60
ಪ್ರಕಟನೆ 7:13-14, 60
ಪ್ರಕಟನೆ 13:8, 8, 9, 17
ಪ್ರಕಟನೆ 19:11, 37, 45
ಪ್ರಕಟನೆ 20:14-15, 10

ಇಲ್ಲಿ ನಮ್ಮ ಅಂತರ್ಜಾಲ ತಾಣವನ್ನು ಸಂದರ್ಶಿಸಿ

www.familyradio.com

*ಫ್ಯಾಮಿಲಿ ರೇಡಿಯೋದ ಬೈಬಲ್ ಆಧಾರಿತ ಕಾರ್ಯಕ್ರಮಗಳು ಅಂತರ್ಜಾಲದಲ್ಲಿ ಲಭ್ಯವಿದೆ,*
*ದಿನದ 24 ಗಂಟೆಗಳ ಕಾಲ, ವಾರದ ಏಳೂ ದಿನಗಳಲ್ಲಿ, ನಮ್ಮ ಅಂತರ್ಜಾಲ ತಾಣವು ಕಾರ್ಯಕ್ರಮ ಸೂಚಿ, ಹ್ರಸ್ವ ತರಂಗದ ವೇಳಾಪಟ್ಟಿ, ಬೈಬಲ್ ನ ಅಧ್ಯಯನ ಮತ್ತು ಹಲವಾರು ಭಾಷೆಗಳಲ್ಲಿ ಬೈಬಲ್ ನ ಶ್ರಾವ್ಯ ಮತ್ತು ಗದ್ಯದ ನೋಟವನ್ನು ಹೊಂದಿರುತ್ತದೆ.*

***ನಮ್ಮ ಅಂತರ್ಜಾಲ ತಾಣದಿಂದ ಫ್ಯಾಮಿಲಿ ರೇಡಿಯೋ ಅನ್ನು ಕೇಳಬಹುದು ಅಥವ ಫ್ಯಾಮಿಲಿ ರೇಡಿಯೋ ಪ್ರಕಾಶನದ ಹೆಚ್ಚಿನ ಎಲ್ಲಾ ಬೈಬಲ್ ನ ಅಧ್ಯಯನ ಸಾಮಗ್ರಿಗಳ ಶ್ರಾವ್ಯ ಮತ್ತು ಗದ್ಯರೂಪವನ್ನು ಡೌನ್ ಲೋಡ್ ಮಾಡಿಕೊಳ್ಳಬಹುದು..***

**ನಮ್ಮ ಸುವಾರ್ತೆಯ ಪ್ರಸಾರದ ಉಚಿತ ಕಾರ್ಯಕ್ರಮ ಸೂಚಿಯನ್ನು ಪಡೆಯಲು,**
**ನಮ್ಮ ಬೈಬಲ್ ಸ್ಕೂಲ್ ನ ಅಂಚೆತೆರಪಿನ ಶಿಕ್ಷಣದ ವಿವರಗಳಿಗಾಗಿ,**
**ಉಚಿತ ಪುಸ್ತಕ ಮತ್ತು ಸಾಮಗ್ರಿಗಳಿಗಾಗಿ ಇಲ್ಲಿಗೆ ಬರೆಯಿರಿ:**

**ಫ್ಯಾಮಿಲಿ ರೇಡಿಯೋ**
**ಓಕ್ ಲ್ಯಾಂಡ್, ಸಿ ಎ 94621, ಯು ಎಸ್ ಎ**

*ನಮ್ಮ ಇ-ಮೇಲ್ ವಿಳಾಸ International@familyradio.com.*